# ಹೆಣ್ಣಿನ ಬದುಕಿನಲ್ಲಿ ತಾಯ್ತನ

## ಒಂದು ಸಾಮಾಜಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮಹಿಳಾ ಅಧ್ಯಯನ ವಿಭಾಗಕ್ಕೆ
ಎಂ.ಫಿಲ್. ಉಪಾಧಿ ಪದವಿಗಾಗಿ ಸಲ್ಲಿಸಿದ ಪ್ರಬಂಧ)

ಸಂಶೋಧಕಿ

ಚಂದ್ರಕ್ಕ ಬಿ.

[illegible]ರು

[illegible]



ಮಹಿಳಾ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಏಪ್ರಿಲ್ ೨೦೦೪

# ಹೆಣ್ಣಿನ ಬದುಕಿನಲ್ಲಿ ತಾಯ್ತನ

## ಒಂದು ಸಾಮಾಜಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಮಹಿಳಾ ಅಧ್ಯಯನ ವಿಭಾಗಕ್ಕೆ
ಎಂ.ಫಿಲ್.ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ

ಚಂದ್ರಪ್ಪ ಡಿ.

ಮಾರ್ಗದರ್ಶಕರು

ಡಾ. ಎಚ್.ಎಸ್.ಶ್ರೀಮತಿ

ಪ್ರಾಧ್ಯಾಪಕರು

ಮಹಿಳಾ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಏಪ್ರಿಲ್ ೨೦೦೩

# ಪ್ರಮಾಣ ಪತ್ರ

ಹೆಣ್ಣಿನ ಬದುಕಿನಲ್ಲಿ ತಾಯ್ತನ : ಒಂದು ಸಾಮಾಜಿಕ ಅಧ್ಯಯನ ಎಂಬ ಶೀರ್ಷಿಕೆಯ ನಿಬಂಧವನ್ನು ಡಾ. ಎಚ್.ಎಸ್.ಶ್ರೀಮತಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಭಾಷಾ ನಿಕಾಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

30/04/03.

ಚಂದ್ರಪ್ಪ ಡಿ.
ಎಂ.ಫಿಲ್.ವಿದ್ಯಾರ್ಥಿ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : 30/04/03.

# ಪ್ರಮಾಣ ಪತ್ರ

ಹೆಣ್ಣಿನ ಬದುಕಿನಲ್ಲಿ ತಾಯ್ತನ : ಒಂದು ಸಾಮಾಜಿಕ ಅಧ್ಯಯನ ಎಂಬ ಶೀರ್ಷಿಕೆಯ ನಿಬಂಧವನ್ನು ಡಾ. ಎಚ್.ಎಸ್.ಶ್ರೀಮತಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಭಾಷಾ ನಿಕಾಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

30/04/03.

**ಚಂದ್ರಪ್ಪ ಡಿ.**
ಎಂ.ಫಿಲ್.ವಿದ್ಯಾರ್ಥಿ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : 30/04/03.

## ಮಾರ್ಗದರ್ಶಕರ ಪ್ರಮಾಣಪತ್ರ

**ಹೆಣ್ಣಿನ ಬದುಕಿನಲ್ಲಿ ತಾಯ್ತನ : ಒಂದು ಸಾಮಾಜಿಕ ಅಧ್ಯಯನ** ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಶ್ರೀ ಚಂದ್ರಪ್ಪ ಡಿ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

**ಡಾ. ಎಚ್.ಎಸ್. ಶ್ರೀಮತಿ**
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಸ್ಥಳ** : ವಿದ್ಯಾರಣ್ಯ
**ದಿನಾಂಕ** : 30.4.03.

# ಪರಿವಿಡಿ

## ಅಧ್ಯಾಯ ೧

# ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

ಹೆಣ್ಣು ತನ್ನ ಬದುಕಿನಲ್ಲಿ ಗರ್ಭಧರಿಸಿ, ಗರ್ಭಾವಸ್ಥೆಯಲ್ಲಿ ಮಗುವನ್ನು ಒಂಭತ್ತು ತಿಂಗಳು ಪೋಷಿಸಿ ಈ ಭೂಮಿಗೆ ಮಗುವನ್ನು ಕೊಡುತ್ತದೆ. ಮಗುವನ್ನು ಕೊಡುವಲ್ಲಿ ಗಂಡಸಿನ ಮತ್ತು ಹೆಂಗಸಿನ ಪಾತ್ರ ಬಹುಮುಖ್ಯವಾದುದಾಗಿರುತ್ತದೆ. ಗಂಡಸಿನ ವಿರ್ಯಾಣು ಮತ್ತು ಹೆಂಗಸಿನ ಅಂಡಾಣುಗಳು ಎರಡು ಒಂದುಗೂಡಿ ಭ್ರೂಣವು ಉತ್ಪತ್ತಿಯಾಗುತ್ತದೆ. ಉತ್ಪತ್ತಿಯಾದ ಭ್ರೂಣಕ್ಕೆ ಸ್ವತಂತ್ರವಾಗಿ ಜೀವಿಸುವ ಶಕ್ತಿ ಇರುವುದಿಲ್ಲ. ಭ್ರೂಣವು ಸುಮಾರು ಒಂಭತ್ತು ತಿಂಗಳುಗಳ ಕಾಲ ಬೆಳೆದು ದೊಡ್ಡದಾದ ನಂತರ ಸ್ವತಂತ್ರವಾಗಿ ಜೀವಿಸುವ ಹಂತಕ್ಕೆ ಬಂದಾಗ ತಾಯಿಯ ಗರ್ಭಾಶಯದಿಂದ ಭೂಮಿಗೆ ಕಾಣಿಸಿಕೊಳ್ಳುತ್ತದೆ.

ತಾಯ್ತನದ ಮುಂದುವರೆಯುವಿಕೆಯ ಪ್ರಕ್ರಿಯೆಯು, ನಿಸರ್ಗ ಕೊಡುಗೆಗಳಲ್ಲಿ ಒಂದು ಅದ್ಭುತವಾದ ಪ್ರಕ್ರಿಯೆಯಾಗಿದೆ. ಮಗುವಿನ ಹುಟ್ಟು ಎನ್ನುವುದು ಕೇವಲ ಭೌತಿಕವಾದುದಲ್ಲ. ಅದು ಪ್ರಕೃತಿಯು ನಡೆಸುವ ಮಹತ್ವದ ಸೃಷ್ಟಿಕ್ರಿಯೆಯಲ್ಲಿ ಒಂದಾಗಿದೆ. ಎಷ್ಟೋ ಜೀವಿಗಳಲ್ಲಿ ಏಕಲಿಂಗಿ ಪ್ರಜನನ ಕ್ರಿಯೆಯು ನಡೆಯುತ್ತದೆ. ಆದರೆ ಮಾನವ ಜನಾಂಗಗಳಲ್ಲಿ ದ್ವಿಲಿಂಗಿಗಳ ಪ್ರಜನನ ಕ್ರಿಯೆಯು ಅವಶ್ಯಕವಾಗಿರುತ್ತದೆ. ವಯಸ್ಕರಾದ ಹೆಣ್ಣು ಗಂಡುಗಳ ದೈಹಿಕ ಮಿಲನವು ತಾಯ್ತನದ ಮೊದಲ ಹಂತವಾಗಿರುತ್ತದೆ. ಹೆಣ್ಣು ಗಂಡುಗಳ ದೇಹಗಳೆಲ್ಲಿ ಪೂರ್ವಭಾವಿಯಾಗಿ ಗಂಡಿನ ವಿರ್ಯಾಣುಗಳು ಆರೋಗ್ಯಕರವಾಗಿ ಶಕ್ತಿಶಾಲಿಯಾಗಿರಬೇಕು. ಅದರಂತೆ ಹೆಣ್ಣಿನ ಗರ್ಭಾಶಯವು ಒಂದು ಜೀವಸೃಷ್ಟಿಗೆ ಅವಶ್ಯಕವಾದ ಪರಿಸರವನ್ನು ಸಿದ್ಧಪಡಿಸಿಕೊಂಡು ತನ್ನಲ್ಲಿರುವ ಅಂಡಾಣುವನ್ನು ಬಿಡುಗಡೆ ಮಾಡಿ ವಿರ್ಯಾಣುವಿನ ಬರುವಿಕೆಗಾಗಿ ಕಾಯುತ್ತಿರುತ್ತದೆ. ಇದೆಲ್ಲ ಪ್ರಕೃತಿಯ ನಿಯಮವಾಗಿರುತ್ತದೆ. ಹೆಣ್ಣು ಜೀವನದಲ್ಲಿನ ಸಂಪನ್ಮೂಲವನ್ನು ಪ್ರಕೃತಿಯು ಮುಖ್ಯವಾದುದೆಂದು ಪರಿಗಣಿಸಿ ಬಳಕೆ ಮಾಡಿಕೊಳ್ಳುತ್ತದೆ.

ಹೆಣ್ಣು ಮೊದಲ ಸಲಕ್ಕೆ ಋತುಮತಿಯಾಗುವ ಹೊತ್ತಿಗಾಗಲೇ ಅವಳು ತಾಯ್ತನವನ್ನು ಪಡೆಯುವ ಶಕ್ತಿಯನ್ನು ಹೊಂದಿರುತ್ತಾಳೆ. ಋತುಚಕ್ರದ ಆವರ್ತದಲ್ಲಿ ತಿಂಗಳಿಗೆ ಒಂದೊಂದಾಗಿ ಸರಿಯಾಗಿ ಅಂಡಾಣುವನ್ನು ಹೊರಚಲ್ಲುತ್ತದೆ. ಹೊರಚೆಲ್ಲಿದಂತ ಸಂದರ್ಭದಲ್ಲಿ ಜೀವವೊಂದನ್ನು ಆಹ್ವಾನಿಸಿ ಮುಂದಿನ ಒಂಭತ್ತು ಮಾಸಗಳ ಕಾಲ ಅದಕ್ಕೊಂದು ರೂಪವನ್ನು ಒದಗಿಸಿ ಸಂರಕ್ಷಿಸುವ ಪ್ರಕ್ರಿಯೆಗೆ ಅವಶ್ಯಕವಾದ ಸಿದ್ಧತೆಗಳೆಲ್ಲವೂ ನಡೆಯುತ್ತವೆ. ಒಂದು ವೀರ್ಯಾಣುವನ್ನು ಅಂಡಾಣು ಸ್ವೀಕರಿಸುತ್ತದೆ ಎನ್ನುವ ಮಟ್ಟದಲ್ಲಿ ನಿಸರ್ಗವು ಅದರ ಮುಂದಿನ ಎಲ್ಲ ಜವಬ್ದಾರಿಗಳನ್ನು ಹೆಣ್ಣಿಗೆ ವಹಿಸುತ್ತದೆ. ಮಗುವಿನ ತಾಯ್ತನದ ಮುಖ್ಯ ಕರ್ತವ್ಯವಾಗಿ ಹೆಣ್ಣು ದೇಹವನ್ನು ನಿಸರ್ಗವು ಆಯ್ಕೆ ಮಾಡುತ್ತದೆ. 'ತಾಯಿ ಮಾತ್ರವೇ ಸತ್ಯ, ತಂದೆ ಕೇವಲ ಪ್ರಮಾಣ ಮಾತ್ರ' ಎಂಬ ಮಾತು ವಾಸ್ತವದಲ್ಲಿ ಸತ್ಯವಲ್ಲ.

ವಿರ್ಯಾಣುವಿನಷ್ಟೆ ಅಂಡಾಣು ಪ್ರಧಾನವಾದ ಪಾತ್ರವಹಿಸುತ್ತದೆ. ಹಾಗಾಗಿ ತಾಯಿ ತಂದೆಯರು ಸಮಾನರಾಗಿರುತ್ತಾರೆ. ಆದರೆ ಪ್ರಕೃತಿಯು ನಿರ್ವಹಿಸುವ ಮುಖ್ಯ ಹೊಣೆಗಾರಿಕೆ ಹಾಗೂ ದೀರ್ಘಶ್ರಮಗಳಿಗೆ ಪ್ರಕೃತಿಯು ನೀಡುವ ಸನ್ಮಾನ ಎಂಬಂತೆ ತಾಯಿ ಎಂಬ ಸತ್ಯ ಗುರುತಿಸುವಷ್ಟು ತಂದೆ ಎಂಬ ಸತ್ಯ ಕಾಣುವುದಿಲ್ಲ. ಆದರೂ ಸತ್ಯವನ್ನು ಮಗುವಿಗೆ ಕಾಣಿಸಬಲ್ಲವಳು ತಾಯಿಯಾಗಿರುತ್ತಾಳೆ.[೧]

ನಿಸರ್ಗವು ಮಗುವಿನ ಸೃಷ್ಟಿಯಲ್ಲಿ ಸ್ತ್ರೀ-ಪುರುಷರ ಅಂಶವನ್ನು ಸಮಾನವಾಗಿಯೇ ಕಂಡರೂ ಸೂಕ್ತ ಪ್ರಕ್ರಿಯೆಯಲ್ಲಿ ಮಗುವಾಗಿಸುವ ಶಕ್ತಿ ಇರುವುದು ಹೆಣ್ಣಿನ ಗರ್ಭಾಶಯಕ್ಕೆ ಮಾತ್ರ ಎನ್ನುವುದನ್ನು ನಿಸರ್ಗದ ಸಹಜ ಕ್ರಿಯೆಗಳಿಂದ ತಿಳಿದುಕೊಳ್ಳಬಹುದು. ಅಲ್ಲದೆ ಅದನ್ನು(vision) ನೋಡಬಹುದು. ಸಹಜವಾದ ಪ್ರಕೃತಿ ನಿಯಮದಲ್ಲಿ ಹೆಣ್ಣು ಗಂಡುಗಳು ವಿಭಿನ್ನರೇ ಹೊರತು ಅಸಮಾನರಲ್ಲ ಅವರಿಗೆ ಅವರವರದೇ ಆದ ಗುಣಲಕ್ಷಣಗಳನ್ನು ಹೊಂದಿದವರಾಗಿರುತ್ತಾರೆ. ಪುರುಷನಿಗೆ ನಿಸರ್ಗ ನಿಯಮಗಳಿಂದ ತಿಳಿದುಕೊಳ್ಳುವ ಅದನ್ನು ಅನುಸರಿಸುವ ಸರಳ ಸ್ವಭಾವವನ್ನು ಹೊಂದಿದವನಾಗಿ ತನ್ನದೇ ಆದ ನೀತಿನಿಯಮಗಳನ್ನು ಅನುಸರಿಸುವ ಪ್ರತ್ಯೇಕವಾದ ವ್ಯವಸ್ಥೆಯನ್ನೇ ನಿರ್ಮಿಸಿದ್ದಾನೆ.

ಸಾಮಾಜಿಕ ಸಂಸ್ಥೆಗಳಲ್ಲಿ ವಿವಾಹವು ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಸಂತಾನೋತ್ಪತ್ತಿ ಮತ್ತು ಕಾಮತೃಪ್ತಿಯ ದೈಹಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಉದ್ದೇಶಗಳಿಗಾಗಿ ಸ್ತ್ರೀ-ಪುರುಷರು ಶಾಶ್ವತವಾದ ರೀತಿಯಲ್ಲಿ ಸಂಬಂಧವನ್ನು ಬೆಳೆಸುವುದಕ್ಕೆ ವಿವಾಹ ಎಂದು ಕರೆಯುತ್ತಾರೆ. ಆದರೆ ವಿವಾಹವನ್ನು ಹಲವಾರು ಸಮಾಜ ಶಾಸ್ತ್ರಜ್ಞರು ತಮ್ಮದೇ ಆದ ರೀತಿಯಲ್ಲಿ ವಿವರಿಸಿದ್ದಾರೆ.

'ವಿವಾಹವು ಪತಿ-ಪತ್ನಿಯರು ಪರಸ್ಪರ ಹೊಂದಿರಬೇಕಾದ ಹಕ್ಕು ಕರ್ತವ್ಯ ಹಾಗೂ ಸವಲತ್ತುಗಳನ್ನು ವ್ಯಾಖ್ಯಾನಿಸುವ ನಿಯಮ ನಿಬಂಧನೆಗಳನ್ನು ಒಳಗೊಂಡಿದೆ' ಎನ್ನುವ ಅಭಿಪ್ರಾಯವನ್ನು ಲಂಡ್ ಬರ್ಗ್ ಎಂಬ ಸಮಾಜಶಾಸ್ತ್ರನದಾಗಿರುತ್ತದೆ. ಹಾಗೆಯೇ ಮತ್ತೊಬ್ಬ ಸಮಾಜಶಾಸ್ತ್ರಜ್ಞನನಾದ ಗಿಲಿನ್ ಮತ್ತು ಗಿಲಿನ್ ರ ಒಟ್ಟಾರೆ ಅಭಿಪ್ರಾಯ ಈ ರೀತಿಯಾಗಿರುತ್ತದೆ. "ಸಂತಾನೋತ್ಪತ್ತಿ ಮಾಡುವ ಕುಟುಂಬವನ್ನು ಸ್ಥಾಪಿಸಲು ಸಮಾಜದಿಂದ ಮನ್ನಣೆ ಪಡೆದ ಮಾರ್ಗವೇ ವಿವಾಹ"[೨] ಸಮಾಜಶಾಸ್ತ್ರಜ್ಞರು ಸಹ ಮಹಿಳೆಗೆ ತನ್ನ ಜೀವಿತಾವಧಿಯಲ್ಲಿ ವಿವಾಹವು ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತದೆ ಎನ್ನುವ ಅಭಿಪ್ರಾಯಗಳನ್ನು ಹೊಂದಿದವರಾಗಿರುತ್ತಾರೆ.

ವಿವಾಹವೆನ್ನುವ ಸಾಮಾಜಿಕ ಸಂಸ್ಥೆಯಿಂದ ಹಕ್ಕುಗಳನ್ನು ಪಡೆದಾಗ ಅವಳಿಗೆ ತಾಯ್ತನವನ್ನು ಪಡೆಯುವಲ್ಲಿ ಯಾವುದೇ ರೀತಿಯ ನಿರ್ಬಂಧನೆಗಳಿರುವುದಿಲ್ಲ. ಸಮಾಜದಲ್ಲಿ ತಾಯ್ತನಕ್ಕೆ ಸಿಗತಕ್ಕಂತ ಮೌಲ್ಯಗಳು ಎನಿಸಿದ ಮಾಂಗಲ್ಯಧಾರಣೆಯು ತಾಯ್ತನವನ್ನು ಪಡೆಯುವಲ್ಲಿ ಬಹುಮುಖ್ಯವಾದ ಪಾತ್ರವನ್ನು ವಹಿಸಿದೆ.

ವಿವಾಹವನ್ನು ಸ್ತ್ರೀಯರಿಗೆ ಪುರುಷ ಪ್ರಧಾನರು ಹಾಕಿಕೊಟ್ಟ ಬಂಧನವಾದರೂ ಸಹ ಅವಳಿಗೆ ತಾಯ್ತನವನ್ನು ಪಡೆಯುವ ಸಂದರ್ಭದಲ್ಲಿ ಬಂಧನವಾಗಿ ಕಂಡುಬರುವುದಿಲ್ಲ. ತಾಯ್ತನವನ್ನು ಪಡೆಯಬೇಕಾದರೆ ಸಾಮಾಜಿಕ ಮನ್ನಣೆಯನ್ನು ಪಡೆದುಕೊಂಡವಳಾಗಿರಬೇಕಾಗುತ್ತದೆ. ಅವಳು ತನ್ನ ಗಂಡನಲ್ಲದೆ ಬೇರೆ ಯಾರೊಬ್ಬರಿಂದಲೂ ಲೈಂಗಿಕತೆಯನ್ನು ಹೊಂದಬಾರದೆನ್ನುವ ಉದ್ದೇಶದಿಂದ ಈ ವಿವಾಹವೆನ್ನುವ ಪಟ್ಟವನ್ನು ಕಟ್ಟಿಕೊಳ್ಳುವಂತೆ ಮಾಡಿದ್ದಾರೆ. ಅವಳು ತನ್ನ ಗಂಡನು ಹೇಳಿದ ರೀತಿಯಲ್ಲಿ ನಡೆದುಕೊಳ್ಳಬೇಕಾಗುತ್ತದೆ. ಗಂಡನೆನಿಸಿಕೊಂಡವನು ಎಂತವನೇ ಆಗಿರಲಿ ಅವನೊಂದಿಗೆ ತನ್ನ ಸಂಸಾರವನ್ನು ಮುಂದುವರೆಸಿಕೊಂಡು ಹೋಗಬೇಕಾಗುವ ಪ್ರಸಂಗವು ವಿವಾಹ ಸಂಸ್ಥೆಯಿಂದ ಕಂಡುಬರುತ್ತದೆ.

ವಿವಾಹ ಎನ್ನುವ ಸಾಮಾಜಿಕ ಸಂಸ್ಥೆಗೆ ವಿರುದ್ಧವಾಗಿ ಹೆಣ್ಣು ತಾಯ್ತನವನ್ನು ಪಡೆಯುವಂತಿರಲಿಲ್ಲ. ಹಾಗೇನಾದರೂ ತಾಯ್ತನವನ್ನು ಪಡೆದುಕೊಂಡಿದ್ದೇ ಆದರೆ ಸ್ತ್ರೀಯು ಸಾಮಾಜಿಕವಾಗಿ ಕಷ್ಟಸುಖಗಳನ್ನು ಅವಳೇ ಅನುಭವಿಸಬೇಕಾಗುವ ಪ್ರಸಂಗ ಬರುತ್ತದೆ. ಅವಿವಾಹಿತಳಾಗಿ ತಾಯ್ತನವನ್ನು ಪಡೆದಿದ್ದಾಳೆ ಎನ್ನುವಂತಹ ಸಮಸ್ಯೆಗಳು ಕಂಡುಬರಬಾರದೆನ್ನುವ ಕಾರಣದಿಂದಲೇ ಅವಳನ್ನು ವಿವಾಹವೆನ್ನುವ ನಿರ್ಬಂಧನೆಯೊಳಗೆ ಸಿಲುಕಿಸಿ ತಾಯ್ತನವನ್ನು ಪಡೆಯುವಲ್ಲಿ ಯಾವುದೇ ರೀತಿಯ ನಿರ್ಬಂಧನೆಗಳನ್ನು ಹೇರಲಾಗುವುದಿಲ್ಲ.

ವಿವಾಹವು ಗಂಡು-ಹೆಣ್ಣುಗಳ ಗಂಡ ಹೆಂಡತಿಯರಾಗುವುದಕ್ಕೆ ಮತ್ತು ಮಾನವನ ಲೈಂಗಿಕ ಜೀವನಕ್ಕೆ ಅಧಿಕೃತವಾಗಿ ಅಧಿಕಾರವನ್ನು ಕೊಟ್ಟು ಅವನ ಹೊಣೆಗಾರಿಕೆಯನ್ನು ಮಹಿಳೆಯ ಮೇಲೆ ಹೇರಲು ಈ ವಿವಾಹ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

ಈ ವಿವಾಹ ಸಂಸ್ಥೆಯಿಂದ ಮಹಿಳೆಗೆ ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ತುಂಬಾ ಗೌರವಸಿಗುತ್ತದೆ. ಇದಕ್ಕಿಂತ ಹೆಚ್ಚಾಗಿ ಹೇಳಬೇಕೆಂದರೆ, ಮುಖ್ಯವಾಗಿ ಅವಳು ತಾಯ್ತನವನ್ನು ಪಡೆದುಕೊಂಡಾಗ ಮಾತ್ರ ಹೆಚ್ಚಿನ ರೀತಿಯಲ್ಲಿ ಗೌರವಿಸಲಾಗಿದೆ ಎಂದು ಹೇಳಬಹುದು. ಹೆಣ್ಣಿನ ಜೀವನದ ಪರಮೊದ್ಧೇಶವಿರುವುದೇ ತಾಯ್ತನವನ್ನು ಪಡೆಯಬೇಕೆನ್ನುವ ಆಸೆ ಹಂಬಲ ಇವಳಲ್ಲಿ ಅಡಗಿರುವ ಈ ಆಸೆ ಅಕಾಂಕ್ಷೆಗಳು ತಾಯ್ತನವನ್ನು ಪಡೆದುಕೊಂಡಾಗ ಮಾತ್ರ ನೆರವೇರುತ್ತವೆ. ಇಲ್ಲದಿದ್ದರೆ ಹೆಣ್ಣಿನ ಆಸೆಗಳು ಆಸೆಗಳಾಗಿಯೇ ಬೆಟ್ಟಗುಡ್ಡಗಳಂತೆ ಬೆಳೆದು ದೊಡ್ಡವಾಗಿ ಕಾಣುವ ಸ್ಥಿತಿ ಕೆಲವು ಹೆಂಗಸರಲ್ಲಿ ಕಂಡುಬರುತ್ತದೆ. ತಾಯ್ತನದ ಆಸೆ ಆಕಾಂಕ್ಷೆಗಳು ಈಡೇರುವಲ್ಲಿ ಹೆಣ್ಣಿನ ಪಾತ್ರವೊಂದೇ ಮುಖ್ಯವಲ್ಲ. ಇದರಲ್ಲಿ ಗಂಡಿನ ಪಾತ್ರವು ಮುಖ್ಯವಾಗಿರುತ್ತದೆ. ಆದರೆ ಹೆಚ್ಚಾಗಿ ಸಮಾಜದಲ್ಲಿ ಗೋಚರಿಸುವಂತಹುದು ಹೆಣ್ಣಿನ ಪ್ರತಿರೂಪ. ಇವಳಿಗೆ ಮಕ್ಕಳ ಫಲವೇ ಇಲ್ಲವೆಂದು ಹೀಯಾಳಿಸುತ್ತಾರೆ. ಆದರೆ ಇಲ್ಲಿ ಗಂಡಿನ ಬಗ್ಗೆ ಯಾರು

ಆಲೋಚಿಸುವುದಿಲ್ಲ. ಏಕೆಂದರೆ ಪುರುಷ ಪ್ರಧಾನ ಸಮಾಜವಾಗಿರುವುದರಿಂದ ಪುರುಷರು ಹೇಳಿದ್ದೆ ಅಂತಿಮವೆನ್ನುವ ಹಾಗೆ ಇಡೀಸಮಾಜವೇ ಆವರಿಸಿಕೊಂಡು ಬಿಟ್ಟಿರುತ್ತದೆ.

ವಿವಾಹವೆನ್ನುವ ಸಂಸ್ಥೆಯಿಂದ ಕುಟುಂಬವು ಹುಟ್ಟಿಕೊಂಡಿದೆ ಎಂದು ಹೇಳಬಹುದು ಕುಟುಂಬವು ತಂದೆ, ತಾಯಿ, ಪತ್ನಿ ಮಕ್ಕಳನ್ನು ಒಳಗೊಂಡಿರುತ್ತದೆ. ಕುಟುಂಬದಲ್ಲಿ ಪುರುಷರದೇ ಮೇಲ್ ಸ್ತರವಾಗಿ ಕಂಡುಬರುತ್ತದೆ. ಕುಟುಂಬದ ಯಜಮಾನನು ಪುರುಷನೇ ಆಗಿರುವುದರಿಂದ ಪುರುಷನು ಹೇಳಿದಂತೆ ಕುಟುಂಬವು ಮುಂದುವರೆಯುತ್ತಿರುತ್ತದೆ. ಕುಟುಂಬದಲ್ಲಿ ದುಡಿಯುವ ಪ್ರತಿಯೊಬ್ಬ ಸದಸ್ಯನು/ಳು ಕುಟುಂಬದ ಯಜಮಾನನಿಗೆ ದುಡಿದಿದ್ದನ್ನು ತಂದುಕೊಡಬೇಕಾಗುತ್ತದೆ. ಆಗ ಆ ಕುಟುಂಬದ ಯಜಮಾನನು ಮನೆಯ ವ್ಯವಹಾರವನ್ನೆಲ್ಲ ಅವನೇ ನೋಡಿಕೊಳ್ಳುವಂತವನಾಗುತ್ತಾನೆ. ಕುಟುಂಬದಲ್ಲಿ ಹೆಣ್ಣು ಎಷ್ಟೇ ಬುದ್ಧಿವಂತಳಾದರೂ ಸಹ ಪುರುಷನು ಹೇಳಿದಂತೆ ಕೇಳಬೇಕಾಗುತ್ತದೆ. ಕುಟುಂಬದ ಆಸ್ತಿಯಲ್ಲಿ ಅವನಿಗಿರುವ ಅಧಿಕಾರವು ಸ್ತ್ರೀಯಾದವಳಿಗೆ ಇರುವುದಿಲ್ಲ. ಹಾಗೆಯೇ ಮಕ್ಕಳನ್ನು ಪಡೆಯುವಲ್ಲಿಯೂ ಕುಟುಂಬದ ಯಜಮಾನನ ಪಾತ್ರವು ಮುಖ್ಯವಾಗಿರುತ್ತದೆ. ಎಷ್ಟು ಮಕ್ಕಳನ್ನು ಪಡೆಯಬೇಕೆಂದು ನಿರ್ಧರಿಸುವುದು ಕುಟುಂಬಕ್ಕೆ ಸಂಬಂಧಪಟ್ಟ ವಿಚಾರವಾಗಿರುತ್ತದೆ. ಸ್ತ್ರೀಯು ಹೆಚ್ಚು ಹೆಣ್ಣು ಮಕ್ಕಳನ್ನು ಹೆತ್ತರೆ, ಇವಳು ಹೆಣ್ಣುವಂಶೀಯತೆಯಿಂದ ಬಂದಂತವಳು ಆದುದರಿಂದ ಹೆಣ್ಣು ಮಕ್ಕಳನ್ನೇ ಹೆಚ್ಚಾಗಿ ಹಡೆಯುತ್ತಿದ್ದಾಳೆಂದು ಪುರುಷರು ಕೀಳಾಗಿ ಕಾಣುತ್ತಾರೆ.

ಕುಟುಂಬದಲ್ಲಿ ಇವಳ ಮೇಲೆ ಇಟ್ಟಿರುವ ಗೌರವ ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತದೆ. ಅವಳಲ್ಲಿಯೇ ಹೆಚ್ಚಾಗಿ ದೋಷಗಳಿವೆ ಎನ್ನುವ ಮನೋಭಾವದಿಂದ ತುಂಬಾ ಹೀನಾಯಮಾನವಾದ ಸ್ಥಿತಿಗೆ ಅವಳನ್ನು ತಲುಪಿಸುತ್ತಾರೆ.

"ಹೆಣ್ಣು ಹುಟ್ಟಿದರೆ ಹೆಗ್ಗಣ ಹುಟ್ಟಿದ್ಹಾಂಗ, ಗಂಡಸು ಮಗ ಗಜಭೀಮ ಹುಟ್ಟಿದರೆ ಚಿಲಕ ಚಿತ್ತಾರ ನಗತಾವ" ಎನ್ನುವ(ಜಾನಪದ) ಗಾದೆಯಂತೆ ಹುಟ್ಟಿದ ಹೆಣ್ಣು ಮಕ್ಕಳನ್ನು ಕೀಳು ಮನೋಭಾವದಿಂದ ಕಾಣಲು ಪ್ರಾರಂಭಿಸುತ್ತಾರೆ. ಕುಟುಂಬದಲ್ಲಿ ಮಗನಿಗೆ ತಂದೆ ತಾಯಿಯರು ಮತ್ತೊಂದು ಮದುವೆ ಮಾಡಬೇಕೆನ್ನುವ ವಿಚಾರವು ಸಹ ಚರ್ಚೆಗೆ ಬರುತ್ತದೆ. ಹೀಗಾಗಿ ಪುರುಷನಿಗೆ ಬಹುಪತ್ನಿತ್ವವನ್ನು ಪಡೆಯುವಂತೆ ಕುಟುಂಬದ ಯಜಮಾನರೇ ಅವನನ್ನು ಪ್ರೇರೇಪಿಸಿ ಮತ್ತೊಂದು ಮದುವೆಯನ್ನು ಮಾಡುತ್ತಾರೆ.

ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯು ಸ್ಥಾಪನೆಯಾಗಿ ಕುಟುಂಬದಲ್ಲಿ ಹೆಣ್ಣು ಗಂಡಿಗೆ ತಾರತಮ್ಯ ಮಾಡಲು ಪ್ರಾರಂಭಿಸುತ್ತದೆ. ಕುಟುಂಬದಲ್ಲಿ ತಂದೆಗೆ ಹೆಣ್ಣುಗಂಡುಗಳಿಬ್ಬರೂ ಮಕ್ಕಳಾದರೂ ಸಹ ಅವನು ಮಗನಿಗೆ ಮಾತ್ರ ತಾನು ಸಂಪಾದಿಸಿದಂತ ಚರ ಮತ್ತು ಸ್ಥಿರಾಸ್ತಿಯು ಮಗನಿಗೆ ಹಕ್ಕುಳ್ಳದ್ದೆಂದು,

ಮತ್ತು ಇವನು ನಮ್ಮ ವಂಶವನ್ನು ಅಭಿವೃದ್ಧಿಪಡಿಸುವವನು, ನಮ್ಮ ವಂಶದ ಕುಡಿಯೆಂದು ಗೌರವದಿಂದ ಕಾಣಲು ಪ್ರಾರಂಭಿಸುತ್ತಾರೆ. ಆದರೆ ಅದೇ ಹೆಣ್ಣು ಮಗುವಿಗೆ, ಇವಳು ಪರರ ಮನೆಯ ಸೊತ್ತು ಇವಳಿಗೇಕೆ ಜವಬ್ದಾರಿಯುತವಾದ ಕೆಲಸಗಳು ಇವಳೇನಿದ್ದರೂ ತನ್ನ ಅಧಿಕಾರವನ್ನು ತನ್ನ ಗಂಡನ ಮನೆಯಲ್ಲಿ ಚಲಾಯಿಸಬೇಕು ಎನ್ನುವ ಪಿತೃ ಪ್ರಧಾನತೆಯ ಚಿಂತನೆಯಿಂದ ಅವಳಿಗೆ ಆಸ್ತಿಯಲ್ಲಾಗಲಿ, ಅಧಿಕಾರದಲ್ಲಾಗಲಿ ಭಾಗವಹಿಸಲು ಅವಕಾಶವನ್ನು ಕೊಡುವುದಿಲ್ಲ. ಆದರೆ ಅವನು ಪುರುಷನಾಗಿರುವುದರಿಂದ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತಿರುತ್ತಾರೆ.

ಪಿತೃ ಪ್ರಧಾನತೆಯ ವಂಶವನ್ನು ನಿಲ್ಲಿಸಬೇಕಾದರೆ, ಗಂಡು ಮಗುವಿನ ಅವಶ್ಯಕತೆಯು ತುಂಬಾನೇ ಬೇಕಾಗಿರುತ್ತದೆ. ಇಂತಹ ಪ್ರಸಂಗಗಳಲ್ಲಿ ಬಹುಪತ್ನಿತ್ವವನ್ನು ಪಡೆದುಕೊಳ್ಳುವಲ್ಲಿ ಹಿಂಜರಿಯುತ್ತಿರಲಿಲ್ಲ. ಪಿತೃ ಪ್ರಧಾನತೆಯ ಕುಟುಂಬದಲ್ಲಿ ತಾಯ್ತನಕ್ಕೆ ಮಹತ್ವವಿದ್ದುದನ್ನು ಗಮನಿಸಬಹುದು. ಆದರೆ ಹೆಚ್ಚಾಗಿ ಗಂಡು ಮಗುವು ಬೇಕು ಎನ್ನುವ ಕಾರಣಕ್ಕಾಗಿ ಅವನು ಬಹುಪತ್ನಿತ್ವವನ್ನು ಪಡೆಯುತ್ತಿದ್ದನು. ಈ ರೀತಿಯಾಗಿ ಕುಟುಂಬದಲ್ಲಿ ಹೆಣ್ಣಿಗೆ ತಾಯ್ತನವನ್ನು ಪಡೆದುಕೊಂಡಾಗಲು ಸಮಸ್ಯೆಯಾಗಿ ಕಂಡುಬರುತ್ತಿತ್ತು. ಗಂಡು ಮಗುವಿಗೆ ತಾಯಾಗುವ ಸಾಮಾಜಿಕ ಮತ್ತು ಕೌಟುಂಬಿಕ ಒತ್ತಡಗಳು ಕಂಡುಬರುತ್ತಿದ್ದವು. ಸ್ತ್ರೀಯರನ್ನು ದ್ವೇಷಿಸುವುದು. ಕೀಳು ಮಟ್ಟದಲ್ಲಿ ಕಾಣುವುದು, ಕುಟುಂಬದಲ್ಲಿ ಒಂದೇ ಮಾತ್ರವಲ್ಲ, ಪ್ರಭುತ್ವ ವಲಯದಲ್ಲಿಯೂ ಅವಳನ್ನು ಹಿಂಸಿಸಲು, ಶೋಷಿಸಲು ಮುಂದಾಗುತ್ತಾರೆಂಬುದನ್ನು ಗಮಿನಿಸಬಹುದು. ವಿವಾಹಿತ ಸ್ತ್ರೀಗೆ ಮಕ್ಕಳಾಗದೆ ಇರುವುದು ಒಂದು ಸಮಸ್ಯೆಯಾದರೆ, ಮಕ್ಕಳಾದುದು ಮತ್ತೊಂದು ಸಮಸ್ಯೆಯಾಗಿ ಕಂಡುಬರುತ್ತದೆ. ಏಕೆಂದರೆ ಮಕ್ಕಳಾದ ನಂತರ ಸಂತಾನ ಹರಣ ಶಸ್ತ್ರ ಚಿಕಿತ್ಸೆಯು ಯಾರು ಮಾಡಿಸಿಕೊಳ್ಳಬೇಕೆನ್ನುವ ಸಮಸ್ಯೆಯುಂಟಾಗುತ್ತದೆ. ಸಂತಾನಹರಣ ಶಸ್ತ್ರಚಿಕಿತ್ಸೆಯು ಮಹಿಳೆಯರ ಆರೋಗ್ಯದ ಮೇಲೆ ತುಂಬಾ ದುಷ್ಪಾರಿಣಾಮ ಬೀರುವುದೆಂದು ಕಂಡುಬಂದರೂ ಸಹ ಅವಳಿಗೆ ಈ ಚಿಕಿತ್ಸೆಯನ್ನು ಅಳವಡಿಸಲು ಮುಂದಾಗುತ್ತಾರೆ. ಸಂತಾನ ಹರಣ ಶಸ್ತ್ರಚಿಕಿತ್ಸೆಯು ಸ್ತ್ರೀಯರಿಗಿಂತ ಪುರುಷರಿಗೆ ಸುಲಭವಾದರೂ ಅದನ್ನು ಸ್ತ್ರೀಯರಿಗೆ ಮಾಡಿಸುವಲ್ಲಿ ಮುಂದಾಗುತ್ತಾರೆ. ಪ್ರಭುತ್ವದಲ್ಲಿಯೂ ಸಹ ಇವಳನ್ನು ಶೋಷಣೆಗೆ ಒಳಪಡಿಸುವುದು ಕಂಡುಬರುತ್ತದೆ. ಇಲ್ಲಿಯೂ ಕೂಡ ಹೆಣ್ಣನ್ನು ತಾರತಮ್ಯತೆಯಿಂದ ಕಾಣುತ್ತಾರೆ. ಪುರುಷನಿಗೆ ಸಂತಾನಹರಣ ಶಸ್ತ್ರಚಿಕಿತ್ಸೆಯನ್ನು ಮಾಡಿಸಿದರೆ ಅವನು ದೈಹಿಕವಾಗಿ ದುರ್ಬಲನಾಗುತ್ತಾನೆ ಮತ್ತು ಭಾರವಾದ ಕೆಲಸಕಾರ್ಯಗಳನ್ನು ಮಾಡಲು ಅವನಿಂದಾಗುವುದಿಲ್ಲ. ಏನೇ ಆದರೂ ಈ ಸಂತಾನಹರಣ ಶಸ್ತ್ರಚಿಕಿತ್ಸೆಯು ಸ್ತ್ರೀಯರಿಗೆ ಮಾತ್ರ ಸೀಮಿತವಾದದ್ದು ಅವಳಾದರೆ ಮನೆಯಲ್ಲೆ ಇರುವವಳು, ಮನೆಯಲ್ಲಿ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಂಡಿರುವವಳು, ಆದುದರಿಂದ ಹೆಂಗಸರಿಗೆ ಈ ಸಂತಾನಹರಣ ಶಸ್ತ್ರಚಿಕಿತ್ಸೆಯನ್ನು ಮಾಡಬೇಕೆಂದು ಪ್ರಭುತ್ವದಲ್ಲಿಯೂ ಹೆಚ್ಚಾಗಿ ಸ್ತ್ರೀಯರ ಮೇಲೆಯೇ ಒತ್ತಡ ಹೇರುತ್ತಾರೆ.

ಉದಾ : ಎರಡು ಮಕ್ಕಳನ್ನು ಪಡೆದುಕೊಂಡು ಸಂತಾನಹರಣ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡರೆ ಸರ್ಕಾರದಿಂದ ಧನಸಹಾಯವನ್ನು ಒದಗಿಸಿಕೊಡುತ್ತೇವೆಂದು ಸರ್ಕಾರವು ಸ್ತ್ರೀಯರ ಮೇಲೆ ಒತ್ತಡ ತಂದಿದ್ದುಂಟು. ಈ ಸಂತಾನಹರಣ ಶಸ್ತ್ರಚಿಕಿತ್ಸೆಯಿಂದ ಸ್ತ್ರೀಯರ ಆರೋಗ್ಯಕ್ಕೆ ತೊಂದರೆಯಾಗುತ್ತದೆಂಬುದು ಗಮನಕ್ಕೆ ಬಂದರೂ, ಅವಳಿಗೆಯೇ ಸಂತಾನಹರಣ ಶಸ್ತ್ರಚಿಕಿತ್ಸೆಯನ್ನು ಮಾಡಿಸುತ್ತಾರೆ. ಅವಳ ಆರೋಗ್ಯಕ್ಕೆ ತೊಂದರೆಯುಂಟಾದರೆ ಇದನ್ನು ಪುರುಷನು ಸರಿಪಡಿಸಿಕೊಂಡು ಹೋಗುತ್ತಾನೆನ್ನುವ ಮನೋಭಾವ ಪ್ರಭುತ್ವದ ಗಮನದಲ್ಲಿರುತ್ತದೆ. ಪ್ರಭುತ್ವವು ಸಹ ಪುರುಷ ಪ್ರಧಾನವಾದ ಸಮಾಜವಾಗಿರುವುದರಿಂದ ಪುರುಷರನ್ನು ಮೇಲ್ದರ್ಜೆಯವರಂತೆ ಕಂಡು ಸ್ತ್ರೀಯರನ್ನು ಕೆಳದರ್ಜೆಯವರಂತೆ ಪ್ರಭುತ್ವವೇ ಶೋಷಿಸುವುದನ್ನು ಕಾಣಬಹುದಾಗಿದೆ.

ಶ್ರೀಮಂತ ಮಧ್ಯಮವರ್ಗದ ವಿದ್ಯಾವಂತರೂ ಸಹ ಕುಟುಂಬ ಯೋಜನೆಯ ಬಗ್ಗೆ ತಿಳಿದಿದ್ದರೂ ಅಲ್ಲಿ ಪುರುಷರು ತೋರುವ ಅಸಹಕಾರ ಕುತೂಹಲಕಾರಿಯಾಗಿ ಕಾಣಬಲ್ಲುದು. ಇಂದಿಗೂ ಪಿತೃಪ್ರಧಾನತೆಯ ಸಮಾಜದಲ್ಲಿ ಮನೆ ಮಕ್ಕಳ ಎಲ್ಲ ಜವಬ್ದಾರಿಗಳು ಸ್ತ್ರೀಗೆ ಸೇರಿದ್ದು ಎಂಬ ಧೋರಣೆ ಮರೆಯಾಗಿ ಕಾಣುವುದಿಲ್ಲ. ಹೆಣ್ಣು ಎಷ್ಟಾದರೂ ಕಷ್ಟ ಸಂಕಷ್ಟಗಳನ್ನು ಅನುಭವಿಸುವವಳು ಕಷ್ಟಗಳನ್ನು ಎದುರಿಸಲಿಕ್ಕೆ ಜನ್ಮ ತಳೆದಿರುವಳೆಂಬ ಮನೋಭಾವವಿರುತ್ತದೆ. ಹೆಣ್ಣಿನ ಹೊರುವ ಹೆರುವ ಅನಿವಾರ್ಯ ನೋವುಗಳೊಂದಿಗೆ ಇಂದಿನ ಗರ್ಭನಿರೋಧಕಗಳು, ಸಂತಾನಹರಣ ಶಸ್ತ್ರಚಿಕಿತ್ಸೆ ಇವುಗಳನ್ನು ಸ್ತ್ರೀಯರ ಮೇಲೆ ಹೇರುತ್ತಾ ಬಂದಿರುವುದು ಗಮನಾರ್ಹವಾದ ಸಂಗತಿಯಾಗಿದೆ.

ಕೌಟುಂಬಿಕ ಹೊರವಲಯದಲ್ಲಿಯೂ ಹೆಣ್ಣು ತಾಯ್ತನವನ್ನು ಪಡೆದುಕೊಳ್ಳುವಲ್ಲಿ ಹಲವಾರು ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಕೌಟುಂಬಿಕ ವಲಯವನ್ನು ಪಡೆದುಕೊಳ್ಳಬೇಕಾದರೆ, ಅವಳು ಸಾಮಾಜಿಕವಾಗಿ ವಿವಾಹವಾಗಬೇಕಾಗುತ್ತದೆ. ವಿವಾಹಿತಳಾಗಿ ತಾನು ತಾಯ್ತನವನ್ನು ಪಡೆಯಲು ಸಾರ್ವಜನಿಕ ಮನ್ನಣೆಯನ್ನು ಪಡೆಯಬೇಕಾಗುತ್ತದೆ.

ಅವಿವಾಹಿತಳಾಗಿ ಹೆಣ್ಣು ತಾಯ್ತನವನ್ನು ಪಡೆದುಕೊಂಡಲ್ಲಿ ಅವಳಿಗೆ ಕುಟುಂಬದಲ್ಲಿ ಮತ್ತು ಕುಟುಂಬದ ಹೊರಗೆ ಮಾನ್ಯತೆಯಿರುವುದಿಲ್ಲ. ಪಿತೃ ಪ್ರಧಾನ ಸಮಾಜವು ಕಟ್ಟಿಕೊಟ್ಟಂತಹ ಸಾಮಾಜಿಕ ಚೌಕಟ್ಟಿನಲ್ಲಿಯೇ ಅವಳು ಜೀವಿಸಬೇಕಾಗುತ್ತದೆ. ಅವಳಿಗೆ ಲೈಂಗಿಕತೆಯನ್ನು ಮತ್ತು ತಾಯ್ತನವನ್ನು ಪಡೆಯುವ ಇಚ್ಛೆ ಇದ್ದರೆ ಅವಳು ವಿವಾಹಿತಳು ಆಗಲೇಬೇಕಾಗುತ್ತದೆ. ಅಂದಾಗ ಮಾತ್ರ ಅವಳಿಗೆ ಕುಟುಂಬದ ಒಳಗೆ ಮತ್ತು ಕುಟುಂಬದ ಹೊರಗೆ ಒಳ್ಳೆಯ ಗೌರವಯುತವಾದ ಸ್ಥಾನವನ್ನು ಪಡೆದುಕೊಳ್ಳುತ್ತಾಳೆ. ಇಲ್ಲವೆಂದರೆ ಬಹಳಷ್ಟು ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ.[೩]

ಉದಾ : ಮಹಾಭಾರತದಲ್ಲಿ "ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ ಮತ್ತು ತಾಯಿಗಿಂತ ಮಿಗಿಲಾದ ಗುರುವಿಲ್ಲ" ಎನ್ನುವ ಮಾತು ತಾಯ್ತನದ ಬಗ್ಗೆ ಇರುವ ಗೌರವವನ್ನು ಕೊಂಡಾಡಿದೆ ಎಂದು ಹೇಳಬಹುದು.

ನಮ್ಮ ಪಿತೃಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಹೆಣ್ಣಿನ ಶೀಲ ಮತ್ತು ಪಾತಿವ್ರತ್ಯ ಎಷ್ಟು ಮಹತ್ವವನ್ನು ಪಡೆದಿದೆಯೊ ಅದೇ ರೀತಿಯಾಗಿ ಸಾಮಾಜಿಕ ಸಂದರ್ಭದಲ್ಲಿ ತಾಯ್ತನವು ಕೂಡ ಅಷ್ಟೇ ಮಹತ್ವವನ್ನು ಪಡೆದುಕೊಂಡಿದೆ ಎನ್ನಲಾಗಿದೆ.

ಪರಸ್ತ್ರೀ ವ್ಯಾಮೋಹದಲ್ಲಿ ನಲಿಯುವ ಗಂಡನನ್ನು ಹಿಡಿದು ಹಕ್ಕಿನಿಂದ ಕೇಳುವ ಸಾಮರ್ಥ್ಯವು ಬಹಳಷ್ಟು ಹೆಂಗಸರಿಗಿರುವುದಿಲ್ಲ. ಏಕೆಂದರೆ, ಗಂಡನಿಗೆ ಇದಿರುಗೊಂಡು ತಮ್ಮ ಹಕ್ಕುಗಳನ್ನು ಕೇಳುವ ಸಂಸ್ಕೃತಿ ನಮ್ಮ ಪಿತೃಪ್ರಧಾನ ಸಮಾಜದಲ್ಲಿ ಕಂಡುಬಂದಿಲ್ಲ. ಹಾಗೇನಾದರೂ ಗಂಡನಿಗೆ ಪ್ರತಿರೋಧಿಸಿದರೆ ಅವಳು ಸಾಮಾಜಿಕವಾಗಿ ಹಲವಾರು ತೊಂದರೆಗಳನ್ನು ಅನುಭವಿಸುವಂತಹ ಸ್ಥಿತಿಗೆ ಬರುತ್ತಾಳೆ. ಆದುದರಿಂದ ಸ್ತ್ರೀಯರು ಗಂಡನಿಗೆ ಇದಿರುಗೊಳ್ಳದೆ ಅವನಂತೆ ನಡೆದುಕೊಳ್ಳುವ ಪ್ರವೃತ್ತಿಯನ್ನು ಪುರುಷ ಪ್ರಧಾನ ಸಮಾಜ ವ್ಯವಸ್ಥೆಯು ನಿರ್ಮಿಸಿರುತ್ತದೆ. ಆದರೂ ಸಾಮಾಜಿಕ ಸಂದರ್ಭದಲ್ಲಿ ಹೆಣ್ಣಿಗೆ ತಾಯ್ತನವನ್ನು ಪಡೆದುಕೊಳ್ಳುವುದು ಅಷ್ಟು ಸುಲಭದ ಸಂಗತಿಯಲ್ಲ ಎಂಬ ಮಾತನ್ನು ಗಮನಿಸಬಹುದಾಗಿದೆ.

## ಅಧ್ಯಯನದ ಉದ್ದೇಶ

ಒಂದು ಸಮಾಜ ವ್ಯವಸ್ಥೆಯಲ್ಲಿ ಎಲ್ಲ ಸದಸ್ಯರು, ಸುಖದಿಂದ ನೆಮ್ಮದಿಯಿಂದ ಬಾಳಬೇಕಾದರೆ, ಯಾರು ಯಾರ ಮೇಲೆಯೂ ನಿಯಂತ್ರಣವನ್ನು ಹೇರಬಾರದು. ದಬ್ಬಾಳಿಕೆಯನ್ನು ಮಾಡಬಾರದು. ಸಮಾಜದಲ್ಲಿ ಅಸಮಾನ ನೆಲೆಗಳು ಹುಟ್ಟಿಕೊಳ್ಳುವುದೇ ಒಬ್ಬರಿಗೊಬ್ಬರ ಮೇಲೆ ನಿಯಂತ್ರಣ ಹೇರುವುದರಿಂದ ಸಮಸ್ಯೆಗಳು ಉದ್ಭವಿಸುತ್ತವೆ.

ವರ್ಗ, ವರ್ಣ, ಜಾತಿಗಳಲ್ಲಿಯೂ ಕೆಲವೊಂದು ಭಿನ್ನ, ಭಿನ್ನ ರೀತಿಯ ಅಸಮಾನ ನೆಲೆಗಳು ಹುಟ್ಟಿಕೊಳ್ಳುತ್ತವೆ. ಉದಾ : ಮೇಲ್ವರ್ಗದ ಅಧಿಕಾರಿಯು ಕೆಳವರ್ಗದ ಅಧಿಕಾರಿಯಿಂದ ಸೇವೆಯನ್ನು ಮಾಡಿಸಿಕೊಳ್ಳುತ್ತಿರುತ್ತಾನೆ. ಕೆಳವರ್ಗದ ಅಧಿಕಾರಿಯು ಸಹ ಅವನಿಗೆ ಸೇವೆಯನ್ನು ಮಾಡುವಲ್ಲಿ ಹಿಂಜರಿಯುವುದಿಲ್ಲ. ಅವನ ಜೊತೆಗೆ ಪತ್ನಿಯನ್ನು ಸಹ ಮೇಲಾಧಿಕಾರಿಯ ಸೇವೆಯನ್ನು ಮಾಡಿಸುವಲ್ಲಿ ಹಿಂಜರಿಯುವುದಿಲ್ಲ. ಏಕೆಂದರೆ ಇವನಿಗೆ ಮೇಲಾಧಿಕಾರಿಯ ಸೇವೆಯನ್ನು ಮಾಡಿದರೆ ಮುಂದೊಂದು ದಿನ ತನಗೆ ಬಡ್ತಿ ಕೊಡಲು ಸಹಾಯಕವಾಗುತ್ತಾನೆನ್ನುವ ಭಾವನೆಯಿಂದ ಸೇವೆಯನ್ನು ಮಾಡುತ್ತಿರುತ್ತಾನೆ.

ಮುಖ್ಯವಾಗಿ ಇಲ್ಲಿ ಗಮನಿಸುವುದೇನೆಂದರೆ, ವರ್ಗ ವರ್ಗಗಳಲ್ಲಿ ಅಸಮಾನ ನೆಲೆಗಳು, ತಲೆ ಎತ್ತಿವೆ ಎಂಬುದನ್ನು ಅರಿತುಕೊಳ್ಳಬಹುದು.

ಮೇಲ್ವರ್ಗದ ಪುರುಷರಲ್ಲಿ ಸಹ ಕೆಳವರ್ಗದ ಪುರುಷರಂತೆ ಸ್ತ್ರೀಯರನ್ನು ಶೋಷಣೆ ಮಾಡುವುದು ಕಂಡುಬರುತ್ತದೆ. ಮೇಲ್ವರ್ಗದ ಪುರುಷರು ಸ್ತ್ರೀಯರಿಗೆ ಕುಟುಂಬದೊಳಗೆ ಯಾವುದೇ ರೀತಿಯಾಗಿ ಹೊರಗಿನ ಸಮಾಜಕ್ಕೆ ಕಾಣಿಸಿಕೊಳ್ಳದೆ ಶೋಷಣೆಗೆ ಒಳಪಡಿಸಿದ್ದರೂ ಸ್ತ್ರೀಯರು, ಪುರುಷರು ಕೊಡುವಂತ ಕಷ್ಟಗಳನ್ನು ಸಹಿಸಿಕೊಂಡು ಅವುಗಳನ್ನು ತಮ್ಮ ಮನೆಯೊಳಗೆ ಮಾತ್ರ ಸೀಮಿತವೆನ್ನುವಂತೆ ಹೊರಗಡೆ ವ್ಯಕ್ತಪಡಿಸುತ್ತಿರಲಿಲ್ಲ. ಒಂದು ವೇಳೆ ನಾವು ಈ ರೀತಿಯ ಕಷ್ಟಗಳಿಗೆ ಸಿಲುಕಿಕೊಂಡಿದ್ದೇವೆ ಎಂದು ಕೆಳವರ್ಗದ ಜನರಿಗೆ ತಿಳಿದರೆ ಮರ್ಯಾದೆ, ಗೌರವಗಳು ಕಡಿಮೆಯಾಗುತ್ತವೆ ಎನ್ನುವ ಭಾವನೆಯಿಂದ ಮಾನಸಿಕವಾಗಿ ತೊಂದರೆಗಳನ್ನು ಕೊಟ್ಟರು ಅವುಗಳನ್ನು ಸಹಿಸಿಕೊಂಡಿರುತ್ತಿದ್ದರು. ಕೆಳವರ್ಗದ ಹೆಂಗಸರಿಗಿಂತ ಮೇಲ್ವರ್ಗದ ಹೆಂಗಸರಿಗೆ ಮನೆಯಲ್ಲಿ ಶೋಷಣೆ ಹೆಚ್ಚಾಗಿರುವುದು ಕಂಡುಬರುತ್ತದೆ.

ಕೆಳವರ್ಗದ ಹೆಂಗಸರಿಗೂ ಮೇಲ್ವರ್ಗದ ಹೆಂಗಸರಿಗಿದ್ದಂತ ಕಷ್ಟಗಳಿದ್ದವು. ಕೆಳವರ್ಗದವರಲ್ಲಿಯೂ ಅಸಮಾನ ನೆಲೆಗಳು ಇದ್ದವು. ಆದರೆ ಮೇಲ್ವರ್ಗದವರಿಗಿಂತ ಕೆಳವರ್ಗದವರಿಗೆ ಮನೆ ಕಷ್ಟಗಳನ್ನು ಕೊಡುತ್ತಿರಲಿಲ್ಲ. ಸಮಯ ಬಂದರೆ ಮನೆಯ ಮುಂದೆ ಅಂಗಗಳಲ್ಲಿ ಬೀದಿಗಳಲ್ಲಿ, ಹೊಡೆಯುವುದನ್ನು, ಬೈಯುವುದನ್ನು ಮುಕ್ತವಾಗಿ ಕಾಣಬಹುದು. ಕೆಳವರ್ಗದ ಪುರುಷರು ಸ್ತ್ರೀಯರ ಮೇಲೆ ಈ ರೀತಿಯಾಗಿ ಶೋಷಣೆ ಮಾಡುವುದರಿಂದ ಕೆಲವೊಂದು ಸಂದರ್ಭಗಳಲ್ಲಿ ಸ್ತ್ರೀಯರೂ ಸಹ ಪುರುಷರಿಗೆ ಇದಿರುಗೊಳ್ಳುವ ಸಂದರ್ಭಗಳು ಕಂಡುಬರುತ್ತಿದ್ದವು. ಕೆಳವರ್ಗದ ಹೆಂಗಸರು ತಮ್ಮ ಗಂಡಸರಿಗೆ ಇದಿರುಗೊಳ್ಳುವುದರಿಂದ ಅವರಿಗೇನು ಮರ್ಯಾದೆಗಳಿಲ್ಲವೆಂದಲ್ಲ, ಅವರಿಗೂ ಮೇಲ್ವರ್ಗದವರಂತೆ ತಮ್ಮದೇ ಆದ ಸ್ಥಾನಮಾನಕ್ಕೆ ತಕ್ಕಂತೆ ಘನತೆ ಗೌರವಗಳು ಇರುತ್ತಿದ್ದವು.

ವರ್ಣಗಳನ್ನು ವಿಂಗಡಣೆ ಮಾಡಿದಾಗಲೂ ಸಹ ಕಂಡುಬರುವುದು ಮೇಲ್ವರ್ಗ, ಮಧ್ಯಮವರ್ಗ, ಕೆಳವರ್ಗ ಈ ರೀತಿಯಾಗಿ ವರ್ಗಗಳಾಗಿ ವಿಂಗಡಿಸಿದ್ದಾರೆ. ಜಾತಿಗಳನ್ನು ಗಮನಿಸಿದಾಗ ಮೇಲ್ಜಾತಿ, ಕೆಳಜಾತಿಯೆಂದು ವಿಂಗಡಿಸಿರುವುದನ್ನು ಗಮನಿಸಬಹುದು. ಜಾತಿಗಳಲ್ಲಿ ಮೇಲ್ಜಾತಿ, ಕೆಳಜಾತಿಗಳೆಂದು ವಿಂಗಡಿಸಿದಂತೆ ಹೆಣ್ಣನ್ನು ಜಾತಿಗಳಲ್ಲಿಯೇ ಕೀಳುಮಟ್ಟದ ಜಾತಿಯವಳೆಂದು ತುಂಬಾ ಕೀಳಾಗಿ ಕಾಣುತ್ತಿದ್ದಾರೆ.

ಮೇಲ್ಜಾತಿಯ ಹೆಂಗಸರಿಗೆ ತಮ್ಮ ಗಂಡಸರಿಂದ ಒಂದು ರೀತಿಯ ಶೋಷಣೆಯಾದರೆ, ಕೆಳಜಾತಿಯ ಹೆಂಗಸರಲ್ಲಿ ಶೋಷಣೆಯು ಮತ್ತೊಂದು ಸ್ವರೂಪದ್ದಾಗಿರುತ್ತದೆ. ಆಯಾ ಜಾತಿ ವರ್ಗಗಳಿಗೆ ತಕ್ಕಂತೆ ಅಸಮಾನ, ನೆಲೆಗಳು ಕಂಡುಬರುತ್ತವೆ. ಹಾಗೆಯೇ ಲಿಂಗಗಳಲ್ಲಿಯೂ ತಾರತಮ್ಯತೆಯನ್ನು ಕಾಣಬಹುದು.

ಕುಟುಂಬದಲ್ಲಿ ಸ್ತ್ರೀ-ಪುರುಷ ಎನ್ನುವ ಲಿಂಗ ತಾರತಮ್ಯವು ಹೆಚ್ಚಾಗಿ ಕಂಡುಬರುತ್ತದೆ. ಪುರುಷರೆ ಸ್ತ್ರೀಯರಿಗಿಂತ ಮೇಲ್ಮಟ್ಟದವರು ಪುರುಷರು ಸ್ತ್ರೀಯರಿಗಿಂತ ಹೆಚ್ಚಿನ ಶ್ರಮದಾಯಕ ಭಾರವಾದ ಕೆಲಸಗಳನ್ನು ಮಾಡುವಂತಹವರು ಆದುದರಿಂದ ಪುರುಷರ ಊಟದ ನಂತರವೇ ಹೆಂಗಸರು ಊಟ ಮಾಡಬೇಕೆಂದು ಊಟದಲ್ಲಿಯೂ ಸಹ ನಿರ್ಬಂಧನೆಗಳು ಕಂಡುಬರುತ್ತಿದ್ದವು.

ಸ್ತ್ರೀಯು ಎಷ್ಟೇ ಕೆಲಸವನ್ನು ಮಾಡಿದರೂ ಅದನ್ನು ಪುರುಷರು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ. ಏಕೆಂದರೆ ಸ್ತ್ರೀಯರ ಕೆಲಸವೇನಿದ್ದರೂ ಮನೆಯಲ್ಲಿಯ ಕೆಲಸವಾಗಿರುವುದರಿಂದ ಮನೆಯ ಕೆಲಸಕ್ಕೆ ಯಾವುದೇ ರೀತಿಯ ಸಂಭಾವನೆಯನ್ನು ಕೊಡುತ್ತಿರಲಿಲ್ಲ. ಸ್ತ್ರೀಯರು ಮಾಡತಕ್ಕಂತ ಕೆಲಸಕ್ಕೆ ಉಚಿತ ಸೇವೆಯೆಂದು ತಿಳಿದುಕೊಳ್ಳುತ್ತಿದ್ದರು.

ಉದಾ : ಕುಟುಂಬದಲ್ಲಿ ಒಂದು ಹೆಣ್ಣು ಮತ್ತು ಗಂಡು ಮಗುವನ್ನು ಬೆಳೆಸುವಲ್ಲಿಯೂ ಲಿಂಗತಾರತಮ್ಯವನ್ನು ಕಾಣಬಹುದು. ಹೆಣ್ಣು ಸಮಾಜದಲ್ಲಿ ಹೀಗೆ ಇರಬೇಕು ಹೀಗೆ ನಡೆದುಕೊಳ್ಳಬೇಕೆನ್ನುವ ಸಾಮಾಜಿಕ ನಿಯಮಗಳಿರುತ್ತಿದ್ದವು. ಹೆಣ್ಣು ಇವೆಲ್ಲವುಗಳನ್ನು ಅನುಸರಿಸಿ ಹೊಂದಿಕೊಂಡು ಹೋಗಬೇಕು. ಸಾಮಾಜಿಕ ನಿಯಮಗಳನ್ನು ತಿರಸ್ಕರಿಸುವಂತಿರಲಿಲ್ಲ. ಹೆಣ್ಣು ಎನ್ನುವ ಒಂದೇ ಕಾರಣಕ್ಕಾಗಿಯೇ ಅವಳಿಗೆ ನಿರ್ಬಂಧನೆಗಳನ್ನು ಹೇರಲಾಗಿತ್ತು. ಗಂಡು ಮಗುವಿಗೆ ಈ ರೀತಿಯ ನಿರ್ಬಂಧನೆಗಳು ಇರುತ್ತಿರಲಿಲ್ಲ.

ಪುರುಷರು ಸ್ತ್ರೀಯರನ್ನು ಆರ್ಥಿಕತೆಯಿಂದ ವಂಚಿತರನ್ನಾಗಿ ಮಾಡುತ್ತಿದ್ದರು. ಅವರಿಗೆ ಮನೆಯ ಕೆಲಸ ಮತ್ತು ಕುಟುಂಬದಲ್ಲಿಯ ಮಕ್ಕಳ ಸೇವೆಯನ್ನು ಮಾಡಿಕೊಂಡು ಇರುವಂತೆ ಪುರುಷರು ಅವಳನ್ನು ಆರ್ಥಿಕತೆಯ ಬಂಧನದಲ್ಲಿಟ್ಟರು. ಪುರುಷನು ಮನೆಯ ಹೊರಗಿನ ಕೆಲಸವನ್ನು ಮಾಡಿಕೊಂಡು ಕುಟುಂಬಕ್ಕೆ ಆದಾಯವನ್ನು ತರುವಂತವನಾಗಿದ್ದನು. ಹೀಗಾಗಿ ಮನೆಯ ಯಜಮಾನನು ಪುರುಷನೇ ಆಗಿದ್ದುದರಿಂದ ಸ್ತ್ರೀ-ಪುರುಷರಲ್ಲಿ ಅಸಮಾನ ನೆಲೆಗಳು ಕಂಡುಬರುತ್ತಿದ್ದರೂ, ಪುರುಷನು ಸ್ತ್ರೀಯರನ್ನು ಆರ್ಥಿಕತೆಯಿಂದ ವಂಚಿತರನ್ನಾಗಿ ಮಾಡಿ, ದೇಹ, ಮನಸ್ಸು, ಬುದ್ಧಿಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವಲ್ಲಿ ಒಂದು ಸಾಧನವನ್ನಾಗಿ ಬಳಕೆ ಮಾಡಿಕೊಂಡು ಹೆಂಗಸಿನ ದೇಹದ ಮೇಲೆ ಲೈಂಗಿಕ ಆಕ್ರಮಣವನ್ನು ಮಾಡಿದನು. ಅವಳ ದೇಹವನ್ನು ತನ್ನ ನಿಯಂತ್ರಣದಲ್ಲಿರಿಸಿಕೊಳ್ಳಲು ಪ್ರಯತ್ನಿಸಿದನು. ಆದರೆ ಅವಳ ದೇಹವೊಂದನ್ನು ಆಕ್ರಮಿಸಿಕೊಳ್ಳಲಿಲ್ಲ, ಅವಳ ಮನಸ್ಸನ್ನೂ, ಬುದ್ಧಿಯನ್ನೂ ತನ್ನ ನಿಯಂತ್ರಣದಲ್ಲಿರಿಸಿಕೊಂಡನು. ಇವೆಲ್ಲವುಗಳನ್ನು ಆಕ್ರಮಿಸಿಕೊಳ್ಳಲು ಕಾರಣವೆಂದರೆ, ಪುರುಷನು ನಾನು ಶ್ರೇಷ್ಠ ಎನ್ನುವ ಕಾರಣಕ್ಕೆ ಮತ್ತು ತಾನು ಹೊರಗಡೆ ದುಡಿದು ಆಹಾರವನ್ನು ಸಂಗ್ರಹಣೆ ಮಾಡಿಕೊಂಡು ಬರುತ್ತೇನೆನ್ನುವ ಕಾರಣದಿಂದ ಹೆಂಗಸಿನ ಬದುಕನ್ನು ಅವಳ ದೇಹ, ಮನಸ್ಸು, ಬುದ್ಧಿಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಒಂದು ಸಾಧನವನ್ನಾಗಿ ಉಪಯೋಗಿಸಿಕೊಂಡನು.

ಹೆಂಗಸಿನ ಬದುಕಿಗೆ ಸಮಸ್ಯೆಯ ಮೂಲಕಾರಣ ಲೈಂಗಿಕತೆಯ ಆಕ್ರಮಣ ಲೈಂಗಿಕವಾಗಿ ಅವಳ ಮೇಲೆ ಆಕ್ರಮಣ ಮಾಡುವುದು ವಿವಾಹವಾದ ನಂತರ ಅವಳು ಮತ್ತೊಬ್ಬರಿಂದ ಲೈಂಗಿಕ ತೃಷೆಯನ್ನು ಪಡೆಯುವಂತಿಲ್ಲ. ಗಂಡನು ಅವನೆಂತವನೇ ಇರಲಿ ಅವನೊಂದಿಗೆ ಮಾತ್ರ ಲೈಂಗಿಕತೆಯನ್ನು ಹೊಂದಬೇಕು ಎನ್ನುವ ಸಾಮಾಜಿಕ ನಿರ್ಬಂಧನೆಗಳನ್ನು ಅವಳ ಮೇಲೆ ಹೇರಲಾಗಿದೆ. ಆದ್ದರಿಂದ ಅವಳು ಮುಕ್ತವಾಗಿ ಸ್ವಾತಂತ್ರ್ಯವಾಗಿ ಲೈಂಗಿಕತೆಯನ್ನು ಪಡೆಯುವಂತಿಲ್ಲ. ಪುರುಷ ಪ್ರಧಾನ ಲೈಂಗಿಕತೆಯನ್ನು ಯಾವ ತೆರನಾಗಿ ಆಕ್ರಮಣ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಲೈಂಗಿಕತೆಗೆ ಪರಿಹಾರಗಳನ್ನು ಕಂಡುಹಿಡಿಯುವುದು ಹೇಗೆ? ಲೈಂಗಿಕತೆಯ ಮೇಲೆ ಪುರುಷ ಪ್ರಧಾನರು ಹಾಕಿಕೊಂಡಿರುವಂತ ನಿಯಮಗಳೇನು? ಈ ಎಲ್ಲ ಸಮಸ್ಯೆಗಳಿಗೆ ಮೂಲ ಕಾರಣಗಳನ್ನು ಅರಿತುಕೊಳ್ಳಬೇಕು.

ಹೆಂಗಸರನ್ನು ಆಕ್ರಮಣ ಮಾಡಿಕೊಳ್ಳಲು ಪುರುಷ ಚಿಂತನೆ ತನ್ನ ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಂಡಿದೆ. ಆದ್ದರಿಂದ ಸ್ತ್ರೀ-ಪುರುಷರ ನಡುವೆ ಅಕ್ರಮಣಕಾರಿ ಅಸಮಾನ ನೆಲೆಗಳು ನಡೆಯುತ್ತಲೇ ಇವೆ. ಈ ಎಲ್ಲ ಸಮಸ್ಯೆಗಳ ಮೂಲ ಕಾರಣಗಳನ್ನು ಗಮನಿಸಿದಾಗ ಅದಕ್ಕೆ ತಕ್ಕ ಸೂಕ್ತವಾದ ಮಾರ್ಗಗಳಿಂದ ಈ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುತ್ತದೆ.

## ಅಧ್ಯಯನದ ವ್ಯಾಪ್ತಿ

'ಹೆಣ್ಣಿನ ಬದುಕಿನಲ್ಲಿ ತಾಯ್ತನ' ಎನ್ನುವ ಅಧ್ಯಯನದ ವ್ಯಾಪ್ತಿಯು ಮಹಿಳೆಗೆ ಸ್ವತಂತ್ರ್ಯವಾಗಿ ಬದುಕುವ ಹಕ್ಕನ್ನು ಕಲ್ಪಿಸಿಕೊಡುವುದು. ಮಹಿಳಾ ಸಮಸ್ಯೆಗಳನ್ನು ಕುರಿತು ಚಿಂತನೆ ಮಾಡುವುದು, ಮಹಿಳಾ ಬದುಕಿನಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಸಬಲೀಕರಣಗೊಂಡರೆ ಅದಕ್ಕೆ ಸಬಲೀಕರಣವೆಂದು ಕರೆಯುತ್ತಾರೆ.

ಪಿತೃಪ್ರಧಾನ ಸಮಾಜವು ಸ್ತ್ರೀಯನ್ನು ಎರಡನೇ ದರ್ಜೆಯ ಪ್ರಜೆಯನ್ನಾಗಿಸಿದೆ. ಮಹಿಳೆಯರು ಮಾಡುವಂತ ಪ್ರತಿಯೊಂದು ಕೆಲಸಕ್ಕೆ ಪುರುಷರು ಕನಿಷ್ಟ ಕೆಲಸವೆಂದು ಪರಿಗಣಿಸಿ ಕೆಲಸದ ಗುಣಮಟ್ಟವನ್ನು ಸಹ ಅರಿಯದೆ ಕನಿಷ್ಟ ಕೆಲಸವೆಂದು ತಾವೇ ಸ್ವತಃ ನಿರ್ಧರಿಸುತ್ತಾರೆ. ಇದಕ್ಕೆಲ್ಲ ಮುಖ್ಯ ಕಾರಣ ತಲೆ ತಲೆಮಾರುಗಳಿಂದ ಬೆಳೆದುಕೊಂಡು ಬಂದಿರುವಂತ ಗೊಡ್ಡು ಸಂಪ್ರದಾಯಗಳೇ ಕಾರಣ ಎಂದು ಹೇಳಬಹುದು. 'ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದಂತೆ, ಸ್ತ್ರೀಯರ ಬುದ್ಧಿ ಮೊಣಕಾಲ ಕೆಳಗೆ' ಎಂಬ ಗಾದೆಗಳು ಪ್ರಚಲಿತದಲ್ಲಿದ್ದರೂ, ಸಾಮಾಜಿಕವಾಗಿ ಹಲವು ವಂಚನೆಗೊಳಗಾದ ಮಹಿಳೆ ಆರ್ಥಿಕವಾಗಿಯೂ, ಶೋಷಣೆಗೆ ಒಳಗಾಗಿದ್ದಾಳೆಂಬುದು ಸತ್ಯದ ಸಂಗತಿ.

ಮಹಿಳೆ ತನ್ನ ಬದುಕಿನ ಹಲವು ಪ್ರಕ್ರಿಯೆಗಳಲ್ಲಿ ಪುರುಷನೊಂದಿಗೆ ಹೇಗೆ ಭಾಗಿಯಾಗುತ್ತಿದ್ದಾಳೆ ಎನ್ನುವುದನ್ನು ಗಮನಿಸುವುದರ ಹಿನ್ನೆಲೆಯಲ್ಲಿ ಮಹಿಳೆಯ ಶೋಷಣೆಯನ್ನು ಗುರುತಿಸಬಹುದು. ಬೇಟೆಯ ಯುಗದಲ್ಲಿ ಪ್ರಾಣಿ ಸಾಕಾಣಿಕೆಯ ಯುಗದಲ್ಲಿ ಹೆಣ್ಣು ಸಮಾನತೆಯನ್ನು ಪಡೆದಿದ್ದಳು. ಆದರೂ ಗಂಡು ಬೇಟೆಯಾಡುವ ಚಿತ್ರಗಳನ್ನು ಕಾಣಬಹುದಾಗಿದೆ. ವಿನಃ ಹೆಣ್ಣು ಬೇಟೆಯಾಡುವ ಚಿತ್ರಗಳು ಕಾಣಲಾಗುವುದಿಲ್ಲ. ಇವು ಎಲ್ಲಿಯೂ ದಾಖಲಾಗಿಲ್ಲವೆಂದೇ ಹೇಳಬಹುದು. ಕೃಷಿಯು ಆರಂಭವಾದೊಡನೆ 'ಹೊಲಕ್ಕೆ ಪುರುಷ, ಒಲೆಗೆ ಸ್ತ್ರೀ' ಎಂದು ಪುರುಷ ಪ್ರಧಾನವು ರೂಪಿಸಿಕೊಟ್ಟಿದೆ. ಪುರುಷನು ನೈಸರ್ಗಿಕವಾಗಿ ಹೆಣ್ಣು ತೊಳ್ಬಲವನ್ನು ಹೊಂದಿ ಕುಟುಂಬದ ಹೊರಗೆ ದುಡಿದು ಆಹಾರ ಸಂಗ್ರಹಣೆ ಮಾಡಿಕೊಂಡು ಬಂದರೆ, ಹೆಚ್ಚು ಕುಟುಂಬದ ಒಳಗೆ ಅದನ್ನು ಬೇಯಿಸುವವಳಾಗಿ ಕಂಡುಬರುತ್ತಾಳೆ. ಗಂಡಸು ದುಡಿದಂತ ಆದಾಯದಲ್ಲಿ ಮಹಿಳೆ ಆಯಾಸವಾಗಿ ಪಾಲ್ಗೊಳ್ಳುವ ಪರಾವಲಂಬಿ ಜೀವಿಯಾದಳು. ಮಹಿಳೆಯನ್ನು ಆರ್ಥಿಕವಾಗಿ ಆರ್ಥಿಕ ಶೋಷಣೆಯಿಂದ ಮುಕ್ತಗೊಳಿಸಿ ಸಾಮಾಜಿಕ ಸಮಾನತೆ ತರಲು ಹಲವಾರು ಶಾಸನಗಳು ಕಾರ್ಯಗತಗೊಂಡರೂ, ಅವೆಲ್ಲವೂ ಕಾಗದ ಪತ್ರಗಳಾಗಿಯೇ ಉಳಿದುಕೊಂಡಿರುವುದು ಮಹಿಳೆಯರಿಗೆ ಒಂದು ದೊಡ್ಡ ಸಮಸ್ಯೆಯಾಗಿ ಉಳಿದುಕೊಂಡಿದೆ.

ಮಹಿಳೆಯು ರಾಜಕೀಯದಲ್ಲಿ ಭಾಗವಹಿಸಬೇಕಾದರೆ ಕೆಲವೊಂದು ಸಮಸ್ಯೆಗಳನ್ನು ಎದುರಿಸುವ ಪ್ರಸಂಗಗಳು ಒದಗಿಬರುತ್ತವೆ. ಮಹಿಳೆಯರು ಯಾವುದೇ ವಲಯದಲ್ಲಿ ಭಾಗವಹಿಸಬೇಕಾದರೆ ಪುರುಷರ ಅನುಮತಿಯನ್ನು ಪಡೆದುಕೊಂಡೇ ಭಾಗವಹಿಸಬೇಕಾಗುವ ಪ್ರಸಂಗ ಕಂಡುಬರುತ್ತಿತ್ತು. ಅಧಿಕಾರ ಚಲಾಯಿಸುವ ಯಾವುದೇ ಸ್ಥಾನಗಳನ್ನು ಪುರುಷ ಪ್ರಧಾನರು ಮಹಿಳೆಯರಿಗೆ ಬಿಟ್ಟುಕೊಡದೆ ತಾವು ಸೂಚಿಸಿದ ಕೆಲಸಗಳಲ್ಲಿ ಭಾಗವಹಿಸುವಂತೆ ಮಾಡಿ ಅವರನ್ನು ತಮ್ಮ ಹಿಡಿತದಲ್ಲಿಟ್ಟು ಕೊಳ್ಳುವಲ್ಲಿ ಯಶಸ್ವಿಯಾದರು.

ಒಂದು ಮುಖ್ಯವಾದ ಕೆಲಸವನ್ನು ಮಾಡಬೇಕಾದ ಪ್ರಸಂಗ ಒದಗಿಬಂದರೆ, ಪುರುಷನು ತಾನೇ ಮೊದಲು ನಿರ್ಣಯವನ್ನು ತೆಗೆದುಕೊಂಡು ನಂತರ ಬೇಕೋ ಬೇಡವೆಂಬಂತೆ ಮಹಿಳೆಯ ಸಲಹೆಗಳನ್ನು ಕೇಳಿ ನಂತರ ತಾನೇ ನಿರ್ಣಯವನ್ನು ತೆಗೆದುಕೊಳ್ಳುತ್ತಿದ್ದನು. ಆದರೆ ಇಲ್ಲಿ ಪುರುಷನು 'ಮಹಿಳೆ' ಎನ್ನುವ ಕಾರಣದಿಂದ ಅವಳಿಗೆ ಯಾವುದೇ ಸ್ವಾತಂತ್ರ್ಯವನ್ನು, ನಿರ್ಣಯವನ್ನು, ಸ್ವಂತ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ವಂಚಿತಳನ್ನಾಗಿ ಮಾಡಿ ಅವಳ ದೇಹ, ಮನಸ್ಸು ಮತ್ತು ಲೈಂಗಿಕತೆಗೆ ಸಂಬಂಧಪಟ್ಟಂತ ನಿರ್ಬಂಧಗಳನ್ನು ಹೇರುತ್ತಾನೆ.

ಸಾಂಪ್ರದಾಯಿಕವಾಗಿ ಬ್ರಹ್ಮಚರ್ಯ ಆಶ್ರಮದಿಂದ ವಂಚಿತಳನ್ನಾಗಿ ಮಾಡಿದ ಪುರುಷ ಪ್ರಧಾನ ಸಮಾಜವು ಶಿಕ್ಷಣದಿಂದಲೂ ವಂಚಿತಳನ್ನಾಗಿ ಮಾಡಿದೆ. ಜೊತೆಗೆ ಪಿತ್ರಾರ್ಜಿತ ಆಸ್ತಿಯ ಹಕ್ಕನ್ನು

ಪಡೆಯದಂತೆ ನಿರ್ಬಂಧನೆ ಹೇರಿದೆ. ಮಹಿಳೆಗೆ ಹೆಚ್ಚಿನ ಶಿಕ್ಷಣವನ್ನು ಕೊಡಿಸಿದರೆ, ಅವಳು ತನ್ನ ತಿಳುವಳಿಕೆಯಿಂದ ಉನ್ನತ ಮಟ್ಟದಲ್ಲಿ ಬೆಳದು ನಮ್ಮನ್ನು ಕೀಳು ದೃಷ್ಟಿಯಿಂದ, ಕೆಳಮಟ್ಟದವರಂತೆ ಕಾಣುತ್ತಾಳೆ ಎನ್ನುವ ಮನೋಭಾವದಿಂದ ಮತ್ತು ಇವಳಿಗೇಕೆ ಹೆಚ್ಚಿನ ಶಿಕ್ಷಣ, ಕೊಟ್ಟ ಮನೆಗೆ ತೆರಳುವವಳು ಎಂದು ಶಿಕ್ಷಣ ಕೊಡಿಸುವಲ್ಲಿಯೂ ವಂಚಿತಳನ್ನಾಗಿ ಮಾಡಿ, ಶಿಕ್ಷಣವನ್ನು ಕಡಿತಗೊಳಿಸುವ ಸಂಗತಿಗಳನ್ನು ನಾವು ಮನಗಾಣಬಹುದು.

ಪುರುಷರು ಮಹಿಳೆಯರನ್ನು ನಾಲ್ಕು ಗೋಡೆಗಳಲ್ಲಿ ಸೀಮಿತವಾಗಿರುವಂತೆ ಗೃಹ ಕೆಲಸದಲ್ಲಿ ತೊಡಗಿಸಿ ಬರುಬರುತ್ತ ಅವರನ್ನು ಆರ್ಥಿಕತೆಯಿಂದ ಸಬಲೀಕರಣಗೊಳ್ಳದಂತೆ ತಮ್ಮ ಅಡಿಯಾಳುಗಳನ್ನಾಗಿ ಮಾಡಿಕೊಂಡು ತಾವು ಹೇಳಿದಂತೆ ಕೇಳಿಕೊಂಡಿರುವಂತ ಸ್ಥಿತಿಗೆ ಪುರುಷ ಪ್ರಧಾನವು ತಂದುಬಿಟ್ಟಿರುತ್ತದೆ. ಆದರೂ ಸ್ತ್ರೀಯರು ಪುರುಷ ಪ್ರಧಾನರು ಹಾಕಿಕೊಟ್ಟ ನೆಲೆಯಲ್ಲಿಯೇ ಮುಂದುವರೆದು ನಂತರ ಅವರು ಆರ್ಥಿಕತೆಯಿಂದ ಸಬಲೀಕರಣವನ್ನು ಹೊಂದಿ ಪುರುಷರ ಸರಿಸಮನಾಗಿ ಎಲ್ಲ ವಲಯಗಳಲ್ಲಿ ಭಾಗವಹಿಸಲು ಪ್ರಾರಂಭಿಸಿದರು. ಪುರುಷನಿಗಿಂತ ನಾವು ಯಾವುದರಲ್ಲಿಯೂ ಕಡಿಮೆಯಿಲ್ಲ ಎನ್ನುವ ರೀತಿಯಲ್ಲಿ ಸರಿಸಮನಾಗಿ ದುಡಿಯಲು ಪ್ರಾರಂಭಿಸಿದರು. ಇದನ್ನರಿತ ಪುರುಷ ಪ್ರಧಾನರು ದಿಕ್ಕು ತೋಚದೆ ಸ್ತ್ರೀಯರ ಮೇಲೆ ಯಾವುದಾದರೊಂದು ಬಲವಾದ ನಿರ್ಬಂಧನೆಯನ್ನು ಹೇರಲೇಬೇಕು ಅಂದಾಗ ಮಾತ್ರ ಇವರು ನಮ್ಮ ಹಾದಿಗೆ ಮರಳಿ ಬರುತ್ತಾರೆನ್ನುವ ಉದ್ದೇಶದಿಂದ ಮಹಿಳೆಯರ ದೇಹ ಮತ್ತು ಮನಸ್ಸಿನ ಮೇಲೆ ತಾಯ್ತನದ ಪ್ರಭಾವ ಬೀರುವಂತೆ ನಿರ್ಬಂಧನೆಯನ್ನು ಹೇರಿದರು.

ಮಹಿಳಾ ಸಂಘಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಮಹಿಳೆಯರ ಆರ್ಥಿಕ ಪ್ರಗತಿಗಾಗಿ, ರಾಜಕೀಯ ಪ್ರವೇಶಕ್ಕಾಗಿ, ಶೈಕ್ಷಣಿಕ ಉದ್ದೇಶಕ್ಕಾಗಿ ಮಹಿಳೆಯರ ಜಾಗೃತಿಗಾಗಿ ಮತ್ತು ಅವರ ಶ್ರೇಯಸ್ಸಿಗಾಗಿ ಹಗಲು ರಾತ್ರಿ ಎನ್ನದೆ ಶ್ರಮವಹಿಸಿ ದುಡಿದಾಗ ಮಾತ್ರ ಮಹಿಳೆಯರ ಮೇಲಿನ ಕೆಲವು ನಿರ್ಬಂಧನೆಗಳು ಕಡಿಮೆಯಾಗಿ ಪ್ರಗತಿಯನ್ನು ಸಾಧಿಸುವಲ್ಲಿ ಮುಂದಾಗುತ್ತಾರೆ.

'ಹೆಣ್ಣಿನ ಬದುಕಿನಲ್ಲಿ ತಾಯ್ತನ' ಎನ್ನುವ ಅಧ್ಯಯನದ ವ್ಯಾಪ್ತಿಯು ಮಹಿಳೆಯರ ಆರ್ಥಿಕ ಸ್ವಾತಂತ್ರ್ಯದಿಂದ ಹಿಡಿದು ಮೇಲ್ವರ್ಗದ ಮತ್ತು ಕೆಳವರ್ಗದ ಸ್ತ್ರೀಯರ ಶೋಷಣೆಗಳವರೆಗೆ ಮತ್ತು ಅವರ ದೇಹ ಮತ್ತು ಮನಸ್ಸಿನ ಮೇಲೆ ಯಾವ ರೀತಿಯಾಗಿ ಪುರುಷ ಪ್ರಧಾನ ಚಿಂತನೆಯು ಮುಂದುವರೆಸಿಕೊಂಡು ಹೋಗುತ್ತಿದೆ. ಇದಕ್ಕೆ ಯಾವ ಯಾವ ಸಂಘಸಂಸ್ಥೆಗಳು ಯಾವ ರೀತಿಯ ಕ್ರಮಗಳನ್ನು ಕೈಗೊಂಡರೆ ಮಹಿಳಾ ಅಭಿವೃದ್ಧಿಯಾಗುತ್ತದೆ ಎಂಬುದನ್ನು ಅಧ್ಯಯನದ ವ್ಯಾಪ್ತಿಯು ಒಳಗೊಂಡಿರುತ್ತದೆ.

## ಅಧ್ಯಯನದ ಮಹತ್ವ

ತಾಯ್ತನವು ಹೆಣ್ಣಿಗೆ ನಿಸರ್ಗ ಸಹಜವಾಗಿ ಬಂದಿರುವಂತಹುದಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣು ಪತ್ನಿಯಾಗಿರುವುದಕ್ಕಿಂತ ಹೆಚ್ಚಾಗಿ ತಾಯಿಯಾಗಿ ಗೌರವವನ್ನು ಪಡೆದುಕೊಂಡಿದ್ದಾಳೆ. ಬಂಜೆಯಾಗಿ ಕಣ್ಣೀರು ಹರಿಸುವ ಹೆಣ್ಣಿನ ಬಾಳು ಸಾಗರವಾಗಿರುತ್ತದೆ. ಹೆಂಗಸಿನ ಬದುಕು ಬವಣೆ ಹೇಗಾದರೂ ಇರಲಿ ಮೋಕ್ಷವನ್ನು ಪಡೆದುಕೊಳ್ಳಬೇಕಾದರೆ, ಕುಲಪುತ್ರನಿಂದಲೇ "ಅಪುತ್ರಸ್ಯಗತಿರ್ನಾಸ್ತಿ" ಬಂಜೆಯಾಗಿ ಬಾಳುವುದಕ್ಕಿಂತ ಹೆಣ್ಣು ಮಗುವಿನ ತಾಯಿಯಾದರೂ ಮಕ್ಕಳನ್ನು ಪಡೆದುಕೊಳ್ಳಬೇಕೆಂಬ ಹಂಬಲ. ಹೀಗಿರುವಾಗ ಸ್ತ್ರೀಯು ತಾಯ್ತನವನ್ನು ಶಾಪವೆಂದು ತಿಳಿಯುವುದೇ ಇಲ್ಲ. ದುಷ್ಟ ಮಗನನ್ನು ಕಂಡರೂ, ದುಷ್ಟ ತಾಯಿಯನ್ನು ಕಾಣಲಾರೆವು ಎಂಬ ಮಾತು 'ಮಾತೃದೇವೋಭವ' ತಾಯಿಯೇ ದೇವರೆಂಬ ಗೌರವ ತಾಯಿಯ ಪ್ರೇಮ ಸ್ವರ್ಗಕ್ಕಿಂತ ಹಿರಿದು ಎಂಬ ಆದರ 'ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ' ಎಂಬ ನಾಣ್ಣುಡಿಯಂತೆ ಈ ಎಲ್ಲವೂ ತಾಯ್ತನವನ್ನು ವರವೆಂದೇ ಕೊಂಡಾಡುತ್ತವೆ.[1]

ನಿಸರ್ಗ ಸಹಜವಾಗಿ ಸ್ತ್ರೀಯು ತಾಯ್ತನವನ್ನು ಪಡೆಯುವಲ್ಲಿ ಎಷ್ಟು ಕಷ್ಟಗಳನ್ನು ಅನುಭವಿಸಿದರೂ ಅದು ಅವಳಿಗೆ ತಾತ್ಕಾಲಿಕವಾಗಿ ಕಷ್ಟವೆನಿಸಿಕೊಳ್ಳುತ್ತದೆ. ತಾಯ್ತನದ ನೋವು, ಕಷ್ಟಗಳನ್ನೆಲ್ಲ ಸಹಿಸುವವಳು ಹೋರುವವಳು ಅವಳಲ್ಲವೇ? ಸೃಷ್ಟಿ ಕ್ರಿಯೆಗಳಲ್ಲಿ ಎಲ್ಲಾ ಜೀವಿಗಳಲ್ಲಿಯೂ ಹೆಣ್ಣಿನ ಪಾತ್ರ ತುಂಬಾ ಮಹತ್ವವನ್ನು ಪಡೆದುಕೊಂಡಿದೆ. ಇತರೆ ಜೀವಿಗಳಿಗಿಂತ ಬುದ್ಧಿವಂತರಾದ ಮಾನವರಲ್ಲಿ ತಾಯ್ತನ ಅಷ್ಟು ಸುಲಭವಾಗಿ ಕಂಡುಬರುವುದಿಲ್ಲ. ಪ್ರಕೃತಿಯು ಹೆಣ್ಣಿಗೆ ಗರ್ಭಕೋಶ ಮತ್ತು ಸ್ತನಗಳನ್ನು ವರವಾಗಿ ಕೊಟ್ಟಿದೆ ಆದರೆ ತಾಯ್ತನವನ್ನು ವರವಾಗಿ ಕೊಟ್ಟಿಲ್ಲ. ನಿಸರ್ಗವು ಹೆಣ್ಣಿನಲ್ಲಿ ಹುದುಗಿಟ್ಟ ಯಾವುದೋ ಅದ್ಭುತ ಶಕ್ತಿಯು ತಾಯ್ತನವನ್ನು ಪಡೆಯುವಲ್ಲಿ ಯಶಸ್ಸಿಯನ್ನು ಕಂಡಿದೆ. ಹೆಣ್ತನ ಪೂರ್ಣವಾಗುವುದೇ ತಾಯ್ತನದಿಂದ ಎಂಬ ನಂಬಿಕೆ ಸಾಮಾಜಿವಾಗಿ ಬೇರೂರಿಬಿಟ್ಟಿದೆ.

ಹೆಣ್ಣು ಸಾಮಾಜಿಕವಾಗಿ ತಾಯ್ತನದ ಬಗ್ಗೆ ಬಹಳಷ್ಟು ಜಾಗೃತಳಾಗಿ ತಾಯ್ತನವನ್ನು ಪಡೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ನಿಸರ್ಗವು ಗರ್ಭಕೋಶ, ಸ್ತನಗಳನ್ನು ಯಾವ ರೀತಿಯಾಗಿ ಕೊಟ್ಟಿದೆಯೋ ಅದೇ ರೀತಿಯಾಗಿ ವಿವಾಹವೆನ್ನುವ ಸಾಮಾಜಿಕ ಸಂಸ್ಥೆಯಿಂದ ವಿವಾಹಿತಳೆಂದು ಪರಿಗಣಿಸಿದ ನಂತರವೇ ತಾಯ್ತನವನ್ನು ಪಡೆಯುವಲ್ಲಿ ವಿಮುಕ್ತಳಾಗುತ್ತಾಳೆ.

ನಿಸರ್ಗ ಸಹಜವಾಗಿ ಹೆಣ್ಣು ತಾಯ್ತನವನ್ನು ಪಡೆದುಕೊಳ್ಳುವಲ್ಲಿ ಹೆರಿಗೆಯ ನೋವುಗಳಂತಹ ಕಷ್ಟಗಳನ್ನು ಅನುಭವಿಸಬೇಕಾದ ಪ್ರಸಂಗಗಳು ಒದಗಿಬಂದಿರುತ್ತವೆ. ತಾಯ್ತನವು ಹೆಣ್ಣಿನ ಮಾನವ ಜನಾಂಗಕ್ಕೆ ಮಾತ್ರ ಸಂಬಂದಿಸಿದ್ದಲ್ಲ. ಅದು ನಿಸರ್ಗದಲ್ಲಿರುವ ಎಲ್ಲ ಪ್ರಾಣಿಗಳಿಗೂ ಸಂಬಂಧಿಸಿದ್ದು.

ಎಲ್ಲ ಪ್ರಾಣಿಗಳಿಗೆ ತೊಂದರೆಯಾದಂತೆ ಮಾನವ ಜನಾಂಗಕ್ಕೂ ತೊಂದರೆಯಾಗ ಬಹುದು. ಆದರೆ ಹೆಣ್ಣು ತಾಯ್ತನವನ್ನು ಪಡೆಯುವಾಗ ಇವೆಲ್ಲವುಗಳನ್ನು ನೋವುಗಳೆಂದು ಪರಿಗಣಿಸುವುದೇ ಇಲ್ಲ. ಹೀಗಾಗಿ ಅವಳಿಗೆ ನಿಸರ್ಗದಲ್ಲಿ ತಾಯ್ತನವು ಶಾಪವಾಗಿ ಕಂಡುಬರುವುದಿಲ್ಲ.

ಅತ್ಯಾಚಾರಕ್ಕೆ ಒಳಗಾದ ಹೆಣ್ಣಿಗೆ ತಾಯ್ತನವು ಲಭಿಸಿದರೆ ಅದು ಸಾಮಾಜಿಕ ನಿರ್ಬಂಧನೆಗಳನ್ನು ಮೀರಿದಂತೆ ಎಂದು ಅವಳನ್ನು ಕೀಳಾಗಿ ಕಾಣುತ್ತಾರೆ. ಅವಳು ತಾಯ್ತನವನ್ನು ಇಷ್ಟಪಟ್ಟು ಪಡೆದು ಕೊಂಡಿರುವುದಿಲ್ಲ. ಇದು ಸಮಾಜಕ್ಕೆ ತಿಳಿದ ಸಂಗತಿಯಾದರು ಇವಳನ್ನು ಸಮಾಜವು ಕಷ್ಟಗಳಿಗೆ ಸಿಲುಕಿಸಿ ಅವಳನ್ನು ಶೋಷಿಸಲು ಪ್ರಾರಂಭಿಸುತ್ತಾರೆ. ಇವಳಿಗೆ ತಾಯ್ತನವು ಯಾವುದೋ ಒಂದು ದುರ್ಘಟನೆಯಿಂದ ಪಡೆದುದಾಗಿರುತ್ತದೆ. ಇಂತಹ ದುರಂತಗಳಿಗೆ ಸಿಲುಕಿಕೊಂಡ ಹೆಂಗಸರಿಗೆ ತಾಯ್ತನವು ಶಾಪವಾಗಿ ನಿಸರ್ಗದಲ್ಲಿ, ಸಮಾಜದಲ್ಲಿ ಕಂಡುಬರುತ್ತದೆ.

ಸಾಮಾಜಿಕವಾಗಿ ಹೆಣ್ಣಿಗೆ ತಾಯ್ತನವು ಏಕೆ ಶಾಪವಾಗಿ ಪರಿಣಮಿಸಿದೆ ಮತ್ತು ತಾಯ್ತನವು ಹೆಂಗಸಿನ ಬದುಕಿಗೆ ಮತ್ತು ನಿಸರ್ಗ ಸಹಜಶಕ್ತಿಗೆ ಹೊಂದಿಕೊಂಡಿದೆಯೇ ಎಂಬುದನ್ನು ಮತ್ತು ಮಹಿಳೆಯ ಬದುಕು ಯಾರದೋ ನಿಯಂತ್ರಣಕ್ಕೆ ಒಳಗಾಗಿರುವುದನ್ನೂ ಶೋಧ ಮಾಡುವುದು ತಾಯ್ತನವನ್ನು ಕುರಿತು ತಾಯ್ತನದ ವಿಶ್ವಾಸವನ್ನು ಕುರಿತು ಅಧ್ಯಯನ ಮಾಡುವುದು ಮತ್ತು ಹೆಂಗಸಿನ ಅಸ್ತಿತ್ವದ ಶೋಧದಲ್ಲಿ ತಾಯ್ತನವು ಅತಿಮುಖ್ಯವಾದ ಪಾತ್ರವನ್ನು ವಹಿಸಿದೆ ಎಂಬುದು ಅಧ್ಯಯನದ ಮಹತ್ವವಾಗಿದೆ.

## ಅಧ್ಯಯನದ ವಿಧಾನ

ತಾಯ್ತನವನ್ನು ಪುನರವಲೋಕನ ಮಾಡಬೇಕು. ಇದುವರೆಗಿನ ಸಾಮಾಜಿಕ ಚಿಂತನೆಗಳನ್ನು ಅಧ್ಯಯನಗಳ ಮೂಲಕ ಕೈಗೊಳ್ಳಬೇಕು. ತಾಯ್ತನವು ಸಾಮಾಜಿಕವಾಗಿ ಎಲ್ಲ ಮಹಿಳೆಯರಲ್ಲಿಯೂ ಕಂಡುಬರುವಂತಹುದು. ತಾಯ್ತನವನ್ನು ಪಡೆಯಬೇಕಾದರೆ, ಹುಡುಗಿಯು ಋತುಮತಿಯಾದಂದಿನಿಂದ ಅವಳು ತಾಯ್ತನಕ್ಕೆ ತಯಾರಿರುತ್ತಾಳೆ. ತಾಯ್ತನಕ್ಕೆ ಪೂರ್ವಭಾವಿಯಾಗಿ ಗಂಡು ಹೆಣ್ಣುಗಳಿಬ್ಬರು ದೈಹಿಕ ಸಂಪರ್ಕವನ್ನು ಹೊಂದಿರಬೇಕಾಗುತ್ತದೆ. ಅವಿವಾಹಿತಳಾಗಿ ತಾಯ್ತನವನ್ನು ಪಡೆದರೆ ಅದು ಸಾಮಾಜಿಕವಾಗಿ ನಿರ್ಬಂಧನೆ ಗೊಳಗಾಗಿ ಅವಳು ಶೋಷಣೆಗೊಳಗಾಗುತ್ತಾಳೆ. ಸಾಮಾಜಿಕ ಚೌಕಟ್ಟಿನೊಳಗೆ ಅವಿವಾಹಿತಳಾಗಿ ತಾಯ್ತನವನ್ನು ಪಡೆದುಕೊಳ್ಳುವಂತಿಲ್ಲ ಎನ್ನುವುದು ಕಂಡುಬರುತ್ತದೆ.

ತಾಯ್ತನದ ಹೊಸ ನಿರ್ವಚನವೆಂದರೆ, ತಾಯ್ತನವನ್ನು ವಿವರಿಸುವುದು/ವ್ಯಾಖ್ಯಾನಿಸುವುದು ಎಂದು ಅರ್ಥವಾಗುತ್ತದೆ. ವಿಭಿನ್ನ ನೆಲೆಗಳಿಂದ ತಾಯ್ತನವನ್ನು ನಿರ್ವಚಿಸಲಾಗಿದೆ. ತಾಯ್ತನದ ನಿರ್ವಚನದಲ್ಲಿ

ಅನೇಕ ರೀತಿಯ ವಿಚಾರಗಳು ಪಾಲ್ಗೊಳ್ಳುತ್ತವೆ. ತಾಯ್ತನದ ನಿರ್ವಚನದಲ್ಲಿ ಪಾಲುಗೊಳ್ಳುವ ವಿಭಿನ್ನ ನೆಲೆಗಳ ಹಿನ್ನೆಲೆಯಲ್ಲಿ ತಾಯ್ತನದ ಸ್ವಭಾವವನ್ನು ಮತ್ತು ತಾಯ್ತನದ ಸ್ವರೂಪವನ್ನು ಅದರ ವಾಸ್ತವಿಕತೆಯೊಂದಿಗೆ ನಿರ್ವಚಿಸುವುದು ಸಾಮಾಜಿಕ ಚಿಂತನೆಗಳ ಒಂದು ವಿಧಾನವಾಗಿದೆ.

ತಾಯ್ತನದ ನಿರ್ವಚನದಲ್ಲಿ ಅಧಿಕಾರ ಕೇಂದ್ರದ ರೂಪದಲ್ಲಿ ಪಿತೃಪ್ರಧಾನತೆಯನ್ನು ಪರಿಗಣಿಸಬಹುದಾಗಿದೆ. ಪಿತೃಪ್ರಧಾನತೆಯು ಪಿತೃ ಶಾಸನವುಳ್ಳ ಅಧಿಕಾರ ಕೇಂದ್ರಿತ ವ್ಯವಸ್ಥೆಯಾಗಿದೆ.[೫] ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರದು ಅಧೀನ ಸ್ಥಿತಿಯಿರುತ್ತದೆ. ಸ್ತ್ರೀ-ಪುರುಷ ಅಸಮಾನತಾ ಕಲ್ಪನೆಯನ್ನು ಪಿತೃಪ್ರಧಾನ ವ್ಯವಸ್ಥೆಯು ಹೆಚ್ಚು ಬೆಂಬಲಿಸುತ್ತದೆ.

## ಅಸಮಾನ ನೆಲೆಗಳು

ಪಿತೃ ಪ್ರಧಾನ ವ್ಯವಸ್ಥೆಯ ಉಗಮ ಮತ್ತು ವಿಕಾಸವನ್ನು ಸಾಮಾಜಿಕ ಹಿನ್ನೆಲೆಯಲ್ಲಿ ವಿಶ್ಲೇಷಣೆಗೊಳಪಡಿಸಿರುವ 'ಗೆರ್ಡಾಲರ್ನರ್ ರವರು ಹೇಳುವಂತೆ, ಪಿತೃಪ್ರಧಾನತೆಯು ಕ್ರಿ.ಪೂ.೬ನೇ ಶತಮಾನದಲ್ಲಿ ವಿಧಿವತ್ತಾಗಿ ಸ್ಥಾಪಿಸಲ್ಪಟ್ಟಿತ್ತು. ಆ ಕಾಲದಲ್ಲಿದ್ದ ಪ್ರಭುವರ್ಗ, ಅಧಿಕಾರವರ್ಗ, ನಿರ್ದಿಷ್ಟವಾದ ಕಾರಣಗಳನ್ನು ಮುಂದಿಟ್ಟುಕೊಂಡು ಕೆಳವರ್ಗದ ಜನರನ್ನು ಮತ್ತು ಸ್ತ್ರೀಯರನ್ನು ಪ್ರತ್ಯೇಕವಾಗಿ ಇಟ್ಟು ನೋಡಲು ಪ್ರಾರಂಭಿಸಿತು. ಈ ಪ್ರತ್ಯೇಕೀಕರಣದ ವಿರುದ್ಧ ನಡೆದಿರುವ ಹೋರಾಟಗಳು ಸಮಾಜದಲ್ಲಿ ನಡೆದಿರುವುದು ನಮಗೆ ಕಂಡುಬರುತ್ತದೆ. ವರ್ಗ ಬೇಧ ನೀತಿಯನ್ನು ಎದುರಿಸಿ ನಡೆಸಿದ ಹೋರಾಟಗಳಲ್ಲೂ ಸ್ತ್ರೀಯರು ಪ್ರತಿಭಟಿಸಿ ಹೋರಾಡಿದ ದಾಖಲೆಗಳು ಮಾತ್ರ ಸಿಗಲಾರದು ಎಂದು ಲರ್ನರ್ ಹೇಳುತ್ತಾರೆ.[೬]

ಸ್ತ್ರೀಯ ಅಧೀನ ಸ್ಥಿತಿ ಮತ್ತು ಸ್ತ್ರೀ-ಪುರುಷರ ನಡುವಿನ ಅಸಮಾನ ನೆಲೆಗಳು ಕಾಲಾನುಕ್ರಮದಲ್ಲಿ ಬದಲಾಗಿರುವ ಪರಿಸ್ಥಿತಿಗಳಾಗಿರಬಹುದು. ಪಿತೃಪ್ರಧಾನ ವ್ಯವಸ್ಥೆಯ ಅಧಿಕಾರ ಕೇಂದ್ರದಲ್ಲಿ ಸ್ತ್ರೀಯನ್ನು ಹಂತಹಂತವಾಗಿ ಹಿಮ್ಮೆಟ್ಟಿಸಿ ಅವರ ಲೈಂಗಿಕತೆಯ ಮೇಲೆ ಆಕ್ರಮಣವನ್ನು ಮಾಡಿ ಅವರ ಸ್ವಾತಂತ್ರ್ಯ, ಸಮಾನತೆ ಮತ್ತು ಅಧಿಕಾರವನ್ನು ತನ್ನ ನಿಯಂತ್ರಣದೊಳಗೆ ಹಾಕಿಕೊಂಡನು. ಜೊತೆಗೆ ಅವಳ ಮೇಲೆ ಎಲ್ಲ ರೀತಿಯಿಂದಲೂ ಹೆಚ್ಚಿನ ನಿರ್ಬಂಧನೆಗಳನ್ನು ಹೇರಿ ಅವಳು ಯಾವುದೇ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎನ್ನುವ ರೀತಿಯಲ್ಲಿ ಸ್ತ್ರೀ-ಪುರುಷರ ಅಸಮಾನ ನೆಲೆಗಳು ನೆಲೆಯೂರಿದ್ದವು.

**ಅಡಿ ಟಿಪ್ಪಣಿಗಳು**

೧. ಡಾ.ಎಚ್.ಎಸ್.ಶ್ರೀಮತಿ, ಗರ್ಭಾಶಯ : ಮಹಿಳೆಯ ಶಕ್ತಿ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು.೨, ೩, ೪, ೫.

೨. ಕೆ.ಭೈರಪ್ಪ, ಭಾರತೀಯ ಸಮಾಜ, ಪು.೮೨

೩. ಅಂದನೂರು ಶೋಭ, ಶ್ರೀಲಕ್ಷ್ಮಿ, ಮಹಿಳೆಯ ಮುನ್ನಡೆ, ಪು.೧೦೧

೪. ಡಾ.ಬಿ.ಎಂ.ರೋಹಿಣಿ, ಸ್ತ್ರೀ ಸಂವೇದನೆ, ಪು.೧೧

೫. ಗೀತಾಬಾಲಿನಾಯಕ್, ಕನ್ನಡ ಕಥನ ಸಾಹಿತ್ಯ ನಿರ್ವಚನ, ಪಿಎಚ್.ಡಿ. ಅಪ್ರಕಟಿತ ಮಹಾಪ್ರಬಂಧ, ಪು.೧೪

## ಅಧ್ಯಾಯ ೨

# ತಾಯ್ತನವನ್ನು ಕುರಿತ ಸಾಂಸ್ಕೃತಿಕ ಗ್ರಹಿಕೆಗಳು ಮತ್ತು ನಿರೀಕ್ಷೆಗಳು

ನಮ್ಮ ಪಿತೃಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಹೆಣ್ಣಿನ ಶೀಲ ಮತ್ತು ಪಾತಿವ್ರತ್ಯವು ಹೆಣ್ಣಿನ ವೈವಾಹಿಕ ಜೀವನದಲ್ಲಿ ಅತಿಮುಖ್ಯವಾದ ಪಾತ್ರವನ್ನು ವಹಿಸಿದೆ. ಪಿತೃಪ್ರಧಾನವಾದ ಮೌಲ್ಯಗಳು ಹೆಣ್ಣನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಂಡಿವೆ. ಹೆರುವ ಹೆಣ್ಣಿನ ತಾಯ್ತನದಷ್ಟೆ ಸರಳವಾಗಿ ತಂದೆತನ ಸಾಬೀತಾಗದ ಕಾರಣ, ಹೆಣ್ಣಿನ ಶೀಲ ಮತ್ತು ಪಾತಿವ್ರತ್ಯಕ್ಕೆ ಹೆಚ್ಚಿನ ಗಮನವನ್ನು ಕೊಟ್ಟು, ಹೆಣ್ಣನ್ನು ಗೃಹಬಂಧನದಲ್ಲಿ ಇಟ್ಟು, ಪುರುಷ ಪ್ರಧಾನವಂಶ ಮುಂದುವರೆಯುವ ಸಲುವಾಗಿ ಪುರುಷನು ಹೆಣ್ಣಿನ ಶೀಲ ಮತ್ತು ಪಾತಿವ್ರತ್ಯದ ಮೇಲೆ ಹೇರಿದ ಆದರ್ಶಗಳು ಪ್ರಧಾನ ಸಂಸ್ಕೃತಿಯ ಬೆನ್ನುಬು ಆದವು.

ಪಿತೃ ಪ್ರಧಾನ ಸಮಾಜವು ಹೆಣ್ಣನ್ನು ಎರಡನೇ ದರ್ಜೆಯ ಪ್ರಜೆಯನ್ನಾಗಿ ಪರಿವರ್ತಿಸಿದೆ. ಸ್ತ್ರೀಯರಲ್ಲಿ ಮುನ್ನುಗ್ಗುವ ಸ್ವಭಾವವು ಕಂಡುಬರುವುದೆ ಇಲ್ಲ. ಅವರಲ್ಲಿ ಭಯ, ಮಾರ್ದವತೆ, ಸಹನೆ, ತಾಳ್ಮೆ, ಭಾವನಾತ್ಮಕತೆ ಮುಂತಾದವುಗಳನ್ನು ಹೆಣ್ಣು ಗುಣಗಳೆಂದು, ಧೈರ್ಯ, ಸಾಹಸ, ಬುದ್ಧಿವಂತಿಕೆ, ಕ್ರಿಯಾಶೀಲತೆ, ಸ್ವಾತಂತ್ರ್ಯ ಮನೋಭಾವಗಳನ್ನು ಗಂಡುಗುಣಗಳೆಂದು ಅರ್ಥೈಸಿದೆ. ಹೆಣ್ಣಿಗೆ ಮಕ್ಕಳ ಪಾಲನೆ, ಪೋಷಣೆಯನ್ನೆಲ್ಲ ಅಂಟಿಸುವಲ್ಲಿ ಹೆಣ್ಣಿನ ಗುಣಗಳು ಪ್ರಕೃತಿ ಸಹಜ ಎಂದು ಸಾರುವಲ್ಲಿ ಈ ಪುರುಷ ಪ್ರಧಾನ ಸಂಸ್ಕೃತಿ ತನ್ನ ತಂದೆತನದ ಜವಬ್ದಾರಿಗಳಿಂದ ಜಾರಿಕೊಂಡಿತಲ್ಲದೆ, ಮನೆಯ ಹೊರಗಿನ ಕೆಲಸಗಳಿಗೆ ಗಂಡಿನ ಗುಣಗಳು ಅವರ ಶಕ್ತಿ ಸಾಮಾರ್ಥ್ಯವನ್ನು ಹೆಚ್ಚಿಸುತ್ತವೆ ಎನ್ನುವ ಗ್ರಹಿಕೆಯಿದೆ.

ವಿವಾಹ ಮಂಟಪದಲ್ಲಿ ಹೆಣ್ಣಿನ ಪ್ರಧಾನತೆಯು ಕಂಡುಬರುವುದಿಲ್ಲ. ವಿಧೇಯತೆಯ ಪರಾಧೀನತೆಯನ್ನು ಕಾಣುತ್ತೇವೆ. ಶೀಲ, ಗುಣ ಮತ್ತು ಪಾತಿವ್ರತ್ಯ ವಿಧೇಯತೆಗಳನ್ನು ಹಾಡಿಕೊಂಡಾಡಿದ ಸಂಸ್ಕೃತಿಯು ಮಹಿಳೆಯ ವ್ಯಕ್ತಿತ್ವವನ್ನು ಉಪೇಕ್ಷಿಸಿ, ಅವಳ ಇಡೀ ಬದುಕನ್ನು ನೇಪಥ್ಯಕ್ಕೆ ತಳ್ಳಿದೆ. 'ತಾಯಿತನ ಖಾತರಿಯದು, ತಂದೆತನ ಕೇವಲ ಊಹೆ ಎನ್ನುವ ಹಾಗೆ ತಾಯಿ ಯಾರೆಂದು ಹೇಳುವಷ್ಟು ಸುಲಭವಾಗಿ, ತಂದೆ ಯಾರು ಎನ್ನುವ ನಿಖರತೆಗಾಗಿಯೇ ಹೆಣ್ಣಿನ ಮೇಲೆ ಶೀಲದ ಹೊರೆಯನ್ನು ಹೊಸಿಲು ದಾಟದ ನಿರ್ಬಂಧವನ್ನು ಹಾಕಲಾಗಿದೆ. ಹೆಣ್ಣಿನ ಶೀಲದ ಬಗ್ಗೆ ಸಂಶಯವಿರುವುದು ರಾಮಾಯಣ ಕಾಲದಿಂದಲೂ ಅದು ಬೆಳೆದುಬಂದಿದೆ. ಆಧುನಿಕಯುಗದಲ್ಲೂ ಶೀಲದ ಸಂಶಯ ಪುರುಷರಿಗೆ ಮತ್ತಷ್ಟು ಹೆಚ್ಚಾಗಿ ಕಂಡುಬರುತ್ತದೆಂದು ಹೇಳಲಾಗಿದೆ. ಹೆಂಡತಿಯ ಶೀಲದ ಮೇಲಿನ ಸಂಶಯವು ಎಷ್ಟೋ ಗಂಡಸರನ್ನು ಹುಟ್ಟಿದ ಮಕ್ಕಳ ಕೊಲೆಗೆ ನೂಕಿದ ಸಂಗತಿಗಳು ನಮಗೆ ತಿಳಿದುಬರುತ್ತವೆ.

ಇಷ್ಟೆಲ್ಲ ಸ್ತ್ರೀಯ ಶೀಲದ ಮೇಲೆ ಕಟ್ಟುನಿಟ್ಟುಗಳಿದ್ದರೂ ಪುರುಷನ ಶೀಲದ ಮೇಲೆ ಯಾವ ಸರಹದ್ದುಗಳನ್ನು ಸಮಾಜವು ವಿಧಿಸಿರುವುದಿಲ್ಲ. ಪರಸ್ತ್ರೀ ವ್ಯಾಮೋಹದಲ್ಲಿ ನಲಿಯುವ ಗಂಡನನ್ನು ಹಿಡಿದು ಹಕ್ಕಿನಿಂದ ಕೇಳುವ ಸಾಮರ್ಥ್ಯವು ಬಹಳಷ್ಟು ಹೆಣ್ಣು ಮಕ್ಕಳಿಗಿರುವುದಿಲ್ಲ. ಹೆಣ್ಣು ಸಹನೆಯಿಂದ, ತಾಳ್ಮೆಯಿಂದ ಇರುವವಳು ಹೀಗಾಗಿ ಅವಳು ಪುರುಷ ಪ್ರಧಾನರ ಅಧೀನದಲ್ಲಿ ಇರುವವಳಾಗಿರುತ್ತಾಳೆ. 'ನಕ್ಕರೆ ನಗಲೇಳು ನಗೆಮೊಗದ ಕ್ಯಾದಿಗೆ, ನಾಮುಚ್ಚಿ ಮುಡಿದ ಮಲ್ಲಿಗೆ ಅವಳೊಂದು ಕ್ಷಣಕಾಲ ಮುಡಿಯಲಿ' ಎನ್ನುವ ಉದಾರಭಾವದಿಂದ ಗಂಡನನ್ನು ಹಂಚಿಕೊಳ್ಳು ಎಷ್ಟೋ ಹೆಣ್ಣುಗಳನ್ನು ನಾವು ಕಾಣಬಹುದು. ಪರಾವಲಂಬಿಯಾಗಿ ಬೆಳೆಸಿ ಸದಾ ಆಸರೆಗಾಗಿ ಕಾದ ಲತೆಯಂತೆ ವರ್ಣಿಸುವ ಹೆಣ್ಣಿನ ಬದುಕಿನಲ್ಲಿ ಆಯ್ಕೆಗಳಿಗಿಂತ, ಅನಿವಾರ್ಯಗಳೇ ಹೆಚ್ಚಾಗಿ ಕಂಡುಬರುತ್ತವೆ.[೧]

ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಸಾಮಾಜಿಕ ವಿವಾಹಿತಳಾಗಿಯೇ ತಾಯ್ತನವನ್ನು ಪಡೆದುಕೊಳ್ಳ ಬೇಕೆಂಬ ನಿಯಮಗಳು ಇರುವುದು ಸಾಮಾನ್ಯವಾಗಿದೆ. ವಿವಾಹ ಎನ್ನುವ ಸಂಸ್ಥೆಯಿಂದ ಹೊರಗುಳಿದೆ ತಾಯಿಯಾದ ಮಹಿಳೆಯರ ಪರಿಸ್ಥಿತಿ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಅತ್ಯಂತ ಸಮಸ್ಯಾತ್ಮಕ ವಾದುದಾಗಿದೆ. ವಿವಾಹವಾಗದೆ ಸಂತತಿಯ ಮುಂದುವರಿಕೆ ಸಾಧ್ಯವಿಲ್ಲ ಎನ್ನುವ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ವಿವಾಹ ಸಂಬಂಧವನ್ನು ಪ್ರವೇಶಿಸದೇ ತಾಯಿಯಾರಾದ ಸ್ತ್ರೀಯರು ನಿಂದನೆಗಳಿಗೆ ಮತ್ತು ಟೀಕೆಗಳಿಗೆ ಗುರಿಯಾಗಬೇಕಾಗುತ್ತಿತ್ತು. ಆದರೆ ಇಂತಹ ಸಂಸ್ಕೃತಿಯು ಪಾಶ್ಚಿಮಾತ್ಯರಲ್ಲಿ ಕಂಡುಬರುತ್ತಿರಲಿಲ್ಲ. ಪಾಶ್ಚಿಮಾತ್ಯರಲ್ಲಿ ತಮ್ಮದೇ ಆದ ಸಂಸ್ಕೃತಿಯು ಕಂಡುಬರುತ್ತಿತ್ತು. ಪಾಶ್ಚಿಮಾತ್ಯರಲ್ಲಿ ಕಂಡುಬಂದಂತ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯಲ್ಲಿ ಕಂಡುಬರುತ್ತಿರಲಿಲ್ಲ.[೨]

ಧರ್ಮಜಾತಿಗಳಲ್ಲಿ ಮಹಿಳೆಯರ ಪಾತ್ರಗಳು ಹಾಗೂ ಸ್ಥಾನಗಳನ್ನು ವಿವಿಧ ರೀತಿಯಲ್ಲಿ ಪ್ರಭಾವಿಸುತ್ತಿರುವ ವ್ಯವಸ್ಥೆಗಳಲ್ಲಿ ಧರ್ಮವೂ ಒಂದು. ಎಲ್ಲಾ ಧರ್ಮ ಜಾತಿಗಳಲ್ಲಿ ಪ್ರಗತಿಪರವಾದ ಮೌಲ್ಯಗಳು ಹಾಗೂ ಆಚರಣೆಗಳು ಅಸ್ತಿತ್ವದಲ್ಲಿದ್ದರೂ ಅವುಗಳಿಗೆ ಹೆಚ್ಚು ಪ್ರಚಾರವಿಲ್ಲ. ಸ್ತ್ರೀಯನ್ನು ಕುರಿತ ಧರ್ಮದ ಧೋರಣೆಗಳು ದ್ವಿಮುಖ ಮೌಲ್ಯಗಳನ್ನು ಪ್ರತಿಪಾದಿಸುತ್ತಿವೆ. ಒಂದೆಡೆ ಆಕೆಯನ್ನು ದೇವತೆಯೆಂದು ಘೋಷಿಸುವುದು, ಮತ್ತೊಂದೆಡೆ ಆಕೆಯ ಮೇಲಿನ ದೌರ್ಜನ್ಯಕ್ಕೆ ಮಾನ್ಯತೆ ನೀಡುವುದು ಇದು ಧರ್ಮದಲ್ಲಿ ಅಡಗಿರುವ ವೈರುಧ್ಯಗಳಿಗೆ ಒಂದು ಉದಾಹರಣೆಯಾಗಿದೆ.

ಧಾರ್ಮಿಕ ಆಚರಣೆಗಳನ್ನು ಆಚರಿಸುತ್ತಿದ್ದವರು ಹೆಚ್ಚಾಗಿ ಪುರುಷರೇ ಆಗಿದ್ದುದರಿಂದ, ಹೆಣ್ಣಿಗೆ ಸ್ವತಂತ್ರವಾದ ಅಸ್ತಿತ್ವವಿದೆ. ಆಕೆ ವ್ಯಕ್ತಿಯಾಗಿ ಎಲ್ಲ ಧಾರ್ಮಿಕ ಆಚರಣೆಗಳಲ್ಲಿ ಭಾಗವಹಿಸಬಹುದು ಎನ್ನುವ ಅಂಶಕ್ಕೆ ಗಮನವನ್ನು ಕೊಡುತ್ತಲೇ ಇರಲಿಲ್ಲ. ಧರ್ಮವು ಬಹಳಷ್ಟು ಸ್ತ್ರೀಯರ ಪಾಲಿಗೆ

ಧರ್ಮದ ಪಾತ್ರವನ್ನು ನಿರ್ದೇಶಿಸುವಂತಹ ಒಂದು ಸಾಮಾಜಿಕ ನಿಯಂತ್ರಣವಾಗಿ ಕಾರ್ಯನಿರ್ವಹಿಸುತ್ತಿದೆ ಹೊರತು, ಮತ್ತ್ಯಾವ ರೀತಿಯಲ್ಲಿ ಅವರ ಬದುಕಿನ ಮೇಲೆ ಪರಿಣಾಮ ಬೀರಲಿಲ್ಲ. 'ಮಾತೃದೇವೋಭವ' ಎಂದು ಸಾರುವುದರ ಮೂಲಕ ಸ್ತ್ರೀಯನ್ನು ದೈವತ್ವದ ಪಟ್ಟಕ್ಕೇರಿಸಿದ ಧರ್ಮ ಆಕೆ ಸತ್ತ ಪತಿಯೊಡನೆ ಜೀವಂತವಾಗಿ ಚಿತೆಯೇರುವಂತೆ ಅಮಾನುಷ ಆಚರಣೆಗಳಿಗೂ ಅಂಗೀಕಾರ ನೀಡಿದೆ. ಮಾನವ ಕುಲದ ಸೃಷ್ಟಿ ಹಾಗೂ ಪಾಲನೆ ಪೋಷಣೆಯನ್ನು ಹೊತ್ತು ಸ್ತ್ರೀಗೆ ಯಾವ ಧರ್ಮವೂ ಪರಿಪೂರ್ಣವಾದ ಸ್ಥಾನವನ್ನು ಕಲ್ಪಿಸಿಲ್ಲ. ಹೆಣ್ಣಿಗೆ ನೀಡಿರುವ ಹಕ್ಕುಗಳು ಕೆಲವು ಆದರೆ ಅವಳಿಗೆ ಹೇರಿರುವ ನಿರ್ಬಂಧನೆಗಳು ನೂರಾರು. ಕೆಲವು ನೀಡಿದ ಹಕ್ಕುಗಳು ಸಾಂಸಾರಿಕ ಚೌಕಟ್ಟಿನಲ್ಲಿ ಮಾತ್ರ ಅನುಭವಿಸಬೇಕು ಎನ್ನುವ ನಿರ್ಬಂಧಗಳು ಇಂದಿಗೂ ಆಚರಣೆಯಲ್ಲಿವೆ.[೩]

ಕೃಷಿ ಪ್ರಧಾನವಾದ ಸಮಾಜದಲ್ಲಿ ಸ್ತ್ರೀಯ ಪಾತ್ರ ಅತ್ಯಂತ ಮಹತ್ವವನ್ನು ಪಡೆದಿತ್ತು. ಮಾನವ ಜನಾಂಗದ ಉಳಿವು ಹಾಗೂ ಮುಂದುವರಿಕೆಯೂ ಸ್ತ್ರೀಯ ಕೈಯಲ್ಲೇ ಇದ್ದುದರಿಂದ ಆಕೆಯ ಜೈವಿಕ ಜವಾಬ್ದಾರಿಯೂ ಅಷ್ಟೇ ಮಹತ್ವವನ್ನು ಪಡೆದಿತ್ತು. ಸ್ತ್ರೀ ದೇವತೆ, ಜಗನ್ಮಾತೆಯಾಗಿ, ಜಗತ್ ರಕ್ಷಕಿಯಾಗಿ, ಅತ್ಯಂತ ಪ್ರಬಲವಾದ ಸ್ಥಾನದಲ್ಲಿದ್ದಳು. ಕಾಲವು ಬದಲಾದಂತೆ ಪುರುಷ ದೇವತೆಗಳು ಉನ್ನತ ಸ್ಥಾನಗಳಿಗೆ ಪರಿವರ್ತನೆಗೊಂಡವು. ಹೀಗೆ ಪುರುಷ ಪ್ರಧಾನ ಮೌಲ್ಯಗಳು ತಮ್ಮ ಪ್ರಭಾವವನ್ನು ಬೀರುತ್ತಾ ಹೋದಂತೆಲ್ಲಾ ಸ್ತ್ರೀಯರ ಸ್ಥಾನ ಮೌಲ್ಯಗಳು ಕ್ಷೀಣಿಸುತ್ತ ಬಂದು, ಆಕೆಯನ್ನು ಹೀನ ಸ್ಥಿತಿಗೆ ತಂದವು.

ಪಿತೃ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ತಾಯ್ತನವು ಒಂದು ಗೌರವಾನ್ವಿತ ಸ್ಥಾನವನ್ನು ಪಡೆದುಕೊಂಡಿದೆ. ಒಬ್ಬ ಗಂಡಸಿನ ಪತ್ನಿಯಾಗಿರುವುದಕ್ಕಿಂತಲೂ ಹೆಚ್ಚಾಗಿ ಸ್ತ್ರೀಯಾತ್ಮಕ ಗುರುತನ್ನು(feminine Identity) ತಾಯಿಯಾಗಿ ಹೆಣ್ಣು ಪಡೆದುಕೊಂಡಿದ್ದಾಳೆ. ಗಂಡಸು ಹೊರಗೆ ದುಡಿದು ತನ್ನ ಕೆಲಸದಲ್ಲಿ ಯಶಸ್ಸನ್ನು ಪಡೆಯುವುದರ ಮೂಲಕ ಕುಟುಂಬಕ್ಕೆ ಬದ್ಧನಾಗಿ ಕಂಡುಬರುತ್ತಾನೆ. ಮಹಿಳೆಯೂ ಸಹ ತಾಯಿಯಾಗಿ ಗೃಹಕೃತ್ಯಗಳಲ್ಲಿ ತೊಡಗುವುದರ ಮೂಲಕ ತನ್ನ ಕೌಟುಂಬಿಕ ಬದ್ಧತೆಯನ್ನು ನಿಭಾಯಿಸಬೇಕೆಂದು ಸಂಸ್ಕೃತಿಯು ನಿರೀಕ್ಷಿಸಿರುತ್ತದೆ. ತಾಯ್ತನವು ಸಹಜ ಪ್ರವೃತ್ತಿ ಹುಟ್ಟಿನಿಂದಲೇ ಬರತಕ್ಕದ್ದು ಎನ್ನುವುದನ್ನು ಸಮರ್ಥಿಸಲು ಯಾವುದೇ ಆಧಾರಗಳಿಲ್ಲದಿದ್ದರೂ, ತಾಯಿಯಾಗಬೇಕೆಂಬ ಬಯಕೆಯೇ ಪ್ರಧಾನ ಕಾರಣವಾಗಿ ಆಕೆಯು ಸಂತಾನವನ್ನು ಹೆರುವಂತೆ ಮಾಡುವುದಿಲ್ಲ.

ಹಾಲಿಂಗ್ ವರ್ತ್(Holling worth)(೧೯೨೨) ರವರು ಹೇಳುವಂತೆ ತಾಯ್ತನವು ಸ್ವಹಿತಾಸಕ್ತಿಗಳನ್ನು ತ್ಯಜಿಸಿ ರಾಷ್ಟ್ರದ ಅಗತ್ಯವನ್ನು ಪೂರೈಸುವ ಸೈನ್ಯದ ಸೇವೆಯಂತೆ ತಾಯ್ತನದ ಪ್ರಕ್ರಿಯೆ ಸ್ವಂತಕ್ಕೆ

ಅಪಾಯಕಾರಿಯಾದುದೂ, ಲಾಭಹೀನವೂ ಆದ ಸೇವೆ. ವೃದ್ಧಾಪ್ಯದಲ್ಲಿ ಮಕ್ಕಳೂ ತಮಗೆ ಆಧಾರವು, ಆಶ್ರಯವೂ ಅಗುತ್ತಾರೆಂಬ ಭ್ರಮೆಯಿಂದ ಬಹಳಷ್ಟು ಮುಂದುವರೆದ ರಾಷ್ಟ್ರಗಳ ದಂಪತಿಗಳು ಹೊರ ಬಂದಿದ್ದಾರೆ. ತಾಯ್ತನದ ವೈಭವೀಕರಣವು ಜಾಹಿರಾತುಗಳಲ್ಲಿ ಪ್ರತಿಬಿಂಬಿತವಾಗಿರುವುದನ್ನು ಗಮನಿಸಬಹುದು. ಒಳ್ಳೆಯ ಉಡುಪಿನ ಸುಂದರ ನಗುವಿನ, ದಷ್ಟಪುಷ್ಟ ಮಗುವಿನ ಲಲ್ಲೆ ಮಾತು, ಆಟ ಪಾಠಗಳ ಸುಂದರ ಲೋಕವನ್ನು ಸೃಷ್ಟಿಸಿ ಅಲ್ಲಿ ತಾಯ್ತನಕ್ಕೆ ಪ್ರಮುಖ ಪಾತ್ರವನ್ನು ಕಲ್ಪಿಸಿಕೊಡಲಾಗಿರುತ್ತದೆ. ತಾಯಿ ತನ್ನ ಎದೆ ಹಾಲಿನ ಜೊತೆಗೆ ಪೌಷ್ಠಿಕ ಆಹಾರವನ್ನು ಕೊಡಿಸುವ ಚಿತ್ರಣವು ತುಂಬಾ ಮಹತ್ವದ್ದಾಗಿ ಕಂಡುಬರುತ್ತದೆ. ಮಗುವಿನ ಆರೋಗ್ಯ ಮತ್ತು ಅವನ ಯೋಗಕ್ಷೇಮದ ಬಗ್ಗೆ ಹೆಚ್ಚಾಗಿ ಕಾಳಜಿ ವಹಿಸುವುದರಿಂದ ಹೆಣ್ಣಿನಲ್ಲಿರುವ ತಾಯ್ತನದ ಗೌರವವು ಎದ್ದು ಕಾಣುತ್ತಿರುತ್ತದೆ.

ಮಗುವಿನ ಆರೋಗ್ಯವು ಒಂದು ವೇಳೆ ಹದಗೆಟ್ಟರೆ ಹೆಣ್ಣು ಬಹಳಷ್ಟು ಒತ್ತಡಗಳಿಂದ ನರಳುವಂತವಳಾಗುತ್ತಾಳೆ. ಮತ್ತು ಮಗುವಿನ ಆರೋಗ್ಯಕ್ಕೆ ಹೆಣ್ಣೆ ಕಾರಣೀಭೂತಳೆಂದು ಸಮಾಜವು ಕಾಣುತ್ತದೆ. ಮಹಿಳೆಯರು ಕೌಟುಂಬಿಕ ಹಿಂಸೆಗೊಳಗಾದ ಸಂದರ್ಭದಲ್ಲಿ ತಾಯ್ತನವು ಮತ್ತಷ್ಟು ತೊಂದರೆಗಳನ್ನು ತಂದೊಡ್ಡುತ್ತದೆ. ಮಕ್ಕಳ ಲಾಲನೆ, ಪಾಲನೆ, ಪೋಷಣೆ ಎಷ್ಟು ಆಳವಾಗಿ ಬೇರೂರಿತ್ತೆಂದರೆ, ಅನಿವಾರ್ಯವಾಗಿಯೇ, ಕುಟುಂಬದೊಳಗಿನ ಹಿಂಸೆಯನ್ನು ಸಹಿಸಿಕೊಳ್ಳುವ ಪ್ರಸಂಗ ಒದಗಿಬರುತ್ತದೆ.

ಉದಾಹರಣೆಗೆ ಬೇಂದ್ರೆಯವರ ಸಣ್ಣಕತೆ 'ಕರುಳಿನ ಕರೆ'ಯಲ್ಲಿ ರೋಸತ್ತು ಬಾವಿಗೆ ಬೀಳಹೋದ ಹೆಣ್ಣು ತನ್ನ ಕಂದನಿಗೆ ತನ್ನ ಅವಶ್ಯಕತೆ ಇದೆ ಎಂಬ ಕರ್ತವ್ಯ ಪಾಲನೆಯ ಪ್ರಜ್ಞೆಯನ್ನು ಮರೆಯುವುದಿಲ್ಲ. ಕಂದನ ಕೂಗು ಆಕೆಯ ಆತ್ಮಹತ್ಯೆಯನ್ನು ಕೈಗೊಳ್ಳದಂತೆ ತಡೆಮಾಡುತ್ತದೆ. ತಾಯ್ತನದ ಬಗೆಗಿನ ಇಂಥ ಭಾವವೇಶದ ಸುಕುಮಾರ ಕಲ್ಪನೆಗಳು ತಾಯ್ತನದ ಆಯ್ಕೆಗೆ ಪ್ರಥಮ ಪ್ರಾಶಸ್ತ್ಯವನ್ನು ನೀಡಿ ಬದುಕಿನ ಉಳಿದ ಸಾಧ್ಯತೆಗಳ ವಿಸ್ತಾರವನ್ನು ಮೊಟಕು ಮಾಡುತ್ತದೆ.[೪] ಗಂಡು ಸಂತಾನದ ಮೂಲಕ ವಂಶಾವಳಿಯನ್ನು ಗುರುತಿಸುವುದು ಹೆಣ್ಣು ಮಕ್ಕಳಿಗೆ ಆಸ್ತಿ ಹಕ್ಕಿನ ವಂಚನೆ, ಸ್ತ್ರೀಯರಿಗೆ ಶಿಕ್ಷಣದ ನಿರಾಕರಣೆ ಈ ರೀತಿಯ ಧರ್ಮ ಬೆಂಬಲಿತ ಸ್ತ್ರೀ ವಿರೋಧಿ ಪ್ರವೃತ್ತಿಗಳು ಬಲವಾಗಿ ಬೇರೂರಿ ಸ್ತ್ರೀಯನ್ನು ಸಕ್ರಿಯ ಸಾಮಾಜಿಕ ಆರ್ಥಿಕ ಜೀವನದಿಂದ ದೂರವಿಡುವಂಥ ಪರಿಸ್ಥಿತಿ ಸೃಷ್ಟಿಯಾಯಿತು.

ಧರ್ಮಶಾಸ್ತ್ರಗಳ ಕಾಲದಲ್ಲಂತೂ ಸ್ತ್ರೀ ಸ್ಥಿತಿ ಮತ್ತಷ್ಟು ಇಳಿಮುಖವಾಯಿತು. ಮನುಸ್ಮೃತಿಯಲ್ಲಿ ಒಂದೆಡೆ ಸ್ತ್ರೀಯನ್ನು ಅತಿಯಾದ ಗೌರವದಿಂದ ಕಾಣುವಂತೆ ಸೂಚಿಸುವುದು, ಮತ್ತೊಂದೆಡೆ ಆಕೆಯನ್ನು ಸ್ವಂತ ವ್ಯಕ್ತಿತ್ವವೇ ಇಲ್ಲದಂತ ವ್ಯಕ್ತಿಯಾಗಿ ಪರಿಗಣಿಸುವುದು ಕಂಡುಬರುತ್ತದೆ. ಆದರೆ ಪುರುಷ ಪ್ರಧಾನ ವ್ಯವಸ್ಥೆಯು ತನಗೆ ಅನುಕೂಲವಾಗುವಂಥ ತನ್ನ ಅಧೀನದೊಳಗೆ ಇರುವಂತ ಸಲಹೆ ಸೂಚನೆಗಳನ್ನು ಮಾತ್ರ ನೀಡುತ್ತಿರುತ್ತದೆ. ಸ್ತ್ರೀಯರ ಪಾತಿವ್ರತ್ಯವನ್ನು ವೈಭವೀಕರಿಸಿದ ಧಾರ್ಮಿಕ ಗ್ರಂಥಗಳು ಪುರುಷರ

ಮೇಲೆ ಇದೇ ರೀತಿಯ ನಿರ್ಬಂಧನೆಗಳನ್ನು ಹೇರಲಿಲ್ಲವೇಕೆ? ಎನ್ನುವ ಪ್ರಶ್ನೆಗಳು ಧರ್ಮ ಶಾಸ್ತ್ರದಲ್ಲಿ ಸ್ತ್ರೀಯರ ಬಗ್ಗೆ ಮಾತನಾಡಿದವರ ಸಂಖ್ಯೆ ಕಡಿಮೆ ಎಂದು ಹೇಳಬಹುದು." ಸತಿಯಾದ ಸ್ತ್ರೀಯ ಹೆಸರಿನಲ್ಲಿ ದೇವಾಲಯವನ್ನು ಕಟ್ಟಿ ಅವಳನ್ನು ವೈಭವೀಕರಿಸಿದ ಹಿಂದೂ ಧರ್ಮವೇ ಆಗಲಿ, ಮಹಿಳೆ ಆಸ್ತಿಯಲ್ಲಿ ಹಕ್ಕನ್ನು ಕೇಳಿದಾಗ, ಆಕೆಯನ್ನು ಧರ್ಮಬಾಹಿರವಾದ ಕೃತ್ಯದಲ್ಲಿ ತೊಡಗಿದ್ದಾಳೆಂದು ದೋಷರೋಪಣೆ ಮಾಡುವ ಇಸ್ಲಾಂ ಧರ್ಮವೇ ಆಗಲಿ, ದೇವರನ್ನು ಸರ್ವಶಕ್ತನಾದ ಜೀವದಾನಿಯಾದ ಪುರುಷ ಶಕ್ತಿಯೆಂದು ಘೋಷಿಸಿರುವ ಕ್ರೈಸ್ತ ಧರ್ಮವೇ ಆಗಲಿ ಸ್ತ್ರೀಯನ್ನು ಸ್ವತಂತ್ರ ವ್ಯಕ್ತಿತ್ವದಿಂದ ಓರ್ವ ವ್ಯಕ್ತಿಯಂತೆ ಪರಿಗಣಿಸದೇ ಇರುವುದನ್ನು ನಾವು ಗಮನಿಸಬಹುದು.

ಧರ್ಮ ಸಂಸ್ಕೃತಿಗಳಲ್ಲಿ ಹೇಳುವಂತೆ ಸ್ತ್ರೀಯು ಗಂಡು ಸಂತಾನವನ್ನು ಮಾತ್ರ ಪಡೆಯಲು ಅರ್ಹಳು. ಗಂಡಿನಷ್ಟೆ ಆಕೆಗೂ ಸಾಮಾಜಿಕ ಜೀವನದಲ್ಲಿ ಭಾಗವಹಿಸುವ ಹಕ್ಕಿದೆ ಎನ್ನುವುದನ್ನು ಯಾವ ಧರ್ಮವೂ ಸ್ಪಷ್ಟವಾಗಿ ಸಾರಿಲ್ಲ. ಇದಕ್ಕೆ ಪ್ರಮುಖ ಕಾರಣವೆಂದರೆ ಪ್ರಪಂಚದ ಅನೇಕ ಧರ್ಮಗಳು ಹುಟ್ಟಿಕೊಂಡಿರುವುದೇ, ಬೆಳವಣಿಗೆಯಾದುದ್ದೇ ಪಿತೃಪ್ರಧಾನ ಸಂಸ್ಕೃತಿಯಿಂದ ಎಂದು ಹೇಳಲಾಗಿದೆ.

ತಾಯ್ತನವನ್ನು ಕುರಿತ ಸಾಂಸ್ಕೃತಿಕ ಗ್ರಹಿಕೆಗಳು ಜಾನಪದ ಕತೆಗಳಲ್ಲಿ ಈ ರೀತಿಯಾಗಿ ಗ್ರಹಿಸಲಾಗಿದೆ. ತಾಯಿಯಾದವಳಿಗೆ ನಮ್ಮ ಸಂಸ್ಕೃತಿಯಲ್ಲಿ ತುಂಬಾ ಗೌರವವಿದೆ, ಮೌಲ್ಯವಿದೆ. ಈ ಅರ್ಥದಿಂದ ಇಲ್ಲಿ ಬಂಜೆಗೆ ಬೆಲೆ ಇಲ್ಲವೆಂದೇ ಅರ್ಥವಾಗುತ್ತದೆ. ಬಂಜೆ ಹೆಂಡತಿಯನ್ನು ಬಿಡುವ ನೈತಿಕ ಹೊಣೆಯನ್ನು ಜಾನಪದ ಸಮಾಜ ಗಂಡಿಗೆ ಕೊಟ್ಟಿದೆ. ತಾಯಿಯಾಗದೆ ಹೋದರೆ ಹೆಣ್ಣಿನ ವೈವಾಹಿಕ ಜೀವನದಲ್ಲಿ ಅವಳಿಗೆ ಭದ್ರತೆಯಿರುವುದಿಲ್ಲ. ಬದುಕಿಗೋಸ್ಕರ ತಾಯ್ತನವನ್ನು ಪಡೆಯುವ ಪರಿಸ್ಥಿತಿ ಹೆಣ್ಣಿಗೆ ಇಂತಹ ಸ್ಥಿತಿಯಲ್ಲೆ ಬರುವುದು. ತವರಿನ ಜೊತೆ ಕಡಿದು ಹೋದಂತ ಸಂಬಂಧವು ತಾಯ್ತನವನ್ನು ಪಡೆದುಕೊಂಡಾಗ ಗಂಡನ ಮನೆಯೊಡನೆ ವಿನೂತನ ರೀತಿಯಲ್ಲಿ ಸಂಬಂಧವು ಏರ್ಪಡುತ್ತದೆ. ಹಾಗೆಯೇ ಮಗುವು ಕೂಡ ಅವಿಭಕ್ತ ಕುಟುಂಬದ ಇತರ ಸದಸ್ಯರ ಜೊತೆಗೆ ಬೆಸೆಯುವ ಸೇತುವೆಯಾಗುತ್ತದೆ. ಬಿಡುವಿರದ ಸಮಯದಲ್ಲಿ ಮಗುವಿಗೆ ಉಣಿಸುವ ಬಡಿಸುವ ಕೆಲಸವನ್ನು ಅತ್ತೆ ನಾದಿನಿಯರು ನಿರ್ವಹಿಸುವುದರಿಂದ ತಾನೇ ತಾನಾಗಿ ಕುಟುಂಬದ ಕಲ್ಪನೆ ಮತ್ತು ಹೊಂದಿಕೊಳ್ಳುವ ಅನಿವಾರ್ಯತೆ ಇರುತ್ತದೆ.

ವೈವಾಹಿಕ ಜೀವನದಲ್ಲಿ ಹೆಣ್ಣಿನ ಸ್ಥಾನಮಾನವು ತಾಯ್ತನವನ್ನು ಪಡೆದುಕೊಂಡಾಗ ಗಟ್ಟಿಕೊಳ್ಳುತ್ತದೆ. ತಾಯಿಯಾದರೆ ಬದುಕು ಸಾರ್ಥಕ ಎನ್ನುವ ಜಾನಪದರಲ್ಲಿ 'ಬಂಜೆ ಮನೆ ಚಂದ, ಬಸ್ತಿ ಗುಡಿಚಂದ' ಎಂದು ಹೆಣ್ಣು ತಾಯಿಯಾಗದೆ ಹೋದರೆ ಗಂಡನು ಮರುಮದುವೆ ಮಾಡಿಕೊಳ್ಳುವ ಹಕ್ಕನ್ನು ಜಾನಪದ ಸಮಾಜವು ಅಧಿಕೃತವಾಗಿ ನೀಡಿರುತ್ತದೆ.

ಪುರಾಣಗಳಲ್ಲಿ ಬರುವ(ಷಂಡಗಂಡ) ಬೀಜೊ ಕ್ಷೇತ್ರಗಳ ಹೊಲಿಕೆ, ಹೆಣ್ಣಿರುವುದೇ ತಾಯ್ತನವನ್ನು ಪಡೆಯುವುದಕ್ಕಾಗಿ ಹೆಣ್ಣು ಒಂದು ಮಾಧ್ಯಮ ಮಾತ್ರ ಹೊಲದ ಹಾಗೆ ಎನ್ನುವ ಅವೈಜ್ಞಾನಿಕ ಕಲ್ಪನೆ ವೈಧಿಕರಂತೆ, ಜಾನಪದರು ಬಿಟ್ಟಿಲ್ಲ. ಹೀಗಾಗಿ ಬಂಜೆತನದ ಪಾಪ ಹೆಣ್ಣಿನ ಹೆಗಲೇರಿದೆ ಬಂಜೆಯಾಗಿರುವುದರಿಂದ ವಿವಾಹ ಸಂಬಂಧಕ್ಕೆ ಭದ್ರತೆಯಿಲ್ಲದೆ ಇರುವುದು ಅವಳಲ್ಲಿ ಭಯವನ್ನು ಹುಟ್ಟಿಸುತ್ತದೆ. ಹೆಣ್ಣು ತಾಯಿಯಾಗದಿದ್ದರೆ, ಸಮಾಜವು ತೀವ್ರವಾದ ನಿಂಧನೆಗೆ ಗುರಿಮಾಡುತ್ತದೆ. ಹೀಗಾಗಿ 'ಬಾಳೆಲೆಯ ಹಾಸ್ಕಂಡು, ಬೀಸಿ ಹೊಗದ್ಹಾಂಗ' ತನ್ನ ಬದುಕೆಂದು ಅವಳು ಅರಿತುಕೊಂಡಿದ್ದಾಳೆ. ಬಂಜೆತನದ ಶಾಪ ಅವಳ ಶೀಲಕ್ಕೂ ವಿಸ್ತರಿಸುತ್ತದೆ. ಶೀಲಕ್ಕೂ ಬಂಜೆತನಕ್ಕೂ ಗಂಟುಹಾಕಿದ ಅನೇಕ ಉದಾಹರಣೆಗಳು ಸಿಗುತ್ತವೆ.

'ಫಲವುಳ್ಳ ಮರ ಕಾಯಿ ಬಿಡುತ್ತೆ
ಗಂಡುಳ್ಳ ಗರತಿ ಮಕ್ಕು ಪಡಿತಾಳ'

ಎನ್ನುವ ರೀತಿಯಲ್ಲಿ ತಾಯಿತನವು ಜಾನಪದ ರೂಪದಲ್ಲಿ ಹರಡಿಕೊಂಡಿದೆ.

'ಗಂಡಸಿಗೆ ತೆತ್ತಲ್ಲದೆ ಬುದ್ಧಿಯಿಲ್ಲ, ಹೆಂಗಸಿಗೆ ಹೆತ್ತಲ್ಲದೆ ಬುದ್ಧಿಯಿಲ್ಲ' ಎಂಬ ತಾಯಿತನವನ್ನು ಒಂದು ಮಾಪನವನ್ನಾಗಿ ಬಳಸಲಾಗಿದೆ. ತಾಯಿತನವನ್ನು ಹೆಣ್ಣಿನೊಂದಿಗೆ ಸಮೀಕರಿಸುತ್ತಿದ್ದ ಜಾನಪದ ಸಂಸ್ಕೃತಿಯು ಬಂಜೆಯ ಬದುಕು ಒಂದು ರೀತಿಯ ವ್ಯರ್ಥ್ಯವಾದಂತೆ ಎನ್ನುವ ರೀತಿಯಲ್ಲಿ ಕಾಣುತ್ತಾರೆ. ಮಕ್ಕಳಿಲ್ಲದಿದ್ದರೆ ಒಂದು ದುಃಖ, ಮಕ್ಕಳಿದ್ದರೆ ನಾನಾ ದುಃಖ ಎಂಬುದು ಸಂಚಾರಿಯಾಗಿತ್ತೆ ಹೊರತು ಸ್ಥಾಯಿಯಲ್ಲ. ಬಂಜೆತನ ಹೆಣ್ಣನ್ನು ಅಸ್ಪೃಶ್ಯಳಾಗಿಸಿದೆ. ಇದಕ್ಕೆ ವಿರುದ್ಧವೆನ್ನುವಂತೆ ತಾಯ್ತನವನ್ನು ಪಡೆದುಕೊಂಡವಳನ್ನು ಸಮಾಜ ಪುರಸ್ಕರಿಸಿದೆ. 'ಪಡೆದವಳಿಗೆ ಪಟ್ಟೆ ಸೀರೆ, ಪಡೆಯದವಳಿಗೇ ಮುತ್ತುಗದ ಹಾಳೆ' ತಾಯಿಯಿದ್ದರೆ ಮಕ್ಕಳಿಗೂ ಇತ್ಯಾತ್ಮಕವಾಗಿ ಕಂಡುಬರುತ್ತದೆ. 'ತಾಯಿಯಿಲ್ಲದ ಮಕ್ಕಳಿಗೆ ಹಾಯಿಲ್ಲ ದಾಯಿಲ್ಲ, ಆಡಿ ಬಂದೋಗುವ ಸಲಿಗೆಯಿಲ್ಲ' ಎನ್ನುವಂತೆ 'ತಾಯಿಯ ಮಾತಿಗೆ ತರ್ಕವುಂಟೆ, ತಂಬಿಟ್ಟಿಗೆ ಉಪ್ಪು ಉಂಟೆ' ಎನ್ನುವ ಗಾದೆಯಲ್ಲಿ ತಾಯಿಯನ್ನು ಕುರಿತ ಮಹತ್ವದ ಮಾನ್ಯತೆಯಿದೆ.

'ಬ್ಯಾನಿಯ ತಿನುವಾಗ ಬ್ಯಾಡವ್ವ ಮಕ್ಕಳು
ಬಾಗಿ ಬಚ್ಚಲಕ ಹೋಗುವಾಗ ಬಯಸ್ಯಾಳ
ನೂರೊಂದು ಫಲವ ಕೊಡು ಶಿವನೆ' ಎಂದು
'ಕಂದಾನ ಹೇರುವಾಗ ಕುಂದೀತು ತಾಯಿ ಮುಗವು
ಕಂದ ಚಂಡಾಡಿ ಬರುವಾಗ ತಾಯಿಯ ಮುಗವು
ಬಂದೀಯ ಚಿನ್ನ ಹೊಳೆದ್ಹಾಂಗ'

ಈ ರೀತಿಯಾಗಿ ಜಾನಪದ ಸಂಸ್ಕೃತಿಯಲ್ಲಿ ತಾಯ್ತನದ ಬಯಕೆಯನ್ನು ಗ್ರಹಿಸಿಕೊಳ್ಳಲಾಗಿದೆ.

**ಸೆಂಟ್‌ಪಾಲ್‌ರವರ ಪ್ರಕಾರ**

'ಯಾವ ಕಾರಣಕ್ಕಾಗಿ ಸ್ತ್ರೀಯರನ್ನು ಪುರುಷರಿಗಾಗಿಯೆಂದು ದೇವರು ಸೃಷ್ಟಿಸಿದ್ದಾನೋ ಅದೇ ಕಾರಣಕ್ಕಾಗಿ ಅವನು ಪುರುಷರನ್ನು ಸ್ತ್ರೀಯರ ಸಲುವಾಗಿ ಸೃಷ್ಟಿಸಲಿಲ್ಲ. ಸ್ತ್ರೀಯು ಪುರುಷರಿಗೆ ಏನನ್ನು ಕಲಿಸಲಾರಳು ಜಗತ್ತಿನಲ್ಲಿ ಪಾಪವನ್ನು ತಂದವಳೇ ಹೆಣ್ಣು ಆದ್ದರಿಂದ ಸ್ತ್ರೀಯರು ಕಠೋರ ನರಕಕ್ಕೆ ಹೋಗುತ್ತಾರೆ. ಅವರ ಮುಕ್ತಿಗೆ ಉಪಾಯವೇ ಇಲ್ಲ, ಆದರೆ ಅವರು ತಾಯ್ತನವನ್ನು ಪಡೆದುಕೊಂಡಾಗ ಮಾತ್ರ ಸದ್ಗತಿ ಸಿಗಬಹುದು' ಎಂದು ಹೇಳಿದ್ದಾರೆ.

ಜಾನಪದ ಗಾದೆಗಳಲ್ಲಿಯೂ ತಾಯ್ತನವು ಮಹತ್ವವನ್ನು ಪಡೆದಿದೆ ಎಂಬ ಗ್ರಹಿಕೆಯು ಕಂಡುಬರುತ್ತದೆ. 'ತಾಯಿ ಇದ್ದರೆ ತೌರು, ನೀರಿದ್ದರೆ ಕೆರೆಬಾವಿ' ಎನ್ನುವ ಗಾದೆಯು ತಾಯಿಯಿದ್ದರೆ ತೌರು ಎಂದರೆ ಹೆಣ್ಣು ತಾಯ್ತನವನ್ನು ಪಡೆದುಕೊಂಡಾಗ ತವರಿನಲ್ಲಿ ಆಕೆಗಿರುವ ಗೌರವ ಹೆಚ್ಚಾಗಿ ಇರುವುದು ಕಂಡುಬರುತ್ತದೆ. ತವರಿನಲ್ಲಿ ಆಕೆಯು ತಾಯಿಯಾದಾಗ ಸಂತೋಷದ, ಸಂಭ್ರಮದ ಆಚರಣೆಗಳನ್ನು ಮಾಡುವುದು ಜಾನಪದದ ಗ್ರಹಿಕೆಯಾಗಿದೆ. ಅವಳು ತಾಯಿಯಾಗದಿದ್ದರೆ, ನೀರಿಲ್ಲದ ಕೆರೆಬಾವಿಯಂತೆ ಎಂಬ ಮಾತು ಕಂಡುಬರುತ್ತದೆ. ನೀರಿಲ್ಲದೆ ಕೆರೆಬಾವಿಗೆ ಯಾವ ಪ್ರಾಣಿ ಪಕ್ಷಿಗಳು ಅತ್ತ ಕಡೆ ಸುಳಿಯುವುದಿಲ್ಲ. ಅದರ ಹಾಗೆ ತಾಯಿಯಾಗದ ಹೆಣ್ಣನ್ನು ತವರು ಮನೆಯವರಾಗಲಿ, ಗಂಡನ ಮನೆಯವರಾಗಲಿ ಇವಳನ್ನು ಗೌರವದಿಂದ ಕಾಣದೇ ಇರುವುದು ಸತ್ಯದ ಸಂಗತಿಯಾಗಿದೆ.[೬]

'ತಾಯಿ ಬೇಕು, ಇಲ್ಲ ಬಾಯಿ ಬೇಕು' ಎನ್ನುವ ಗಾದೆಯು ತಾಯ್ತನವನ್ನು ತುಂಬಾ ಗೌರವದಿಂದ ಕೊಂಡಾಡಿದೆ. ಮಗುವಿನ ಪೋಷಣೆಯ ಎಲ್ಲ ಕೆಲಸಗಳಿಗೂ ತಾಯಿಯ ಪ್ರೀತಿ ವಿಶ್ವಾಸ ಮುಖ್ಯವಾಗುತ್ತದೆ. ಮಗುವಿಗೆ ತಾಯಿಯ ಅಪ್ಪುಗೆಯಿಂದಲೇ ಕೆಲವೊಂದು ರೋಗಗಳು ವಾಸಿಯಾಗುತ್ತವೆ ಎಂತಲೂ ನಮ್ಮ ಜಾನಪದರು ನಂಬಿಕೊಂಡು ಬಂದಿದ್ದಾರೆ. ತಾಯಿಯಿಂದಲೇ ಎಲ್ಲ ಕೆಲಸಗಳನ್ನು ಸಲೀಸಾಗಿ ಮಾಡಬಹುದು, ಆದರೆ ಅದೇ ತಾಯಿಯ ಪ್ರೀತಿ ಮಗುವಿಗೆ ಲಭಿಸದೆ ಇರುವ ಸಂದರ್ಭಗಳಲ್ಲಿ ಜಾನಪದರ ಹೇಳಿಕೆಯಂತೆ ಸಮಾಜದಲ್ಲಿ ಒಬ್ಬ ವ್ಯಕ್ತಿ ಅಥವಾ ಮಗು ಜೀವನವನ್ನು ಸಾಗಿಸಬೇಕಾದರೆ ಮುಖ್ಯವಾಗಿ ಬೇಕಾಗಿರುವುದು ಬಾಯಿ ಅಂದರೆ ಮಾತುಗಳು ಅವನಿಗೆ ತಾಯಿಯ ಪ್ರೀತಿ, ಮಮತೆ ಎಷ್ಟು ಮುಖ್ಯವೊ, ಸಮಾಜದಲ್ಲಿ ಜೀವಿಸುವುದಕ್ಕಾಗಿ ಬಾಯಿಯ ಅವಶ್ಯಕತೆಯು ಅಷ್ಟೇ ಮುಖ್ಯವಾಗಿರುತ್ತದೆ ಎಂಬುದು ಜಾನಪದದ ಸಂಸ್ಕೃತಿಯಲ್ಲಿ ಕಂಡುಬರುತ್ತದೆ.[೭]

ಮತ್ತೊಂದು ಕಡೆ ಜಾನಪದರು ತಾಯಿಯ ಮೇಲಿನ ಗೌರವವನ್ನು ತಾಯ್ತನವನ್ನು ಈ ರೀತಿಯಾಗಿ ಅಭಿಪ್ರಾಯಿಸಿದ್ದಾರೆ. 'ಹೊಟ್ಟೆಕಟ್ಟಿ ತೊಟ್ಟಿಲು ಕಟ್ಟು' ಎನ್ನುವ ಗಾದೆಯು ತಾಯ್ತನದ ನಿರೀಕ್ಷೆಯನ್ನು

ಹೆಣ್ಣಾದವಳು ವಿವಾಹವಾಗಿ ತಾಯ್ತನವನ್ನು ಪಡೆದುಕೊಳ್ಳದೆ ಇರುವ ಸಂದರ್ಭಗಳು ಹಲವಾರು. ಇಂತಹ ಸಂದರ್ಭಗಳು ಜಾನಪದರ ಗ್ರಹಿಕೆಯಲ್ಲಿ ತಾಯ್ತನದ ಅಭಿಪ್ಸೆಯನ್ನು ಈಡೇರಿಸಿಕೊಳ್ಳಬೇಕಾದರೆ, ಅವಳು ಹೊಟ್ಟೆಕಟ್ಟಿ ಉಪವಾಸ ಇದ್ದಾದರೂ ತಾಯಿಯಾಗಬೇಕು. ತೊಟ್ಟಿಲನ್ನು ತೂಗಬೇಕು ಎನ್ನುವ ಮನೋಭಾವನೆಯನ್ನು ಹೊಂದಿರುತ್ತಾರೆ. ಹಾಗೆಯೇ 'ಹತ್ತು ಮಕ್ಕಳ ತಾಯಾದ್ರು, ಸತ್ತ ಮಗನ್ನ ಮರೆಯಲ್ಲ' ಎನ್ನುವ ಗಾದೆಯಂತೂ ತುಂಬಾ ವೈಭವೀಕರಣವಾಗಿ ತಾಯ್ತನವನ್ನು ಕೊಂಡಾಡಿರುವುದು, ನೆನಪು ಮಾಡುತ್ತಿರುವುದು ಕಂಡುಬರುತ್ತದೆ. ತಾಯಿಯಾದವಳಿಗೆ ತನಗೆ ಎಷ್ಟು ಮಕ್ಕಳನ್ನು ಪಡೆದರೂ, ಅವಳು ಮೊದಲು ಪಡೆದ ಮಗುವು ಸಾವನ್ನಪ್ಪಿದ್ದಾಗ ಅವನನ್ನು ಮರೆಯಲು ಆಗುವುದಿಲ್ಲ. ಏಕೆಂದರೆ ಇಲ್ಲಿ ತಾಯ್ತನದ ಪ್ರೀತಿ, ಮಮತೆ, ಪೋಷಣೆ ಅಷ್ಟು ಗಂಭೀರವಾದ ತಳಹದಿಯನ್ನು ಹೊಂದಿರುವಂತಹುದ್ದಾಗಿರುತ್ತದೆ.[೮] ತಾಯಿತನದ ಗೌರವವು ಗಾದೆಗಳಲ್ಲಿ ಕಂಡುಬಂದಂತೆ ಒಡಪುಗಳಲ್ಲಿಯೂ ಕಾಣಬಹುದು.

ಉದಾ : "ಹೆಣ್ಣು ಮಕ್ಕಳು ಹುಟ್ಟುವುದು ಫಲದ ಸಲುವಾಗಿ
ಗಂಡು ಮಕ್ಕಳ ಹುಟ್ಟುವುದು ಮನೆತನದ ಸಲುವಾಗಿ
ನಾನು ಹುಟ್ಟಿದ್ದು, ತಾಯ್ತನವನ್ನು ಪಡೆಯುವ ಸಲುವಾಗಿ"

ಎನ್ನುವಂತಹ ಒಡಪುಗಳು ನಮ್ಮ ಸಂಸ್ಕೃತಿಯಲ್ಲಿ ಕಂಡುಬರುತ್ತವೆ. ಹೆಣ್ಣು ಹುಟ್ಟುವುದು ಫಲವನ್ನು ಪಡೆಯುವ ಸಲುವಾಗಿ, ಮಗುವಿನ ಲಾಲನೆ ಪಾಲನೆ, ಪೋಷಣೆ ಮಾಡುವ ಸಲುವಾಗಿ ಎಂದು, ಗಂಡು ಹುಟ್ಟಿರುವುದು ಕುಟುಂಬದ ಯಜಮಾನಿಕೆಯನ್ನು ಮುಂದುವರೆಸುವ ಸಲುವಾಗಿ, ಕುಟುಂಬದ ವಂಶವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಹುಟ್ಟಿರುತ್ತಾನೆ ಎನ್ನುವ ಜಾನಪದ ನಂಬಿಕೆಗಳು ನಮ್ಮಲ್ಲಿ ಹೇರಳವಾಗಿ ನೆಲೆಯೂರಿರುವುದು ಕಂಡುಬರುತ್ತದೆ. ಹೆಣ್ಣಿಗೆ ಸಮಾಜದಲ್ಲಿ ಸಿಗುವಂತ ಗೌರವ, ಮರ್ಯಾದೆಗಳು ಯಾವ ರೀತಿಯಾಗಿವೆ ಎಂಬುದನ್ನು ಮತ್ತೊಂದು ಒಡಪಿನ ಮೂಲಕ ತಿಳಿದುಕೊಳ್ಳಬಹುದು.

'ಸಿಹಿ ಇರುವುದು ಕಬ್ಬಿನಲ್ಲಿ
ಕಹಿ ಇರುವುದು ಬೇವಿನಲ್ಲಿ
ಹುಳಿ ಇರುವುದು ನಿಂಬೆಯಲ್ಲಿ

ಆದರೆ ತಾಯ್ತನ ಇರುವುದು ಹೆಣ್ತನದಲ್ಲಿ" ಎಂದು ತಾಯಿತನದ ಅರ್ಥವನ್ನು ಒಡಪುಗಳಿಂದ ಕಂಡುಕೊಳ್ಳಲಾಗಿದೆ. ಇಂತಹುದೇ ಮತ್ತೊಂದು ಒಡಪನ್ನು ಇಲ್ಲಿ ಗಮನಿಸಬಹುದು.

'ಗಂಡನು ಕಾಯುವುದು ಹೆಂಡತಿಯನ್ನು
ಹೆಂಡತಿ ಕಾಯುವುದು ತಾಯ್ತನವನ್ನು
ಆದರೆ ಕುಟುಂಬದ ಸದಸ್ಯರೆಲ್ಲರೂ ಕಾಯುವುದು

ಮಗುವಿಗಾಗಿ, ಮಗುವಿನ ಮಮತೆಗಾಗಿ' ಎನ್ನುವ ಇಂತಹ ಹಲವಾರು ಒಡಪುಗಳು ತಾಯ್ತನವನ್ನು ನೇರವಾಗಿ ಬಯಸದೆ(ಹೇಳದೆ) ಒಡಪುಗಳ ಮೂಲಕ ತಾಯ್ತನವನ್ನು ಬಯಸುತ್ತಾಳೆ ಎನ್ನುವುದನ್ನು ಈ ಒಡಪುಗಳಿಂದ ಗ್ರಹಿಕೆ ಮಾಡಲಾಗಿದೆ.

ತಾಯ್ತನವು ಜಾಹಿರಾತು ಮಾಧ್ಯಮಗಳಲ್ಲಿ, ಸಿನಿಮಾಗಳಲ್ಲಿ ಹೆಣ್ಣಿಗೆ ಇರುವ ಸಹನೆ, ತಾಳ್ಮೆ, ಗೌರವ ಯಾವ ರೀತಿಯಾಗಿ ಗ್ರಹಿಕೆ ಮಾಡಲಾಗಿದೆ. ತಾಯ್ತನವನ್ನು ಪಡೆದುಕೊಳ್ಳುವಲ್ಲಿ ತಡವಾದರೆ ಹೆಣ್ಣು ಎಂತಹ ನಿಂಧನೆಗಳನ್ನು ಸಹಿಸಿಕೊಳ್ಳಬೇಕಾಗುತ್ತದೆ ಎಂಬುದನ್ನು ಕೆಳಗಿನ ಉದಾಹರಣೆಯಿಂದ ತಿಳಿದುಕೊಳ್ಳಬಹುದು.

ಗಿರೀಶ್ ಕಾರ್ನಾಡರ ನಾಗಮಂಡಲ(ನಾಟಕ) ಚಲನಚಿತ್ರದಲ್ಲಿ ಬಿಂಬಿತವಾಗಿರುವಂತೆ ಹೆಣ್ಣು ವಿವಾಹಿತಳಾಗಿ ಬಹಳ ದಿನಗಳಾಗಿರುತ್ತದೆ. ಆದರೆ ಅವಳು ಗಂಡನಿಂದ ಯಾವುದೇ ಸುಖ ಸಂತೋಷವನ್ನು ಹಂಚಿಕೊಂಡಿರುವುದಿಲ್ಲ. ಹೆಣ್ಣಿಗೆ ತಾನು ತಾಯಿಯಾಗಬೇಕೆಂಬ ಬಯಕೆಯು ಹುಟ್ಟಿಕೊಳ್ಳುತ್ತದೆ. ಆದರೆ ಇದಕ್ಕೆ ಗಂಡನ ಪ್ರತಿಕ್ರಿಯೆ ಯಾವ ರೀತಿಯಾಗಿ ಆದರೂ ಕಂಡುಬರುವುದಿಲ್ಲ. ಅದಕ್ಕೆ ಅವಳು ಚಿಂತಾಕ್ರಾಂತಳಾಗಿ ಕುಳಿತುಕೊಂಡು ಚಿಂತಿಸುತ್ತಿರುವಾಗ ಅವಳ ಅಜ್ಜಿಯು ಬಂದು ಏನೆಂದು ವಿಚಾರಿಸುತ್ತಾಳೆ. ಆಗ ಅದಕ್ಕೆ ಅವಳು ಇದ್ದ ಸಂಗತಿಯನ್ನು ವಿವರಿಸುತ್ತಾಳೆ. ಅದಕ್ಕೆ ಅಜ್ಜಿಯು ಔಷಧಿಯನ್ನು ಹಾಲಿನಲ್ಲಿ ಕಲಿಸಿ(ಬೆರೆಸಿ)ಕೊಡು ಎಂದು ಹೇಳಿದಾಗ ಅವಳು ಅಜ್ಜಿ ಹೇಳಿದಂತೆ ಕೇಳಿ ಔಷಧಿಯನ್ನು ಹಾಲಿನಲ್ಲಿ ಬೆರೆಸಿಕೊಡಲು ಹೋಗುವಾಗ ಕಾಲು ಎಡವಿಕೊಂಡು ಹಾಲು ನೆಲದ ಪಾಲಾಗುತ್ತದೆ. ಚೆಲ್ಲಿದಂತ ಹಾಲು(ತುಂಬಿಕೊಂಡು) ತೆಗೆದುಕೊಂಡು ಹೋಗಿ ಹಾವಿನ ಹುತ್ತದಲ್ಲಿ ಹಾಕುತ್ತಾಳೆ. ಚೆಲ್ಲಿದಂತ ಹಾಲನ್ನು ಹಾವು ಕುಡಿದು ತನ್ನ ಗಂಡನ ರೂಪದಲ್ಲಿ ಬಂದು ದಿನನಿತ್ಯರಾತ್ರಿ ಲೈಂಗಿಕಾತೃಪ್ತಿಯನ್ನು ಅವಳಿಗೆ ನೀಡಿ ಹೊರಟುಹೋಗುತ್ತಿತ್ತು.

ಹೀಗೆ ದಿನಕಳೆದಂತೆಲ್ಲ ಅವಳು ಬಸುರಿ ಎನ್ನುವ ಸುದ್ದಿ ಗಂಡನಿಗೆ ತಿಳಿಯುತ್ತದೆ. ಆಗ ಗಂಡನು ಹೆಂಡತಿಯನ್ನು ನೀಚಮಾತುಗಳಿಂದ ಬೈಯುತ್ತ, ಗರ್ಭಪಾತ ಮಾಡಿಸಿಕೊ ಎಂದು ಅವಳಿಗೆ ತಿಳಿಸುತ್ತಾನೆ. ಆದರೂ ಅವಳು ಇವುಗಳನ್ನೆಲ್ಲ ಲೆಕ್ಕಿಸದಂತಿರುತ್ತಾಳೆ. ಲೆಕ್ಕಿಸದೆ ಇರುವುದಕ್ಕೆ ಕಾರಣವೆಂದರೆ, ಹುತ್ತದಲ್ಲಿರುವ ನಾಗರಾಜನು ತನ್ನ ಗಂಡನ ರೂಪದಲ್ಲಿರುವುದರಿಂದ ಅವಳು ಅವನನ್ನು ಸ್ವೀಕರಿಸಿದ್ದಾಳೆಯೇ ಹೊರತು, ಮತ್ತ್ಯಾವುದೇ ತಪ್ಪನ್ನು ಮಾಡಿರುವುದಿಲ್ಲ.[೮]

ಮುಖ್ಯವಾಗಿ ಇಲ್ಲಿ ಗಮನಿಸಬೇಕಾಗಿರುವುದೇನೆಂದರೆ, ಹೆಣ್ಣು ತನ್ನ ಶೀಲ, ಪಾತಿವ್ರತ್ಯತೆ ಮತ್ತು ತಾಯ್ತನವನ್ನು ಕಾಪಾಡಿಕೊಳ್ಳಲು ಏನೆಲ್ಲ ಕಷ್ಟಗಳನ್ನು ಅನುಭವಿಸಲು ಸಿದ್ಧಳಿರುತ್ತಾಳೆ. ಗಂಡನಿಂದ ಎಂತಹ ನಿಂದನೆಯ ಮಾತುಗಳು ಬಂದರೂ ಹೆಣ್ಣು ಗರ್ಭಪಾತವನ್ನು ಮಾಡಿಸಿಕೊಳ್ಳುವುದಿಲ್ಲ. ಅಂದರೆ

ಮಹಿಳೆಯು ತನ್ನ ಗಂಡನ ನಿಂದನೆಗಳಿಗೆ ಬಲಿಯಾಗುವುದಿಲ್ಲ. ಅವಳು ಏನೆಲ್ಲ ಕಷ್ಟಗಳನ್ನು ಎದುರಿಸಿದರು ಕೊನೆಗೆ ತನ್ನ ಪತಿವ್ರತೆಯನ್ನು ಮತ್ತು ತಾಯ್ತನವನ್ನು ಉಳಿಸಿಕೊಳ್ಳುವಲ್ಲಿ ಸಾಮಾಜಿಕವಾಗಿ ಯಶಸ್ಸನ್ನು ಪಡೆದಿದ್ದಾಳೆನ್ನುವ ಗ್ರಹಿಕೆ ಮತ್ತು ನಿರೀಕ್ಷೆಸಿದಂತೆ ಅವಳು ತಾಯ್ತನವನ್ನೂ ಪಡೆದುಕೊಳ್ಳುತ್ತಾಳೆನ್ನುವ ಚಿತ್ರಣವು ಈ ಚಲನಚಿತ್ರದಿಂದ ಕಂಡುಬರುತ್ತದೆ.

ಒಂದು ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಅತ್ಯಂತ ಮಹತ್ತರವಾದ ಪಾತ್ರವನ್ನು, ಪುರುಷ ಪ್ರಧಾನ ಸಮಾಜದ ಒತ್ತಡದ ಹಿನ್ನಲೆಯಲ್ಲಿಯೇ ಮಹಿಳೆಯರ ಸ್ಥಿತಿಗತಿ ಮತ್ತು ಅವರ ಸ್ಥಾನಮಾನಗಳಲ್ಲಿ ಬದಲಾವಣೆಯನ್ನು ಕಾಣಬಹುದು. ಸಾಮಾನ್ಯವಾಗಿ ಎಲ್ಲ ಸಂಸ್ಕೃತಿಗಳಲ್ಲಿಯೂ ಹೆಣ್ಣಿನ ಸ್ಥಾನಮಾನಗಳು, ಸ್ಥಿತಿಗಳು ಒಂದೇ ತೆರನಾಗಿರುವುದಿಲ್ಲ. ಆಯಾ ಜನಾಂಗದ ಆರ್ಥಿಕ, ಸಾಮಾಜಿಕ, ಭೌಗೋಳಿಕ, ಧಾರ್ಮಿಕ, ಚಾರಿತ್ರಿಕ ಬದಲಾವಣೆಗಳು, ಹೆಣ್ಣಿನ ಬಗ್ಗೆ ಇರುವ ನಿರೀಕ್ಷೆಗಳು, ಪ್ರತಿಯೊಂದು ಸಂಸ್ಕೃತಿಯಲ್ಲಿಯೂ ಬೇರೆ ಬೇರೆಯಾದ ದೃಷ್ಟಿಕೋನವಿರುತ್ತದೆ. ಆದ್ದರಿಂದ ಮಹಿಳೆಯರ ಬಗ್ಗೆ ನಡೆಯುವ ಯಾವುದೇ ವಿಚಾರವು ಆಯಾ ಸಂಸ್ಕೃತಿಗೆ ತಕ್ಕಂತೆ ನಡೆಯುತ್ತಿರುತ್ತದೆ.

ನಮ್ಮ ಜಾನಪದ ಕಥೆಗಳಲ್ಲಿ ಹೆಣ್ಣಿನ ಬಗ್ಗೆ ಇರುವ ಸಂಸ್ಕೃತಿಯೇ ಭಾರತೀಯ ಸಂಸ್ಕೃತಿಯಲ್ಲಿ ಕಂಡುಬರುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿಗೆ ಪಾತಿವ್ರತ್ಯ, ಸಚ್ಚಾರಿತ್ರ್ಯ, ಶೀಲ, ಗುರು ಹಿರಿಯರಲ್ಲಿ ವಿನಯ ವಿನಮ್ರತೆ ಹಾಗೂ ಎಂತಹ ಕಷ್ಟಗಳು ಬಂದರೂ ಯಾವುದಕ್ಕೂ ಎದುರಾಡದೆ ಬಂದಂತ ಕಷ್ಟಗಳನ್ನು ಶಾಂತವಾಗಿ ಸಹಿಸಿಕೊಳ್ಳುವ, ಪರರ ಸಂತೋಷಕ್ಕಾಗಿ ತನ್ನ ಸುಖ ಸಂತೋಷವನ್ನು ತ್ಯಾಗ ಮಾಡುವ ಹೆಣ್ಣನ್ನು ಆದರ್ಶ ಸ್ತ್ರೀ ಎಂದು ಹೇಳಲಾಗುತ್ತದೆ. ಹೆಣ್ಣಿನ ಶೀಲ ಮತ್ತು ಪಾತಿವ್ರತ್ಯಕ್ಕ ಕೊಟ್ಟ ಬೆಲೆಯನ್ನು ನಮ್ಮ ಸಂಸ್ಕೃತಿಯಲ್ಲಿ ತಾಯ್ತನಕ್ಕೂ ಅಷ್ಟೇ ಬೆಲೆಯನ್ನು, ಗೌರವವನ್ನು ಕೊಡುತ್ತಿದ್ದಾರೆ.

ಹೆಣ್ಣಿನ ಪಾತಿವ್ರತ್ಯಕ್ಕೆ ಸಮಾಜದಲ್ಲಿ ಹಲವಾರು ಸವಾಲುಗಳು ಸಂಕಷ್ಟಗಳು, ಪಾತಿವ್ರತ್ಯವನ್ನು ಕಾಪಾಡಿಕೊಳ್ಳಲು ಬಹಳಷ್ಟು ಸಮಸ್ಯೆಗಳನ್ನು ಎದುರಿಸುವ ಜಾನಪದ ಕಥೆಗಳು ಕಂಡುಬರುತ್ತವೆ. ಪಾತಿವ್ರತ್ಯದ ಕಥೆಗಳನ್ನು ಹೇಳುವಲ್ಲಿ, ಕೇಳುವಲ್ಲಿ ಬಹುಪಾಲು ಇಷ್ಟ ಪಡುವವರು ಹೆಣ್ಣುಮಕ್ಕಳು, ಕಥೆಗಳ ನಾಯಕರು, ಬುದ್ಧಿವಂತಿಕೆಯಿಂದ, ಪರಾಕ್ರಮದಿಂದ, ದೈಹಿಕ ಬಲದಿಂದ ಅಥವಾ ಅತಿಮಾನುಷ ಶಕ್ತಿಗಳ ಸಹಾಯದಿಂದ ಅಸಾಧರಣ ಪರೀಕ್ಷೆಗಳನ್ನು ಜಯಿಸಿದರೆ, ಕಥಾನಾಯಕಿಯರು ಮಾತ್ರ ಪಾತಿವ್ರತ್ಯ ಬಲದಿಂದ ಎಂತಹ ಕಠಿಣ ಪರೀಕ್ಷೆಗಳನ್ನಾದರೂ, ಸಮಸ್ಯೆಗಳನ್ನಾದರೂ ಜಯಿಸುತ್ತಾರೆ ಎಂಬುದು ಜಾನಪದದ ಕಥೆಗಳಿಂದ ತಿಳಿದುಬರುತ್ತದೆ.

ನಾನು ನನ್ನ ಮನಸ್ಸಿನಲ್ಲಿಯೂ ಕೂಡ ಪರಪುರುಷನನ್ನು ಬಯಸದೆ ಇದ್ದರೆ, ಕಣ್ಣೆತ್ತಿಯೂ ನೋಡದವಳೇ ಆದರೆ, ಗಂಗಾ ಮಾತೆಯು ನನಗೆ ನಡುನೀರಿನಲ್ಲಿ ದಾರಿ ಬಿಡು ಎಂದಾಗ, ನೀರೆಲ್ಲ ಇಬ್ಭಾಗವಾಗಿ ದಾರಿ ಮಾಡಿಕೊಡುತ್ತಾಳೆ. ಕಾದ ಎಣ್ಣೆಯಲ್ಲಿ ಕೈ ಅದ್ದಿದರೂ ಸುಡದಿರುವುದು ತನ್ನ ಪಾತಿವ್ರತ್ಯದ ಬಲದಿಂದ, ಪರಪುರುಷನು ತನ್ನನ್ನು ಬಲತ್ಕರಿಸಲು ಬಂದರೆ ಪಾತಿವ್ರತ್ಯವೇ ನನ್ನನ್ನು ರಕ್ಷಿಸುತ್ತದೆ. ನಾನು ಮೂರು ತಿಂಗಳು ವ್ರತವನ್ನು ಆರಂಭಿಸಿದ್ದೇನೆ. ನನ್ನ ವ್ರತ ಮುಗಿದ ಬಳಿಕ ನಾನು ನಿನ್ನ ವಶವಾಗುತ್ತೇನೆ ಎಂದು ಹೆಣ್ಣು ಪುರುಷನಿಗೆ ಸುಳ್ಳು ಹೇಳುವುದರ ಮೂಲಕ ಪಾತಿವ್ರತ್ಯವನ್ನು ಕಾಪಾಡಿಕೊಳ್ಳುವಲ್ಲಿ ಯಶಸ್ವಿಯನ್ನು ಪಡೆದಿದ್ದಾಳೆ ಎಂಬುದು ಜಾನಪದದ ಕಥೆಯಿಂದ ಕಂಡುಬರುತ್ತದೆ.[೯]

ಒಂದು ಜಾನಪದ ಕಥೆಯಲ್ಲಿ ಋಷಿಗಳು ತಾವಿಲ್ಲದ ಸಂದರ್ಭದಲ್ಲಿ ತಮ್ಮ ಹೆಂಡತಿಯರು ಪರಪುರುಷರನ್ನು ಕೂಡಿಯಾರು ಎಂಬ ಸಂದೇಹದಿಂದ ಹೆಂಡತಿಯರನ್ನು ತಮ್ಮ ಜತೆಯಲ್ಲಿಯೇ ಕರೆದುಕೊಂಡು ಹೋಗುತ್ತಿದ್ದರು. ಇಂತಹ ಅನೇಕ ನಿದರ್ಶನಗಳು ಹೆಣ್ಣಿನ ಶೀಲದ ಬಗ್ಗೆ ಇರುವ ಕಟ್ಟೆಚ್ಚರದ ಸ್ವರೂಪವನ್ನು ತೋರ್ಪಡಿಸುತ್ತವೆ. ಹೆಣ್ಣೆಂದರೆ ವ್ಯಭಿಚಾರಿ, ಕೈಹಿಡಿದ ಗಂಡನಿಗೂ ಅವಳು ನಿಷ್ಠಾವಂತಳಾಗಿರುವುದಿಲ್ಲ. ಪರಪುರುಷನ ಸಂಗಕ್ಕೆ ಹಾತೊರೆಯುವುದೇ ಅವಳ ಮೂಲ ಪ್ರವೃತ್ತಿ ಇದಕ್ಕಾಗಿ ಅವಳು ಎಂತಹ ನೀಚ ಮಟ್ಟಕ್ಕೂ ಇಳಿಯಲು ಹಿಂಜರಿಯುವುದಿಲ್ಲ ಎಂದು ಜಾನಪದರು ಹೆಣ್ಣಿನ ಶೀಲದ ಬಗ್ಗೆ ಮತ್ತು ಪಾತಿವ್ರತ್ಯದ ಬಗ್ಗೆ ನಿಂದಿಸಿರುವುದು ಕಂಡುಬರುತ್ತದೆ.[೧೦]

ಪಾತಿವ್ರತ್ಯ ವ್ಯಭಿಚಾರ ಈ ಎರಡವುಗಳ ವಿರುದ್ಧವಾಗಿರುವ ಅಂಶವೆ ಹೆಣ್ಣಿನ ಶೀಲ. ಶೀಲದಿಂದ ಹೆಣ್ಣಿಗೆ ಸಮಾಜದಲ್ಲಿ ಗೌರವಿದೆ. ಸಮಾಜದಲ್ಲಿ ಎಂತಹ ಕಠಿಣ ಪರೀಕ್ಷೆಗಳು ಬಂದರೂ ಶೀಲದಿಂದ ಪರಿಹರಿಸಿಕೊಳ್ಳುತ್ತಾಳೆ. ಶೀಲ, ಪಾತಿವ್ರತ್ಯವಿಲ್ಲದಿದ್ದರೆ, ಅವಳು ಸಮಾಜದಲ್ಲಿ ನಗೆಪಾಟಲಿಗೆ ಈಡಾಗುತ್ತಾಳೆ. ಸಾಮಾಜಿಕ ಶಿಕ್ಷೆಯನ್ನು ಅನುಭವಿಸುವಂತವಳಾಗುತ್ತಾಳೆ ಎಂಬುದು ಜಾನಪದ ಗದ್ಯ ಸಾಹಿತ್ಯದ ಪ್ರಮುಖ ಭಾಗವಾದ ಗಾದೆಗಳೂ ಸಹ ಹೆಣ್ಣಿನ ಶೀಲಕ್ಕೆ ಮತ್ತು ಪಾತಿವ್ರತ್ಯಕ್ಕೆ ಹೆಚ್ಚಿನ ಆಸಕ್ತಿ ವಹಸಿವೆ.

ಸಾಲ ಇದ್ರೇನು ಸೆರಗು
ಇಲ್ಲದ ಮ್ಯಾಲೆ
ಗರತಿ ಇದ್ರೇನು ನಡತೆ
ಇಲ್ಲದ ಮ್ಯಾಲೆ

ಇಂತಹ ಗಾದೆಗಳಲ್ಲವೂ ಹೆಣ್ಣಿನ ಶೀಲದ ಬಗೆಗೆ ಇರುವ ಕಾಳಜಿಯೇ ಅವಳ ಮೇಲೆ ಇರುವ ಕಠಿಣ ನಿರ್ಬಂಧನೆಗಳಿಗೆ ಕಾರಣವಾಗಿವೆ. ಗದ್ಯರೂಪದ ಗಾದೆಗಳು ಸಹ ಹೆಣ್ಣನ್ನು ನಿರ್ಬಂಧನೆಯೊಳಗೆ ಇಡುವುದನ್ನೆ ಸಮರ್ಥಿಸುತ್ತವೆ.

'ಅಂಕೆಯಲ್ಲಿದ್ದ ಹೆಣ್ಣು ಕೆಡೋದಿಲ್ಲ
ಮಜ್ಜಿಗೆಯಲ್ಲಿದ್ದ ಬೆಣ್ಣೆ ಕೆಡೋದಿಲ್ಲ'

ಎನ್ನುವ ಇಂತಹ ಹಲವಾರು ಗಾದೆಗಳು ಹೆಣ್ಣನ್ನು ಮತ್ತು ಹೆಣ್ಣಿನ ಶೀಲವನ್ನು ಕುರಿತಂತೆ ಜಾನಪದ ಸಾಹಿತ್ಯವು ಹೆಣ್ಣು ಒಂದೇ ರೀತಿಯ ಶೋಷಣೆಗೆ ಒಳಗಾಗಿರುವುದಿಲ್ಲ ಎಂಬುದನ್ನು ತೋರ್ಪಡಿಸಿ ಶೋಷಣೆಗಳು, ಸಂಸ್ಕೃತಿಯಿಂದ ಸಂಸ್ಕೃತಿಗೆ ಬೇರೆ ಬೇರೆಯಾಗಿ ಇರುತ್ತವೆ ಎಂಬುದನ್ನು ಜಾನಪದ ಸಂಸ್ಕೃತಿಯು ಗ್ರಹಿಸಿರುತ್ತದೆ.[೧೮]

ತಾಯ್ತನವು ಗಾದೆಗಳಲ್ಲಿ ಮತ್ತು ಒಗಟುಗಳಲ್ಲಿ ವ್ಯಕ್ತವಾಗಿರುವಂತೆ ಕವನ ಸಂಕಲನಗಳಲ್ಲಿಯೂ ವ್ಯಕ್ತವಾಗಿರುವುದು ಕಂಡುಬರುತ್ತದೆ. ಉದಾ : ಲಂಕೇಶ್ ರವರ 'ಅವ್ವ' ಕವನದಲ್ಲಿ, ತಾಯಿ ಎನ್ನುವ ಪರಿಕಲ್ಪನೆಯನ್ನು ಅವ್ವ ಪದದೊಂದಿಗೆ ಅನ್ವಯಿಸುವಂತೆಯೇ ಕಪ್ಪುನೆಲ ಎಂಬುದನ್ನು ಸಾರ್ವತ್ರಿಕ ರೂಪ ಕಲ್ಪನೆಯಾಗಿಯೇ ಪರಿಭಾವಿಸುವುದು ಫಲವಂತಿಕೆಯ ದೃಷ್ಟಿಯಿಂದ ಕಪ್ಪು ನೆಲವೇ ಫಲವತ್ತತೆಯನ್ನು ಹೊಂದಿರುತ್ತದೆ. ಅಥವಾ ಅತ್ಯಂತ ಶ್ರೀಮಂತವಾದುದಾಗಿ ಕಂಡುಬರುತ್ತದೆ. ಆದ್ದರಿಂದ ತಾಯಿ ಎನ್ನುವ ಕಲ್ಪನೆಯು ಈ ಮನುಷ್ಯರ ತಾಯಿ ಎಂಬುದರ ಬದಲಾಗಿ ಭೂಮಿ ತಾಯಿ ಎಂದು ಕರೆಯಲಾಗಿದೆ.

ಭೂಮಿಯು ಹಚ್ಚ ಹಸಿರಾಗಿ ಕಾಣುವುದು ಅದರ ಫಲವಂತಿಕೆಯ ಸಂಕೇತ, ಹಾಗೆಯೇ ಹೆಣ್ಣು ತುಂಬು ಗರ್ಭಿಣಿಯಾಗಿ ಕಾಣುವುದು ಸಹ ತಾಯಿತನದ ಸಂಕೇತವಾಗಿದೆ ಕಂಡುಬರುತ್ತದೆ.

'ಅವ್ವ' ಕವನದಲ್ಲಿ ಲಂಕೇಶರವರು ತಾಯಿಯನ್ನು, ಅವ್ವನನ್ನು ಆದರ್ಶವಾಗಿ ಇಟ್ಟುಕೊಂಡು, ತಾಯಿತನವನ್ನು ಭೂಮಿಗೆ ಹೋಲಿಕೆ ಮಾಡಿ ಭೂಮಿಯಲ್ಲಿ ರೈತನು ಯಾವ ರೀತಿಯಾಗಿ ಫಲವನ್ನು ಪಡೆಯುತ್ತಾನೋ ಅದೇ ರೀತಿಯಾಗಿ ತಾಯಿತನವೆನ್ನುವುದು ಭೂಮಿಯು ಫಲವಂತಿಕೆಯನ್ನು ಪಡೆದು ಕೊಂಡಂತೆ ಎಂದು ಕವಿಯು ಈ ಕವನದಲ್ಲಿ ಗ್ರಹಿಸಿದ್ದಾನೆ.

ಭೂಮಿಯಲ್ಲಿ ರೈತನು ಉಳುಮೆ ಮಾಡಿದಂತೆಲ್ಲ, ಮತ್ತು ಭೂಮಿಯನ್ನು ಸುಟ್ಟಂತೆಲ್ಲ ಫಲವತ್ತತೆಯು ಹೆಚ್ಚಾಗಿ ಕಂಡುಬರುತ್ತದೆ. ಹಾಗೆಯೇ ಹೆಣ್ಣಿನ ಬದುಕಿನಲ್ಲಿ ತಾಯಿತನವೂ ಸಹ ಅಷ್ಟೇ ಮಹತ್ವವನ್ನು ಪಡೆದುಕೊಂಡಿದೆ. ಹೆಣ್ಣಿಗೆ ತನ್ನ ಬದುಕಿನಲ್ಲಿ, ಕೌಟುಂಬಿಕವಾಗಿ ಅವಳು ಎಷ್ಟು ಸಮಸ್ಯೆಗಳನ್ನು ಎದುರಿಸುತ್ತಾಳೊ ಅಷ್ಟೆಲ್ಲ ಸಮಸ್ಯೆಗಳಿಗೆ ಪರಿಹಾರ ಸಿಗುವುದು ಅವಳು ತಾಯಿತನವನ್ನು ಪಡೆದುಕೊಂಡಾಗ ಮಾತ್ರ ಸಾಧ್ಯ, ಎಂಬ ಮಾತನ್ನು ಕವಿಯು ಈ ಕವನದಲ್ಲಿ ನಿರೀಕ್ಷಿಸಿದ್ದಾನೆ.[೧೯]

ಈ ರೀತಿಯಾಗಿ 'ಅವ್ವ' ಕವನದಲ್ಲಿ ಹೆಣ್ಣನ್ನು ಭೂಮಿ ತಾಯಿಗೆ ಹೋಲಿಕೆ ಮಾಡಿ ಭೂಮಿಯಲ್ಲಿ ಯಾವ ರೀತಿಯಾಗಿ ನಾವು ಬೆಳೆಯನ್ನು ಬೆಳೆಯಲು ಕಪ್ಪುನೆಲವು ಶ್ರೇಷ್ಠವೆಂದು ಬಯಸುತ್ತೇವೆಯೋ

ಹಾಗೆಯೇ ಪತಿವ್ರತೆಯಾದ, ವಿವಾಹವಾದ ಹೆಣ್ಣಿಗೆ ತಾಯಿತನವನ್ನು ಪಡೆದುಕೊಳ್ಳುವುದು ಅಷ್ಟೇ ಮುಖ್ಯವಾಗಿರುತ್ತದೆ ಎಂಬುದನ್ನು 'ಅವ್ವ' ಕವನದಲ್ಲಿ ಗ್ರಹಿಸಿದ್ದಾರೆ. ಮತ್ತು ಭೂಮಿಯಲ್ಲಿ ಬೆಳೆಯನ್ನು ಬಿತ್ತಿದಾಗ ಅದರ ಫಸಲನ್ನು ಪಡೆಯಲು ರೈತನು ಯಾವ ನಿರೀಕ್ಷೆ ಒಳಗೆ ಇರುತ್ತಾನೊ, ಹಾಗೆಯೇ ತಾಯ್ತನವನ್ನು ಪಡೆಯುವಲ್ಲಿ ಹೆಣ್ಣು ತಾಯ್ತನದ ನಿರೀಕ್ಷೆಯೊಳಗೆಯೇ ಸದಾ ಜೀವಿಸುವವಳಾಗಿರುತ್ತಾಳೆ.

ಈ ಬಗೆಗೆ ತಾಯ್ತನವು ಕಾವ್ಯದಲ್ಲಿ ಮೆಚ್ಚುಗೆ, ಕೃತಜ್ಞತೆಯನ್ನು ಪಡೆದುಕೊಂಡಿದೆ. ಕಾವ್ಯವು ಹೆಣ್ಣಿನ ಬದುಕಿಗಾಗಿ ತಾಯ್ತನವನ್ನು ಪಡೆದುಕೊಳ್ಳುವ ಸಲುವಾಗಿ ಒಂದು ಹನಿ ಕಣ್ಣೀರು ಹಾಕುತ್ತದೆ. ಸಾಮಾನ್ಯ ತಾಯಿಯೊಬ್ಬಳನ್ನು ಸಾಮಾನ್ಯ ರೀತಿಯಲ್ಲಿ ಸಹಜವಾಗಿ ಈ ಕವನದಲ್ಲಿ ಚಿತ್ರಿಸಲಾಗಿದೆ. ಹಾಗೆಯೇ ಭೂಮಿಗೆ ಸಮನಾಗಿ ಆಕೆಯನ್ನು ಹೋಲಿಸಲಾಗಿದೆ. ಆ ಹೋಲಿಕೆಯ ನಡುವೆ ಆಕೆಯ ಮಾನವೀಯ ಮೌಲ್ಯಗಳನ್ನು ನಿರಾಕರಿಸುವಂತಿರಲಿಲ್ಲ ಎನ್ನುವ ಗ್ರಹಿಕೆಗಳು ಕಂಡುಬರುತ್ತವೆ.

ಸ್ತ್ರೀ ಮತ್ತು ಪುರುಷ ಸಂಬಂಧಗಳು, ಸ್ಥಾನಮಾನಗಳು ಒಂದು ಕಾಲದಲ್ಲಿ ಸಮಾನವಾಗಿದ್ದವು. ಹಸಿವು ಮತ್ತು ಲೈಂಗಿಕತೆಯು ಮೂಲ ಪ್ರೇರಣೆಗಳಾಗಿದ್ದರೂ ಮಗುವನ್ನು ಹೆರುವುದರಲ್ಲಿ ಪುರುಷನ ಪಾತ್ರವು ಗೌಣವಾಗಿ ಕಂಡುಬರುತ್ತಿದ್ದರಿಂದ ಸ್ತ್ರೀಯ ಗರ್ಭಧಾರಣೆಯ ಶಕ್ತಿಯು ನಿಗೂಢವಾಗಿ ಕಂಡುಬರುತ್ತಿತ್ತು. ಭೂಮಿಯಲ್ಲಿ ಬೀಜಬಿತ್ತಿದಾಗ ಯಾವ ರೀತಿಯಾಗಿ ಬೆಳೆ ಬರುತ್ತದೆಯೋ ಅದೇ ರೀತಿಯಾಗಿ ಸ್ತ್ರೀಯು ಫಲಿಸುತ್ತಾಳೆ ಎನ್ನುವ ನಂಬಿಕೆಯಿತ್ತು. ಸ್ತ್ರೀಯರಲ್ಲಿ ದೇವಿಶಕ್ತಿ ಇದೆಯೆಂದು ತಿಳಿದು ಬಂದಿತು. ಮಾತೃ ದೇವತೆಗಳು ಪ್ರಪಂಚದ ಎಲ್ಲ ಕಡೆಗಳಲ್ಲಿಯೂ ಅನೇಕ ರೀತಿಯ ಹೆಸರುಗಳಿಂದ ಕರೆಯುವುದು ವಾಡಿಕೆಯಾಗಿತ್ತು.

ಶಿಲಾಯುಗದಲ್ಲಿ ಮಾತೃ ದೇವತೆಗಳ ಯುರೋಪ್ ಖಂಡದ ಅನೇಕ ದೇಶಗಳಲ್ಲಿ ದೊರೆತಿರುವ ಸ್ತ್ರೀ ವಿಗ್ರಹಗಳು ಮಾತೃದೇವತಾಪಂಥಕ್ಕೆ ಸಂಬಂಧಿಸಿದವುಗಳಾಗಿದ್ದವು. ಈ ವಿಗ್ರಹಗಳಿಗೆ 'ವೀನಸ್ 'ಗಳು ಎಂದು ಕರೆಯುತ್ತಿದ್ದರು. ಲೈಂಗಿಕ ಆಚರಣೆಯ ಸಂದರ್ಭಗಳಲ್ಲಿ ಈ ವಿಗ್ರಹಗಳಿಗೆ ತುಂಬಾ ಮಹತ್ವವಿದೆಯೆಂದು ಭಾವಿಸಲಾಗಿದೆ. ಜೊತೆಗೆ ಈ ವಿಗ್ರಹಗಳಿಗೆ ಸೃಷ್ಟಿ, ಸಮೃದ್ಧಿ ಮತ್ತು ಜೀವನ ಮುಂದುವರಿಕೆಯ ವಿಗ್ರಹಗಳೆಂದು ಹೇಳಲಾಗಿತ್ತು.

ಕೆಲವೊಂದು ಸಂಸ್ಕೃತಿಯಲ್ಲಿ ಮಾತೃದೇವತೆಯನ್ನು ಭೂಮಿಯ ತಾಯಿಯೆಂದು, ಮಾನವರ ತಾಯಿಯೆಂದು, ದೇವತೆಗಳ ತಾಯಿಯೆಂದು, ಅರಣ್ಯ, ಪ್ರಾಣಿ, ಧಾನ್ಯ, ಪಕ್ಷಿ ಇವುಗಳ ಮಾತೃವೆಂದು ಪೂಜಿಸಲಾಗಿತ್ತು. ಸ್ತನ, ಗರ್ಭ, ಯೋನಿ ಇವುಗಳು ಮಾತೃ ದೇವತೆಯ ಸಂಕೇತಗಳೆಂದು ಭಾವಿಸುತ್ತಿದ್ದರು. ಈ ಮೂರು ಅಂಗಗಳು ಪಾಲನೆ, ಧಾರಣೆ ಮತ್ತು ಸೃಷ್ಟಿಯನ್ನು ಮಾಡುತ್ತವೆಂದು ತಿಳಿದಿದ್ದರು.

ಗ್ರಾಮದೇವತೆಗಳು ಕುಲದೇವತೆಗಳಾಗಿಯೂ ನಮ್ಮ ಸಂಸ್ಕೃತಿಯಲ್ಲಿ ಕಂಡುಬಂದಿವೆ. ಪ್ರಾಚೀನ ಸಮಾಜಗಳಲ್ಲಿ ಪಿತೃವಿಲ್ಲದ ನೂರಾರು ದೇವತೆಗಳನ್ನು ಕಾಣಬಹುದಾಗಿತ್ತು. ಆದರೆ ಮಾತೃವಿಲ್ಲದ ಒಂದು ದೇವತೆಯನ್ನು ಸಹ ಕಾಣಲು ಅಸಾಧ್ಯವಾಗಿತ್ತು. ಪ್ರತಿಯೊಂದು ಜನಾಂಗಕ್ಕೂ ಮಾತೃದೇವತೆ ಇದ್ದೇ ಇರುತ್ತಾಳೆ. ಹಾಗೆಯೇ ಒಂದು ಕುಟುಂಬಕ್ಕೂ ಒಬ್ಬ ದೇವತೆ ಇದ್ದೇ ಇರುತ್ತಾಳೆ. ಅದೃಷ್ಟ ಮತ್ತು ದುರಾದೃಷ್ಟಗಳು ಈ ದೇವತೆಗಳ ಮೂಲಕವೇ ಸಂಭವಿಸುತ್ತವೆ. ಮತ್ತು ಈ ದೇವತೆಗಳು ಕೋಪಗೊಂಡರೆ, ಯಾವುದಾದರೂ ಭೀಕರ ರೋಗವನ್ನು ತರುತ್ತವೆಂಬ ನಂಬಿಕೆಯೂ ಇದೆ.

ಉದಾ : ಸಿಡುಬಿನ ರೋಗಕ್ಕೆ ಗಂಗಮ್ಮ, ವಾಂತಿ ಬೇದಿಗೆ ಮಾರಮ್ಮ, ದಡಾರಕ್ಕೆ ಸುಂಕಲಮ್ಮ ಈ ರೀತಿಯಾಗಿ ಹೆಣ್ಣು ದೇವತೆಗಳನ್ನು ಪುರುಷ ಪ್ರಧಾನರು ಗುರುತಿಸಿದ್ದಾರೆ. ಮಾತೃದೇವತೆಯನ್ನು ಆಹಾರ ಧಾನ್ಯಗಳನ್ನು ಒದಗಿಸಿಕೊಡುವವಳು ಅನ್ನಪೂರ್ಣೇಶ್ವರಿ ಎಂದು ಕರೆಯುತ್ತಿದ್ದಾರೆ. ಇಂತಹ ದೇವತೆಗಳನ್ನೂ ಸ್ತ್ರೀ-ಪುರುಷರಿಬ್ಬರೂ ಪೂಜಿಸುತ್ತಾರೆ. ಆದರೆ ಹೆಚ್ಚಾಗಿ, ವಿಶೇಷವಾಗಿ ಸ್ತ್ರೀಯರು ಪೂಜಿಸುವುದು ಕಂಡುಬರುತ್ತದೆ. ಉದಾ : ಹೆರುವ ಸಂದರ್ಭದಲ್ಲಿ ಮತ್ತು ಮಕ್ಕಳನ್ನು ಬಯಸುವಾಗ ಸ್ತ್ರೀಯರು ಹೆಚ್ಚಾಗಿ ಪೂಜಿಸುತ್ತಾರೆ.

ಇನ್ನೂ ಕೆಲವು ದೇವತೆಗಳು ಪ್ರಾಣಿಗಳ ತಾಯಿಯಾಗಿಯೂ ಕಂಡುಬರುತ್ತವೆ. ಸಂತಾನಾಭಿವೃದ್ಧಿಯ ದೇವತೆಯಾಗಿ, ಪ್ರಾಣಿಗಳ ಹಾಗೂ ಮನುಷ್ಯರ ತಾಯಿಯಾಗಿ, ಸಮಾಜ ಚಿಂತನೆಗಳಲ್ಲಿ ಪ್ರಾಣಿಗಳ ತಾಯಿಯನ್ನು, ಮನುಷ್ಯರ ತಾಯಿಯನ್ನು ಬೇರೆ ಮಾಡಲು ಸಾಧ್ಯವಾಗುವುದಿಲ್ಲ. ಇವಳು ಎಲ್ಲವುದಕ್ಕಿಂತಲೂ ಹೆಚ್ಚಾಗಿ ಆಹಾರವನ್ನು ಒದಗಿಸುವವಳಾಗಿ ಗುರುತಿಸಿಕೊಂಡಿರುತ್ತಾಳೆ. ಹಾಗೆಯೇ ತೆನೆಯನ್ನು ಧಾನ್ಯ ದೇವತೆಯನ್ನಾಗಿ ಪೂಜಿಸುತ್ತಿದ್ದಾರೆ. ಮಾನಿಟು ಜನಾಂಗದ ಒಬ್ಬ ಕ್ರೈಸ್ತ ಪಾದ್ರಿಯು "ನಿಮಗೆ ಏಸು ಇರುವಂತೆ ನಮಗೆ ಈತೆನೆ" ಎಂದು ಹೇಳಿದ್ದಾನೆ.[೧೩]

ಬ್ರೆಜಿಲ್ ದೇಶದ ತೋಪಿ ಜನಾಂಗದವರು ಮಾತೃದೇವತೆಯನ್ನು ಎಲ್ಲ ಸಸ್ಯಗಳ ತಾಯಿಯೆಂದು ಪರಿಗಣಿಸುತ್ತಾರೆ. ಮಾನಿಯೋಕ ಸಸ್ಯದ ಮೂಲದ ಪುರಾಣ ಕಥೆಗಳು ಅವರಲ್ಲಿ ಪ್ರಚಲಿತವಾಗಿರುವುದು ಕಂಡುಬರುತ್ತದೆ. ತರುಣಿಯೊಬ್ಬಳು ಬೆಳ್ಳಗೆ ಪ್ರಕಾಶಿಸುತ್ತಿರುವ ಪುರುಷನೊಬ್ಬನನ್ನು ಕಂಡ ಮಾತ್ರದಿಂದಲೇ ಸಂಭೋಗವಿಲ್ಲದೆ ಗರ್ಭಧರಿಸುತ್ತಾಳೆ. ಅವಳಿಗೆ ಮಂಜಿನಂತೆ ಬೆಳ್ಳಗಿರುವ ಮಗುವೊಂದು ಜನಿಸುತ್ತದೆ. ಆದರೆ ಅದು ಒಂದು ವರ್ಷವಾಗುತ್ತಿದ್ದಂತೆ ಸಾಯುತ್ತದೆ. ಅದನ್ನು ಸಮಾಧಿ ಮಾಡಿದಾಗ ಆ ಸಮಾಧಿಯಿಂದ ಕೂಡಲೇ ಒಂದು ಸಸ್ಯವು ಹೊರಹೊಮ್ಮಿ ಫಲಗಳನ್ನು ಧರಿಸಿತು. ಅದರಲ್ಲಿಯ ಕೆಲವು ಹಣ್ಣುಗಳನ್ನು ತಿಂದ ಕೂಡಲೇ ಗಂಡಸರಿಗೆ ತಮ್ಮನ್ನು ದೈವಾಂಶವು ಸೇರಿದ ಹಾಗೆ ಅನುಭವವಾಯಿತು.

ಅದು ಮೊದಲು ಮೋನಿಯೋಕ ಸಸ್ಯವಾಗಿತ್ತು. ಈ ರೀತಿಯಾಗಿ ಬ್ರೆಜಿಲ್ ನಲ್ಲಿ ಧಾನ್ಯ ದೇವತೆಯಾಗಿ ಪೂಜಿಸುತ್ತಿರುವುದು ಕಂಡುಬರುತ್ತಿತ್ತು.

ಪಶ್ಚಿಮ ಏಶಿಯಾ ಮತ್ತು ಯೂರೋಪು ಖಂಡಗಳ ಧರ್ಮಗಳಲ್ಲಿ ಆಚರಣೆಗಳಲ್ಲಿ ಶ್ರೇಷ್ಠ ಸ್ಥಾನವನ್ನು ಹೊಂದಿರುವ ಮಹಾನ್ ದೇವತೆಯಾಗಿ ಪ್ರಾಮುಖ್ಯತೆಯನ್ನು ಪಡೆಯುವುದರ ಉದ್ದೇಶವೆಂದರೆ, ಕೃಷಿ ಆಚರಣೆಗಳೊಡನೆ ಸೇರಿಸಿ ಸುಗ್ಗಿಯ ಮಾತೆಯರೆಂದು ಅಥವಾ ಚಿನ್ನದ ತೆನೆಯನ್ನು ಹೆರುವ ಮಾತೆಯರೆಂದು, ಭೂತಾಯಿಯೆಂದು ಕರೆಯುತ್ತಿದ್ದರು. ಆದಿವಾಸಿ ಚಿಂತನೆಯಲ್ಲಿ ಹೆಂಗಸರು, ತಮ್ಮ ವ್ಯವಸಾಯದ ಕೆಲಸಗಳನ್ನು ಯಶಸ್ವಿಯಾಗಿ ನೆರವೇರಿಸಲು ಕಾರಣ ಅವರಲ್ಲಿರುವ ಮಂತ್ರಶಕ್ತಿ ಮತ್ತು ಗರ್ಭಧಾರಣ ಶಕ್ತಿಯಂತೆ ಅವರ ಸ್ತ್ರೀತ್ವ ಕಾರಣವಾಗಿದೆ ಎಂಬುದನ್ನು ಗುರುತಿಸಲಾಗಿದೆ. ಪ್ರಾಚೀನ ಮಾನವನು ವ್ಯವಸಾಯದ ಯಶಸ್ಸು ಮಾಂತ್ರಿಕವಾಗಿ ಸ್ತ್ರೀಯ ಮೇಲೆ ಹೊಂದಿಕೊಂಡಿದೆ ಮತ್ತು ಸ್ತ್ರೀಯ ಗರ್ಭಧಾರಣ ಶಕ್ತಿಗೆ ಸಂಬಂಧಿಸಿದೆ ಎಂದು ತಿಳಿದಿದ್ದನು.

ಭೂಮಿಯ ಫಲವಂತಿಕೆಯನ್ನು ಸ್ತ್ರೀಯರ ಫಲವಂತಿಕೆಯನ್ನು ಒಂದೇ ರೀತಿಯಾಗಿ ಪರಿಗಣಿಸಲಾಗಿದೆ. ಎಂಬುದನ್ನು ಗ್ರೀಕ್ ದೇಶದ ರೈತರು ಕೂಡ ತಮ್ಮ ಪೂರ್ವಜರು ಕಲ್ಪಿಸಿದ ಧಾನ್ಯದೇವತಗಳ ಪುರಾಣ ಕಥೆಗಳ ಅಭಿಪ್ರಾಯಗಳನ್ನೇ ತಮ್ಮ ಹಾಡುಗಳಲ್ಲಿ ವ್ಯಕ್ತಪಡಿಸಿರುವುದು ಕಂಡುಬರುತ್ತದೆ.

"ಯಹೂದ್ಯೆ ತೆನೆಯನ್ನು ಕೂಯ್ಯುತ್ತಿದ್ದಾಳೆ. ತರುಣಿಯು ಮಗುವನ್ನು ಹೊಂದಿದ್ದಾಳೆ. ಕೆಲವು ಸಲ ಕೊಯ್ಯುತ್ತಾಳೆ, ಕೆಲವು ಸಲ ಬಗ್ಗಿ ಗೋದಿ ಕಂತೆಯ ಮೇಲೆ ಒರಗುತ್ತಾಳೆ. ಮತ್ತು ಚಿನ್ನದ ಮಗುವಿಗೆ ಜನ್ಮ ಕೊಡುತ್ತಾಳೆ. ಜಗತ್ತಿನಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಮದುಮಗಳ ಮೇಲೆ ತೆನೆಗಳನ್ನು ಅಥವಾ ಅಕ್ಕಿಯನ್ನು ಹಾಕುವುದು ರೂಢಿಯಲ್ಲಿತ್ತು. ಯಹೂದ್ಯರಲ್ಲಿಯೂ ಮದುವೆಯ ಸಂದರ್ಭದಲ್ಲಿ ತೆನೆಗಳಿಂದ ಅಲಂಕರಿಸುವುದು ಮತ್ತು ಸಂತಾನೋತ್ಪತ್ತಿಯ ಸಂಕೇತವಾಗಿ ಮದುಮಗಳ ಮೇಲೆ ಹೇರಿದ ಕಾಳುಗಳನ್ನು ಚೆಲ್ಲುವುದು ರೂಢಿಯಾಗಿತ್ತು. ರಷ್ಯಾದಲ್ಲಿ ಹೊಸದಾಗಿ ಮದುವೆಯಾದ ದಂಪತಿಗಳ ಹಾಸಿಗೆಯನ್ನು ರೈ ಧಾನ್ಯದ ತೆನೆಗಳಿಂದ ಸಿದ್ಧಪಡಿಸಲಾಗುತ್ತಿತ್ತೆಂದು ಮತ್ತು ಹೊಸ ಕಾಲೆಡೋನಿಯಾ ದೇಶದಲ್ಲಿ ಭೂಮಿಯ ಹಾಗೂ ಸ್ತ್ರೀಯ ಫಲವಂತಿಕೆಯನ್ನು ಹೆಚ್ಚಿಸಲು ಋತುಮತಿಯಾದ ತರುಣಿಯೊಬ್ಬಳನ್ನು ಭೂಮಿಯಲ್ಲಿ ಹುಗಿಯಲಾಗುತ್ತಿತ್ತು ಎಂಬುದು ತಿಳಿದುಬಂದಿದೆ."[೪]

ಭೂಮಿಯನ್ನು ಸ್ತ್ರೀಯೊಡನೆ ಹೋಲಿಸುವುದನ್ನು ಸಂಸ್ಕೃತಿಯು ಬೇರೆ ಬೇರೆ ಹಂತದ ಚಿಂತನೆಯಲ್ಲಿ ಕಾಣಬಹುದು. ಪ್ರಾಚೀನ ಭಾರತದಲ್ಲಿ ಸ್ತ್ರೀಯನ್ನು ಬೀಜ ಬಿತ್ತುವ ಹೊಲವೆಂದು ಕರೆಯಲಾಗುತ್ತಿತ್ತು. ಮತ್ತು ಅರ್ಚಕನು ಮದುಮಗನಿಗೆ 'ಅವಳ ಮೇಲೆ ನಿನ್ನ ಬೀಜವನ್ನು ಬಿತ್ತು' ಎಂದು ಹಾರೈಸುತ್ತಿದ್ದನು.

ಖುರಾನಿನ ಪ್ರಕಾರ "ನಿಮ್ಮ ಹೆಂಗಸರು ನಿಮ್ಮ ಹೊಲ' ತಾಯಿಯ ಗರ್ಭ ಒಂದೇ ವಸ್ತುವಿನ ಎರಡು ರೂಪಕಗಳಾಗಿವೆ. "ಬೆತ್ತಲೆಯಾಗಿ ನಾನು ತಾಯಿಯ ಗರ್ಭದಿಂದ ಬಂದೆ, ಬೆತ್ತಲೆಯಾಗಿ ನಾನು ಹಿಂತಿರುಗುವೆ" ಎಂದು ಹೇಳಲಾಗಿದೆ.[೧೪]

ಈ ರೀತಿಯಾಗಿ ಹೆಣ್ಣು ದೇವತೆಗಳು ಗ್ರಾಮಗಳ ಶ್ರೇಯಸ್ಸಿಗಾಗಿ, ಅಭಿವೃದ್ಧಿಗಾಗಿ, ಸುಖ ಶಾಂತಿಗಾಗಿ ಮತ್ತು ಫಲವಂತಿಕೆಯ ಸಂಕೇತಗಳಾಗಿ ಗ್ರಾಮ ದೇವತೆಗಳನ್ನು ಆಚರಿಸುತ್ತಿದ್ದರು. ಮಾನವ ಕುಲವನ್ನು ಅಭಿವೃದ್ಧಿಪಡಿಸುವ ಅವಶ್ಯಕತೆ ಪ್ರಾಚೀನ ಕಾಲದಲ್ಲಿ ಇತ್ತೆಂದು ತಿಳಿದುಬಂದಿದೆ. ಬಹಳಷ್ಟು ಅನಾನುಕೂಲ ಪರಿಸ್ಥಿತಿಯಲ್ಲಿ ಜನ್ಮ ತಾಳುವ ಮಕ್ಕಳಲ್ಲಿ ಬಹುಸಂಖ್ಯೆಯಲ್ಲಿ ಮೃತ್ಯುವಿಗೆ ತುತ್ತಾಗುತ್ತಿದ್ದರು. ಇಂತಹ ಸಂದರ್ಭಗಳಲ್ಲಿ, ಕಾಲಗಳಲ್ಲಿ ಯೋನಿಯನ್ನು ಬಹಳ ಪವಿತ್ರವಾಗಿ ಕಾಣುತ್ತಿದ್ದರು. ಪ್ರಪಂಚದ ಹಲವೆಡೆಗಳಲ್ಲಿ ಯೋನಿ ಪೂಜೆ ಮತ್ತು ಲಿಂಗಪೂಜೆಯನ್ನು ಮಾಡುತ್ತಿದ್ದರೆಂದು ತಿಳಿದುಬರುತ್ತಿತ್ತು. ಭೂಮಿ ಹಾಗೂ ಸ್ತ್ರೀ ಇವುಗಳನ್ನು ಸಮಭಾವನೆಯಿಂದ ನೋಡುತ್ತಿದ್ದರು. ಕನ್ನಡ ನಾಡಿನಲ್ಲಿ ಈಗಲೂ ಹಲವೆಡೆಗಳಲ್ಲಿ ಇರುವ ಲಜ್ಜಾಗೌರಿ ವಿಗ್ರಹಕ್ಕೆ ಪೂಜೆ ಸಲ್ಲಿಸುವ ಕ್ರಮವಿದೆ. "ಲಜ್ಜಾಗೌರಿಯ ಬೆತ್ತಲೆ ವಿಗ್ರಹದ, ಯೋನಿಯನ್ನು ನೆಕ್ಕಿದರೆ ಸಂತಾನ ಪ್ರಾಪ್ತಿಯಾಗುತ್ತದೆಂಬ ಜಾನಪದ ನಂಬಿಕೆ.[೧೫] ಯೋನಿ ಪೂಜೆ ಮಾತ್ರ ಸ್ತ್ರೀ ಶಕ್ತಿಗೆ ಸಂದ ಗೌರವ, ಸ್ತ್ರೀ ಅಬಲೆ ಸ್ವಾತಂತ್ರ್ಯಕ್ಕೆ ಅನರ್ಹಳು ಎಂದು ಸಾರಿದ ನಾಡಿನಲ್ಲೆ ಆದಿಶಕ್ತಿಯೆಂದು ದೇವಿಯನ್ನು ಆರಾಧಿಸುವ ಸಂಪ್ರದಾಯವು ಬೆಳೆದುಬಂದಿದೆ. ದಕ್ಷಿಣ ಭಾರತ ಮತ್ತು ಬಂಗಾಳದಲ್ಲಿ ದೇವಿಯ ದೇವಾಲಯಗಳು ಅಧಿಕವಾಗಿವೆ. ಶಾಕ್ತ ಪಂಥದವರಲ್ಲಿ ಕಾಳಿ, ಕಾಪಾಲಿಕರಲ್ಲಿ ಯೋನಿ ಪೂಜೆ ಮತ್ತು ಪಾವಿತ್ರ್ಯಕ್ಕೆ ಬೇರೆಯಾದ ಆಚಾರ ಸಂಪ್ರದಾಯಗಳಿವೆ ಎಂಬುದನ್ನು ಗಮನಿಸಬಹುದು.

ಜನಪದ, ಪುರಾಣ, ಐತಿಹ್ಯಗಳಲ್ಲಿ ತಾಯ್ತನವನ್ನು ಹೆಣ್ಣಿನ ಶಕ್ತಿಯ ಮುಂದೆ ಪ್ರಚುರಪಡಿಸಿ ಅವಳ ಸ್ಥಾನವನ್ನು ಹೆಚ್ಚಿಸಿ ಅವಳನ್ನು ಸಾಮಾಜಿಕ ನಿರ್ಬಂಧನೆಯೊಳಗೆ ಸಿಲುಕಿಸಿ ಪುರುಷ ಪ್ರಧಾನರು ತಮ್ಮ ಹತೋಟಿಯೊಳಗೆ ತೆಗೆದುಕೊಂಡಿದ್ದಾರೆ. ಸ್ತ್ರೀಯನ್ನು ಮಾತ್ರ ದೇವತೆಯೆಂದು, ಗೃಹದೇವತೆಯೆಂದು ವಂಶ ಅಭಿವೃದ್ಧಿಯನ್ನು ಮಾಡುವವಳು ಎಂದು ತಿಳಿದು ಅವಳಿಗೆ ಪೂಜೆಗಳಿಂದ ಸತ್ಕರಿಸಿ ಮತ್ತೊಂದು ಕಡೆ ಹಿಂಸಿಸುವುದು ಕಂಡುಬರುತ್ತದೆ. ಇವಳು ಕ್ರೂರಿಯಾದವಳು ಮಾನವ ಜನಾಂಗವನ್ನೆ ಉಳಿಸುವ ಬೆಳೆಸುವ, ಸರ್ವನಾಶ ಮಾಡುವ ಶಕ್ತಿಯನ್ನು ಹೊಂದಿದವಳು ಎಂದು ಹೀನಾಯವಾಗಿ ಕಾಣುತ್ತಾರೆ. ಹೆಂಗಸನ್ನು ಇಂತಹ ನಿರ್ಬಂಧನೆಯೊಳಗೆ ಸಿಲುಕಿಸಿರುವುದು ಇಂದು ನಿನ್ನೆಯ ವಿಷಯವಲ್ಲ. ಪ್ರಾಚೀನ ಕಾಲದಿಂದಲೂ ಹೆಣ್ಣನ್ನು ಹಿಂಸಿಸುತ್ತ ಬಂದಿರುವ ಪ್ರಸಂಗಗಳು ಬಹಳಷ್ಟು ಕಂಡುಬಂದಿವೆ.

ಯಾವುದೋ ಒಂದು ಕೆರೆ, ಬಾವಿಯನ್ನು ತೆಗೆಸಬೇಕಾದರೆ ಸಾಂಸ್ಕೃತಿಕ ಆಚರಣೆ ಸಂಪ್ರದಾಯಗಳನ್ನು ಅನುಸರಿಸಬೇಕಾಗುತ್ತದೆ. ಸಂಪ್ರದಾಯದಂತೆ ಕೆರೆ-ಬಾವಿಯನ್ನು ತೆಗೆಸಿ ಕಟ್ಟಿಸಿದಾಗ ಅದು ಯಶಸ್ವಿಯಾಗಿ ಉಳಿದುಕೊಳ್ಳದೆ ವಿಫಲವಾದಂತಹ ಸಂದರ್ಭಗಳಲ್ಲಿ ಜೋಯಿಸರನ್ನು ವಿಚಾರಿಸಿದಾಗ, ಅದಕ್ಕೆ ಜೋಯಿಸರು ಗರ್ಭಿಣಿ ಸ್ತ್ರೀಯನ್ನು ಹಾರವಾಗಿ ಕೊಡಬೇಕು ಅಂದಾಗ ಮಾತ್ರ ಕೆರೆ, ಬಾವಿ ನಿಲ್ಲಲು ಸಾಧ್ಯವೆಂದು ತಿಳಿಸುತ್ತಾರೆ. ಇವರಂತೆ ತುಂಬುಗರ್ಭಿಣಿ ಸ್ತ್ರೀಯನ್ನು ಹಾರವಾಗಿಕೊಡಲು ತಿರ್ಮಾನಿಸುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವುದೇನೆಂದರೆ, ಜೋಯಿಸರು ಪುರುಷ ಪ್ರಧಾನರಾಗಿರುವುದರಿಂದಲೇ ಹೆಣ್ಣನ್ನು ಬಲಿಕೊಡಬೇಕೆಂದು ಹೇಳುತ್ತಾನೆ. ಪುರುಷನ ಹೇಳಿಕೆಯಂತೆ ಸ್ತ್ರೀಯನ್ನು ನಡೆದುಕೊಳ್ಳುವಂತೆ ಒಪ್ಪಿಕೊಂಡವಳಂತೆ ಮನವೊಲಿಸಿ ಕೆರೆಗೆ ಅಥವಾ ಬಾವಿಗೆ ಹಾರವಾಗಿ ಕೊಟ್ಟಂತ ಎಷ್ಟೋ ಘಟನೆಗಳನ್ನೂ ನಾವು ಕಾಣಬಹುದು. ಇಂತಹ ಹಲವಾರು ಹಿಂಸೆಗಳನ್ನು ಪುರುಷ ಪ್ರಧಾನರು ಸ್ತ್ರೀಯರಿಗೆ ಕೊಟ್ಟಿರುವುದನ್ನು ನಾವು ಈಗಲೂ ಹಲವಾರು ಕಥೆ ಕಾದಂಬರಿಗಳಲ್ಲಿ ಕಾಣಬಹುದು. ಇಂತಹುದೇ ಇನ್ನೊಂದು ಕಲ್ಪನೆಯನ್ನು ಇಲ್ಲಿ ಕಾಣಬಹುದು.

ಅಂತಃ ಪುರದ ಸ್ತ್ರೀಯರ ಕಲ್ಪನೆಯು ಈ ಕೆಳಕಂಡಂತಿರುತ್ತದೆ. ಅಂತಃಪುರದಲ್ಲಿರುವ ನೂರಾರು ಮಂದಿ ಸ್ತ್ರೀಯರು ಒಬ್ಬ ರಾಜನನ್ನು ವಿವಾಹವಾಗಿರುತ್ತಾರೆ. ಆದರೆ ರಾಜನು ಇವರೆಲ್ಲರಿಗೆ ಸಂತೃಪ್ತಿಯನ್ನು ನೀಡುವಲ್ಲಿ ವಿಫಲನಾಗಿ ಕಂಡುಬರುತ್ತಾನೆ. ಆದರೂ ನೂರಾರು ರಾಣಿಯರು ಒಂದಲ್ಲ ಒಂದು ದಿನ ನಮಗೆ ಸಂತೃಪ್ತಿಯನ್ನು ನೀಡಿ, ನಮಗೆ ತಾಯ್ತನದ ಭಾಗ್ಯವನ್ನು ಕಲ್ಪಿಸಿಕೊಡುತ್ತಾನೆಂದು ಅಶಾಭಾವನೆಯಿಂದ ರಾಣಿಯರು ಅವನ ಸೇವೆಯನ್ನು ಮಾಡಿಕೊಂಡು ಬಿದ್ದಿರುವ ಸಂದರ್ಭಗಳು ಕಂಡುಬರುತ್ತವೆ. ರಾಜನು ಯುದ್ಧ ಮಾಡುವ ಸಂದರ್ಭವು ಒದಗಿಬಂದಾಗ ರಾಣಿಯರಿಗೆ ನಾನು ಯುದ್ಧದಲ್ಲಿ ಮರಣಹೊಂದಿದರೆ, ನೀವೆಲ್ಲರೂ ಸತಿಹೋಗಬೇಕೆಂದು ಆಜ್ಞಾಪಿಸಿ ಯುದ್ಧಕ್ಕೆ ಹೊರಡುತ್ತಾನೆ. ಇಲ್ಲಿ ಪುರುಷನು ಹೆಂಗಸರಿಗೆ ಸತಿ ಹೋಗುವಂತೆ ಹಿಂಸಿಸುವ ಪ್ರಸಂಗಗಳು ಕಂಡುಬರುತ್ತವೆ.

ಪುರುಷನು ಬಹುಪತ್ನಿತ್ವವನ್ನು ಹೊಂದಿ ಅವರಿಗೆ ಅತಿಹೆಚ್ಚಿನ ರೀತಿಯಲ್ಲಿ ಹಿಂಸೆಗೊಳಪಡಿಸಿರುವುದು ಪುರುಷನ ಅರಿವಿಗೆ ಬರುವುದಿಲ್ಲ. ಪುರುಷ ಪ್ರಧಾನವಾದ ಸಂಸ್ಕೃತಿಯಾದುದರಿಂದ ಪುರುಷನಂತೆ ಸ್ತ್ರೀಯು ನಡೆದುಕೊಳ್ಳಬೇಕೆಂಬ ನಿರ್ಬಂಧನೆಗಳು ಹೆಚ್ಚಾಗುತ್ತವೆ.

ಹೆಂಗಸು ಗಂಡಸಿನೊಂದಿಗೆ ಸೇರಿದಾಗ ಮಾತ್ರ ತಾಯಿಯಾಗುವ ಗುರಿಯನ್ನು ಹೆಂಗಸು ಹೊಂದಿರುತ್ತಾಳೆ. ಆದರೆ ಹೆಂಗಸಿನ ತಾಯಿಯಾಗುವ ಆಸೆಯನ್ನು ಪುರುಷನು ಅರಿತುಕೊಳ್ಳುವುದಿಲ್ಲ. ಪುರುಷನು ಹೆಂಗಸನ್ನು ಕಾಮದ ದೃಷ್ಟಿಯಿಂದ ಮಾತ್ರ ಕಾಣುತ್ತಿರುತ್ತಾನೆ. ಏಕೆಂದರೆ ಹೆಂಗಸು ಎಂದಾಕ್ಷಣ ಅವಳೊಬ್ಬಳು ಕಡಿಮೆ ಬುದ್ಧಿಯುಳ್ಳವಳು. ಅಂಜುಬುರಕಿ ಅವಳಲ್ಲಿ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳುವ ಧೈರ್ಯ

ಕಂಡುಬರುವುದಿಲ್ಲ ಎಂದು ಈ ಪಿತೃಪ್ರಧಾನ ಸಂಸ್ಕೃತಿಯು ತನ್ನ ಅಧೀನದೊಳಗೆ ಇರುವಂತೆ ನಿರೀಕ್ಷಿಸಿ ಕೊಂಡಿದೆ ಎಂದು ಹೇಳಬಹುದು.

ಶಿಷ್ಟ ಸಾಹಿತ್ಯದಲ್ಲಿ ಕೆಲವೊಂದು ದೇವತೆಗಳನ್ನು ಕಾಣಬಹುದು. ಸರಸ್ವತಿಯನ್ನು ವಿದ್ಯಾದೇವತೆಯಾಗಿ, ಲಕ್ಷ್ಮಿಯನ್ನು ವರಗಳ ದೇವತೆಯಾಗಿ ನಮ್ಮ ಸಂಸ್ಕೃತಿಯಲ್ಲಿ ಈ ರೀತಿಯಾಗಿ ಗ್ರಹಿಸಲಾಗಿದೆ. ಸರಸ್ವತಿಯು ವಿದ್ಯೆಯನ್ನು ಕೊಡುವವಳೆಂದು, ಜೊತೆಗೆ ಫಲವಂತಿಕೆಯನ್ನು ಸಹ ಅನುಗ್ರಹಿಸುತ್ತಾಳೆನ್ನುವ ನಂಬಿಕೆ ಹಲವರಲ್ಲಿ ಕಂಡುಬರುತ್ತದೆ. ಹಾಗೆಯೇ ಲಕ್ಷ್ಮಿಯನ್ನು ಸಹ ವರಹಗಳನ್ನು ಕೊಡುವುದರ ಜೊತೆಗೆ ಹೆಣ್ಣಿನ ತಾಯ್ತನವನ್ನು ಒಂದು ವರವಾಗಿ ಕೊಡುವಲ್ಲಿಯು ಯಶಸ್ವಿಯಾಗಿದ್ದಾಳೆನ್ನುವ ನಂಬಿಕೆ ಇದೆ.

ಹೆಣ್ಣು ತಾಯ್ತನವನ್ನು ಪಡೆದುಕೊಂಡಾಗ ನವಜಾತ ಶಿಶುವಿಗೆ ನಾಮಕರಣ ಮಾಡುವದೊಂದು ಸಂದರ್ಭವು ಬಹಳಷ್ಟು ಮಂದಿಗೆ ಹಬ್ಬವಾಗಿ ಕಂಡುಬರುತ್ತದೆ. ಅಂದಿನ ದಿನ ಮನೆಯ ಮುಂದೆ ಸಾರಿಸಿ ರಂಗೋಲಿಯಿಂದ ಸಿಂಗರಿಸಿ, ಅಂಗಳವನ್ನು ಹಸಿರು ತಳಿರು ತೋರಣಗಳಿಂದ ಸಿಂಗರಿಸಿ ಅಕ್ಕಪಕ್ಕದ ಜನರನ್ನು ಬರಮಾಡಿಕೊಂಡು ಬಣ್ಣದ ತೊಟ್ಟಲಕ್ಕೆ ಹೂವು ಕಟ್ಟಿ ತೊಟ್ಟಿಲ ತುಂಬ ಗೊಂಬೆ, ಕುಲಾಯಿ, ತೂಗು ಬಿಡುವರು. ಈ ರೀತಿಯಾಗಿ ತಾಯ್ತನವನ್ನು ಹಬ್ಬಗಳಂತೆ ವೈಭವೀಕರಿಸುವ ಪದ್ಧತಿ ಜನಪದ ಸಂಸ್ಕೃತಿಯಲ್ಲೊಂದೆ ಇಲ್ಲ ಇತರ ಬೇರೆ ಬೇರೆ ಸಂಸ್ಕೃತಿಯಲ್ಲೂ ಕಂಡುಬರುತ್ತದೆ.[೧೬]

ಸ್ತ್ರೀಯನ್ನು ಹಲವಾರು ಹೆಸರುಗಳಿಂದ ಕರೆಯುತ್ತಿದ್ದು ಕಂಡುಬರುತ್ತಿತ್ತು. ಗ್ರಾಮದೇವತೆಯಾಗಿ ಪೂಜಿಸಿರುವುದುಂಟು. ಗ್ರಾಮಕ್ಕೆ ಕ್ಷಾಮ, ರೋಗಗಳು ಬಂದರೆ ಇದೆಲ್ಲ ಗ್ರಾಮದೇವತೆಯ ಶಾಪವೆಂದು ಅವಳಿಗೆ ಹರಕೆಗಳನ್ನು ಕೊಡಲು ಪ್ರಾರಂಭಿಸುತ್ತಿದ್ದರು. ಸ್ತ್ರೀಯನ್ನು ಹಲವಾರು ರೂಪಗಳಲ್ಲಿ ಕಂಡು ಯಾವುದೇ ತೊಂದರೆ ಅಹಿತ ಘಟನೆಗಳು ನಡೆದರೆ ಹೆಣ್ಣೆ ಕಾರಣಿಕರ್ತಳೆಂದು ಪಿತೃಪ್ರಧಾನ ಸಂಸ್ಕೃತಿಯಲ್ಲಿ ಗ್ರಹಿಸಲಾಗಿದೆ.

ತಾಯ್ತನದ ಸಾಂಸ್ಕೃತಿಕ ಗ್ರಹಿಕೆಗಳು ಪಿತೃಪ್ರಧಾನ ಸಂಸ್ಕೃತಿಯಲ್ಲಿ ಗರ್ಭಾಶಯಕ್ಕೆ ತುಂಬಾ ಮಹತ್ವವನ್ನು ನೀಡುತ್ತಿದ್ದವು. ಹೆಣ್ಣು ಎಂದಾಕ್ಷಣ ಅವಳು ದೈವಿಶಕ್ತಿಯುಳ್ಳವಳು ಅವಳಲ್ಲಿ ಯಾವುದೋ ಅದ್ಭುತವಾದ ಶಕ್ತಿ ಅಡಗಿದೆ ಎಂಬುದು ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಕಂಡುಬರುತ್ತಿತ್ತು. ಏಕೆಂದರೆ ಗರ್ಭಾಶಯವು ಒಂದು ಮಹತ್ತರವಾದ ಸ್ಥಾನವನ್ನು ಸಮಾಜದಲ್ಲಿ ಪಡೆದುಕೊಂಡಿದೆ ಗರ್ಭಿಣಿಯಾದ ಹೆಣ್ಣಿಗೆ ಸಮಾಜದಲ್ಲಿ ಸಿಗತಕ್ಕಂತ ಗೌರವ ಆದರಗಳೇ ಬೇರೆ ಬೇರೆಯಾಗಿ ಇದ್ದವು.

ತಾಯಿ ಮಗುವನ್ನು ಹಡೆದಾಗ ಮಗುವಿನೊಂದಿಗೆ ಅವಳ ಪ್ರೀತಿ ಅಪಾರವಾಗಿ ಕಂಡುಬರುತ್ತದೆ. ಹುಟ್ಟಿದ ಮಗುವಿಗೆ ತಾಯಿಯ ಪ್ರೀತಿ ಹೆಚ್ಚಾಗಿರುತ್ತದೆ. ತಾಯಿಯೇ ಅವನ/ಳ ಲಾಲನೆ ಪಾಲನೆ

ಮಾಡುವವಳು ಆಗಿರುತ್ತಾಳೆ. ತಾಯಿಯ ಬೆಚ್ಚನೆಯ ಸ್ಪರ್ಶ, ತಾಯಿಯ ಆಹಾರ, ತಾಯಿಯ ತೃಪ್ತಿ ಮತ್ತು ರಕ್ಷಣೆಯನ್ನು ಕೊಡುವವಳು ಆಗಿರುತ್ತಾಳೆ. ತಾಯಿ ಮಗುವಿನ ಸಂಬಂಧದ ಬಗ್ಗೆ ಪ್ರಾಯ್ಡನು ತನ್ನ ಮಾತಿನಲ್ಲಿ ಈ ರೀತಿಯಾಗಿ ಹೇಳಿದ್ದಾನೆ.

ಸ್ವಮೋಹವುಳ್ಳದ್ದು, ಮನುಷರಿರಲಿ ಇಲ್ಲವೆ ವಸ್ತುಗಳು ಇರಲಿ ಹೊರಗಿನ ವಾಸ್ತವತೆಯು ದೇಹದ ಒಳಗಿನ ಬಯಕೆಯನ್ನು ತೃಪ್ತಗೊಳಿಸುವ ಇಲ್ಲವೇ ಕೆರಳಿಸುವ ನೆಲೆಯಲ್ಲಿ ಮಾತ್ರ ಅರ್ಥವನ್ನು ಪಡೆದಿರುತ್ತವೆ. ಒಳಗಿನದು ಮಾತ್ರ ನಿಜ. ಹೊರಗಿನದು ನನ್ನ ಅಗತ್ಯಗಳ ನೆಲೆಯಲ್ಲಿ ಮಾತ್ರ ನಿಜವೇ ಹೊರತು ಅದರದ್ದೇ ಆದ ಗುಣಗಳ ಇಲ್ಲವೆ ಅಗತ್ಯಗಳ ನೆಲೆಯಲಿಲ್ಲ. ಮಗು ಬೆಳೆದಂತೆ, ತುಂಬಿಕೊಂಡಂತೆ, ವಸ್ತುಗಳನ್ನು ಅವುಗಳ ನೆಲೆಯಲ್ಲೆ ಗ್ರಹಿಸಲು ಸಮರ್ಥವಾಗುತ್ತದೆ.[೧೭]

ಕುಟುಂಬದಲ್ಲಿ ವಿವಾಹಿತ ಮಹಿಳೆಗೆ ತಾಯಿತನವನ್ನು ಪಡೆದುಕೊಳ್ಳುವುದರಿಂದ ಸಂತೋಷ ಸಂಭ್ರಮ ಗಳಿಂದ ಕೆಲವೊಂದು ಆಚರಣೆ ಸಂಪ್ರದಾಯಗಳನ್ನು ಕುಟುಂಬದ ಸದಸ್ಯರೆಲ್ಲರೂ ಕೂಡಿ ಆಚರಿಸುತ್ತಿದ್ದರು. ಹೆಣ್ಣು ತಾಯಿಯಾಗುವಾಗ ಕುಟುಂಬದಲ್ಲಿ ಎಲ್ಲರೂ ಗಂಡು ಮಗುವನ್ನೇ ಹೆರಬೇಕು ಎನ್ನುವ ಆಶಾಭಾವನೆಯನ್ನು ಇಟ್ಟುಕೊಂಡಿರುತ್ತಿದ್ದರು. ಗಂಡು ಮಗುವಾದರೆ ವಂಶದ ಕುಡಿಯು ಬಳ್ಳಿಯಂತೆ ಸಾಗುತ್ತದೆ ಎನ್ನುವ ನಿರೀಕ್ಷೆಯಲ್ಲಿ ಇರುತ್ತಿದ್ದರು.

ಕುಟುಂಬ ಮತ್ತು ವಿವಾಹವು ಹೆಂಗಸಿನ ತಾಯ್ತನಕ್ಕೆ ಬದ್ಧವಾಗಿರುವಂತೆ ಮಾಡಲಾಗಿದೆ. ಹೆಂಗಸಿನ ತಾಯ್ತನವು ಕುಟುಂಬದ ಆಚೆಗೆ ನಡೆಯುವಲ್ಲಿ ಒಪ್ಪಿಗೆಯನ್ನು ನೀಡುವುದಿಲ್ಲ. ಪಿತೃಪ್ರಧಾನ ಸಂಸ್ಕೃತಿಯಲ್ಲಿ ಗಂಡುಮಗುವಿಗೆ ಇರುವಂತ ಗೌರವ ಹೆಣ್ಣುಮಗುವಿಗೆ ಇರಲಿಲ್ಲ. ಆದುದರಿಂದ ಪ್ರಧಾನ ಸಂಸ್ಕೃತಿಯು ತಮ್ಮ ಸಂಸ್ಕೃತಿಗೆ ಹೊಂದಿಕೊಳ್ಳುವಂತೆ ಸ್ತ್ರೀಯರನ್ನು ನಡೆಸಿಕೊಳ್ಳುತ್ತಿದ್ದರು ಎಂಬ ಗ್ರಹಿಕೆ ಮತ್ತು ನಿರೀಕ್ಷೆಯನ್ನು 'ತಾಯ್ತನದ ವಾಸ್ತವಾಂಶಗಳು' ಎನ್ನುವ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

**ಅಡಿಟಿಪ್ಪಣಿಗಳು**

೧. ಡಾ.ಎಚ್.ಎಸ್.ಶ್ರೀಮತಿ, **ಮಹಿಳಾ ಅಧ್ಯಯನ, ವಿಶೇಷ ಸಂಚಿಕೆ**, ಪು.೧೯

೨. ಡಾ.ಆರ್.ಇಂದಿರಾ, **ಮಹಿಳೆ : ಸಮಾಜ ಮತ್ತು ಸಂಸ್ಕೃತಿ**, ಪು.೫೭

೩. ಅದೇ, ಪು.೧೦೦

೪. ಡಾ.ಪ್ರೀತಿಶುಭಚಂದ್ರ, **ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು**, ಪು.೧೯೬

೫. ಡಾ.ಆರ್.ಇಂದಿರಾ, ಮಹಿಳೆ : ಸಮಾಜ ಮತ್ತು ಸಂಸ್ಕೃತಿ, ಪು.೧೦೨

೬. ಹೆಚ್.ಎಸ್.ಅಚ್ಚಪ್ಪ, ಕನ್ನಡ ಗಾದೆಗಳು, ಪು.೬೨

೭. ಅದೇ, ಪು.೬೩

೮. ಗಿರೀಶ್ ಕಾರ್ನಾಡ್‌ರ ನಾಗಮಂಡಲ, ಚಲನಚಿತ್ರ

೯. ಜಿ.ಎಸ್.ಭಟ್ಟ(ಪ್ರ.ಸಂ), ಜನಪದ ೧೯೯೧, ಪು.೭೯

೧೦. ಅದೇ, ಪು.೮೦

೧೧. ಅದೇ, ಪು.೮೧

೧೨. ಎಚ್.ಎಸ್.ವೆಂಕಟೇಶ್‌ಮೂರ್ತಿ, ಶತಮಾನದ ಕಾವ್ಯ, ಪು.೨೭೩

೧೩. ಸಿದ್ಧಲಿಂಗಯ್ಯ, ಗ್ರಾಮದೇವತೆಗಳು, ಪು.೨೮

೧೪. ಅದೇ, ಪು.೩೦

೧೫. ಡಾ.ಬಿ.ಎಂ.ರೋಹಿಣಿ, ಸ್ತ್ರೀ ಶಿಕ್ಷಣ, ಸಂಸ್ಕೃತಿ, ಪು.೪೭

೧೬. ಬಿ.ವಾಯ್.ಕೌಜಲಗಿ, ತಾಯಿಮಗು, ಪು.೨೪

೧೭. ಡಾ.ಕೆ.ವಿ.ನಾರಾಯಣ(ಅನು), ಪ್ರೀತಿಸುವುದೆಂದರೆ, ಪು.೩೩

ಅಧ್ಯಾಯ ೩

# ತಾಯ್ತನದ ವಾಸ್ತವಾಂಶಗಳು

ನಿಸರ್ಗ ಸಹಜದಲ್ಲಿ ಹೆಣ್ಣು ತಾಯ್ತನವನ್ನು ಪಡೆದುಕೊಳ್ಳುವುದು ಅವಳ ತಪ್ಪಲ್ಲ. ಅವಳು ನೈಸರ್ಗಿಕವಾಗಿ ತಾಯ್ತನವನ್ನು ಪಡೆದುಕೊಳ್ಳಬಹುದು. ಆದರೆ ಕೇವಲ ನೈಸರ್ಗಿಕವಾಗಿ ಪಡೆದುಕೊಂಡಂತಹ ತಾಯ್ತನಕ್ಕೆ ಸಮಾಜದಲ್ಲಿ ಮನ್ನಣೆ ಸಿಗುವುದಿಲ್ಲ. ನೈಸರ್ಗಿಕ ತಾಯ್ತನವನ್ನು ಪಡೆದುಕೊಂಡ ಹೆಣ್ಣನ್ನು ಸಮಾಜವು ಒಪ್ಪುವುದಿಲ್ಲ ಹೆಣ್ಣು ತಾಯಿಯಾಗಬೇಕಾದರೆ, ಅವಳು ವಿವಾಹ, ಕುಟುಂಬ ಮತ್ತು ಕುಟುಂಬದ ನಿಯಮಗಳ ಚೌಕಟ್ಟಿನಲ್ಲಿಯೇ ಮಕ್ಕಳನ್ನು ಹೆರಬೇಕಾಗುತ್ತದೆ. ನಿಸರ್ಗ ಸಹಜವಾದ ತಾಯ್ತನವನ್ನು ಸಮಾಜದ ಗ್ರಹಿಕೆ ಮತ್ತು ನಿರೀಕ್ಷೆಗಳಿಗೆ ಅನುಗುಣವಾಗಿ ಪಡೆಯಬೇಕಾಗುತ್ತದೆ. ನಿಸರ್ಗ ಸಹಜವಾಗಿ ಅವಳು ತಾಯ್ತನವನ್ನು ಪಡೆದುಕೊಂಡರೆ, ಅವಳು ಮಾನಸಿಕವಾಗಿ ಒತ್ತಡಕ್ಕೆ ಒಳಗಾಗಬೇಕಾಗುತ್ತದೆ.

ಹೆಣ್ಣಿಗೆ ನಿಸರ್ಗ ಸಹಜವಾದ ಜೀವ ಜಗತ್ತಿನಲ್ಲಿ ತಾಯ್ತನವೆನ್ನುವುದು ಅತ್ಯಂತ ಜವಬ್ದಾರಿಯುತವಾದ ಕ್ರಿಯೆ. ಇದಕ್ಕೆ ತಕ್ಕಂತ ಎಲ್ಲ ನೈಸರ್ಗಿಕ ಸಹಜ ಗುಣಗಳನ್ನು ನಿಸರ್ಗವು ಅವಳಿಗೆ ಒದಗಿಸಿಕೊಡುತ್ತದೆ. ಜೀವವನ್ನು ಜೀವನ ಕಣವನ್ನು ಮಗುವಾಗಿ ರೂಪಿಸುವ ಶಕ್ತಿಯನ್ನು ನಿಸರ್ಗವು ಅವಳಿಗೆ ಕೊಟ್ಟಿದೆ. ಮುಖ್ಯವಾಗಿ ದೈಹಿಕ ಅಂಗವಾದ ಗರ್ಭಾಶಯ ಗಂಡು ಹೆಣ್ಣಿನ ಮಿಲನದಲ್ಲಿ ಸೃಷ್ಟಿಯಾದಂತ ಜೀವಕಣವನ್ನು ಮಗುವಾಗಿ ರೂಪಿಸುವ ಸಂಪೂರ್ಣ ಕೆಲಸವನ್ನು ಹೆಣ್ಣಿನ ದೇಹಕ್ಕೆ ಸಂಬಂಧಿಸುವಂತೆ ನಿಸರ್ಗವು ಮಾಡಿದೆ.

ಹೆಣ್ಣು ಋತುಮತಿಯಾದಾಗ ಪಿತೃಪ್ರಧಾನ ವ್ಯವಸ್ಥೆಯು ಅವಳನ್ನು ಕುಟುಂಬದ ವ್ಯವಸ್ಥೆಗೆ, ಕಟ್ಟುಬದ್ಧವಾಗಿ ನಡೆದುಕೊಳ್ಳುವಂತೆ ನಿರ್ಬಂಧನೆಗಳನ್ನು ಹೇರುತ್ತದೆ. ಹೆಣ್ಣಾದವಳು ಹೀಗೆ ಇರಬೇಕು, ನಾಜೂಕಿನಿಂದ ಇರಬೇಕು, ಹೀಗೆ ಇರಬಾರದು ಎಂಬುದನ್ನು ಪಿತೃಪ್ರಧಾನ ವ್ಯವಸ್ಥೆಯೂ ನಿರ್ಧರಿಸುವಂತೆಯೇ ಹೆಣ್ಣು ನಡೆದುಕೊಳ್ಳಬೇಕಾಗುತ್ತದೆ. ಪಿತೃಪ್ರಧಾನ ಸಮಾಜವಾಗಿರುವುದರಿಂದ ಹೆಣ್ಣು ಪುರುಷನ ನಿರ್ಣಯಗಳಿಗೆ ಇದುರಾಗಿ ನಡೆದುಕೊಳ್ಳುತ್ತಿರಲಿಲ್ಲ. ಹಾಗೆ ನಡೆದುಕೊಳ್ಳದಂತೆ ಅವಳ ಮೇಲೆ ಸಾಮಾಜಿಕ ನಿರ್ಬಂಧಗಳನ್ನು ಹೇರಲಾಗಿದೆ. ಪುರುಷನು ಹಾಕಿಕೊಟ್ಟ ಚೌಕಟ್ಟಿನಲ್ಲಿಯೆ ಹೆಣ್ಣು ತನ್ನ ಸಮಯವನ್ನೆಲ್ಲ ಕಳೆಯುವ ಪ್ರಸಂಗಗಳು ಸಹಕಂಡುಬರುತ್ತವೆ. ಪುರುಷನ ನಿಯಮಗಳಿಗೆ ಅನುಗುಣವಾಗಿ ಅವಳು ನಡೆದುಕೊಳ್ಳಬೇಕಾಗುತ್ತಿತ್ತು.[೧]

ಉದಾ : ವಿವಾಹ ಬಾಹಿರವಾಗಿ ಮಗುವನ್ನು ಪಡೆಯುವುದು ಕುಟುಂಬದಲ್ಲಿ ಅಪರಾಧವಾಗಿ ಕಂಡುಬರುತ್ತದೆ. ಇಂತಹ ಸಂದರ್ಭಗಳಲ್ಲಿ ಹೆಣ್ಣು ಕುಟುಂಬದ ಕಟ್ಟುಪಾಡುಗಳಿಗೆ ಬದ್ಧಳಾಗಿ ನಡೆದು ಕೊಳ್ಳಬೇಕಾಗಿದೆ.

ಹೆಣ್ಣು ಸಾಮಾಜಿಕ ನಿಯಮಗಳನ್ನು ದಾಟಿ ತಾಯ್ತನವನ್ನು ಪಡೆದುಕೊಂಡರೆ, ಬಹಳಷ್ಟು ತೊಂದರೆಗಳನ್ನು, ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಸಮಾಜದಲ್ಲಿ ಗಟ್ಟಿತನದಿಂದ ತನ್ನ ಜೀವನವನ್ನು ಮುಂದುವರಿಸಿ ಕೊಂಡು ಹೋಗಲು ಆಗದೇ ಇರುವಂತ ಸಾಮಾಜಿಕ ವಾಸ್ತವಾಂಶಗಳನ್ನು ವಾತವರಣವು ಸೃಷ್ಟಿಮಾಡುತ್ತದೆ. ಮಹಿಳೆಯು ಆರ್ಥಿಕವಾಗಿ ಸಂಪಾದನೆ ಮಾಡಿ ಹುಟ್ಟಿದ ಮಗುವಿನ ಯೋಗಕ್ಷೇಮವನ್ನು ನೋಡಿಕೊಂಡರೂ, ಆ ಮಗುವಿಗೆ ಸಾಮಾಜಿಕವಾಗಿ ಯಾವುದೇ ಸ್ಥಾನವನ್ನು ಸಿಗದಂತೆ ಪಿತೃಪ್ರಧಾನ ಸಂಸ್ಕೃತಿಯು ನಿರ್ವಚಿಸಿಕೊಂಡು ಬಂದಿದೆ. ಅವಳಿಗೆ ಹೆಣ್ಣು ಮಗುವಾದರೆ, ಜಾತಿಯಲ್ಲಿಯೂ ಸಹ ಅತ್ಯಂತ ನಿಕೃಷ್ಟವಾಗಿ ಕಾಣಲು ಪ್ರಾರಂಭಿಸುತ್ತಾರೆ. ಹೆಣ್ಣು ಮಗು ಶಾಲೆಯಲ್ಲಿ ತನ್ನ ಹೆಸರನ್ನು ನೊಂದಾಯಿಸಬೇಕಾದರೆ ಮುಖ್ಯವಾಗಿ ಬೇಕಾಗಿರುವುದು ಆ ಮಗುವಿನ ತಂದೆಯ ಹೆಸರು ಅವಶ್ಯಕವಾಗಿ ಬೇಕೆ ಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಹೆಣ್ಣು ಆರ್ಥಿಕವಾಗಿ ಸಬಲಳಾಗಿದ್ದರೂ ಸಹ ಸಾಮಾಜಿಕವಾದ ನಿಂದನೆಗಳಿಗೆ ಒಳಗಾಗುವ ಸಂಭವ ಇರುತ್ತದೆ. ಪಿತೃಪ್ರಧಾನ ಸಮಾಜವು ಈ ರೀತಿಯಾಗಿ ಹೆಣ್ಣನ್ನು ಒಂದು ಕ್ರಮಬದ್ಧವಾದ ರೀತಿಯಲ್ಲಿ ಕುಟುಂಬದ ವ್ಯವಸ್ಥೆಯಲ್ಲಿಯಂತೆ ನಡೆದುಕೊಳ್ಳುವಂತೆ ಮಾಡಿದಾಗ ಮಾತ್ರ ಅವಳಿಗೆ ಸಿಗುವಂತ ಗೌರವ ಆದರಗಳು ಬೇರೆ ಬೇರೆಯಾಗಿ ಇರುತ್ತವೆ.

ವಾಸ್ತವಾಂಶದಲ್ಲಿ ಹೆಣ್ಣಿನ ತಾಯ್ತನಕ್ಕೆ ಸಂಬಂಧಿಸಿದಂತ ಔಷಧಿಗಳನ್ನು ವಿಜ್ಞಾನ ಕಂಡುಹಿಡಿದಿರುವ ಔಷಧಿಗಳು ಹೆಂಗಸಿನ ಆರೋಗ್ಯವನ್ನು ಕೆಡಿಸಿ ಅವಳ ದೇಹ, ಆರೋಗ್ಯದ ಮೇಲೆ ಅಗಾಧವಾದ ದುಷ್ಪಾರಿಣಾಮ ಬಿರುತ್ತವೆ.

ವಿವಾಹ ಬಾಹಿರ ಸಂಬಂಧದಲ್ಲಿ ತಾಯಿಯಾಗಬಾರದು ಎನ್ನುವುದು ಸಾಮಾಜಿಕ ಅಪರಾಧ. ಇದು ನಿಸರ್ಗ ಸಹಜವಾದ ನಿರೀಕ್ಷೆ ಇವೆಲ್ಲವೂ, ಸಮಾಜವು ಹೇರಿದ ನಿಂದನೆಗಳು, ನಿಸರ್ಗದಲ್ಲಿ ಇವುಗಳು ಅಪರಾಧವೆನಿಸುವುದಿಲ್ಲ. ವಿವಾಹ ಸಂಬಂಧಗಳನ್ನು ಮುರಿಯಬಹುದು. ಮತ್ತು ಅವಳು ತನ್ನ ಅನುಕೂಲಕ್ಕೆ ತಕ್ಕಂತೆ ನಡೆದುಕೊಳ್ಳಬಹುದು. ವಿವಾಹ ಬಾಹಿರ ಸಂಬಂಧ ಈ ಕೆಳಗಿನ ಅಂಗಗಳನ್ನು ಹೊಂದಿರುವುದು ಕಂಡುಬರುತ್ತದೆ.

೧. ಅವಿವಾಹಿತ ತಾಯ್ತನ

೨. ಅತ್ಯಾಚಾರದ ತಾಯ್ತನ

೩. ಗಂಡು ಮಕ್ಕಳು ಬೇಕು ಎನ್ನುವ ತಾಯ್ತನ

## ಅವಿವಾಹಿತ ತಾಯ್ತನ

ವಿವಾಹಿತ ಮಹಿಳೆ ಕಾರಣಾಂತರಗಳಿಂದ ಪತಿಯಿಂದ ದೂರವಾಗಿ ಬಂದು ಕುಟುಂಬವನ್ನು ಏಕಾಂಗಿಯಾಗಿ ನಿರ್ವಹಿಸಬೇಕಾದಂಥ ಮಹಿಳೆಯ ಪರಿಸ್ಥಿತಿಗಿಂತ ವಿವಾಹ ಎನ್ನುವ ಸಾಮಾಜಿಕ ಸಂಸ್ಥೆಯಿಂದ ಹೊರಗೆ ಉಳಿದೇ ತಾಯಿಯಾದ ಮಹಿಳೆಯ ಪರಿಸ್ಥಿತಿ ನಮ್ಮ ಪಿತೃಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಅತ್ಯಂತ ಸಮಸ್ಯಾತ್ಮಕವಾಗಿ ಕಂಡುಬರುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ವಿವಾಹವಿಲ್ಲದೆ ಸಂತತಿಯ ಮುಂದುವರಿಕೆ ಸಾಧ್ಯವಿಲ್ಲ. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ವಿವಾಹ ಸಂಬಂಧವನ್ನು ಪ್ರವೇಶಿಸದೇ ತಾಯ್ತನವನ್ನು ಪಡೆದುಕೊಂಡ ಮಹಿಳೆಯು ಸಮಾಜದ ನಿಂದನೆ ಹಾಗೂ ಟೀಕೆಗಳಿಗೆ ಗುರಿಯಾಗಬೇಕಾಗುತ್ತದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಅವಿವಾಹಿತ ತಾಯ್ತನದ ಪರಿಕಲ್ಪನೆಯನ್ನು ಒಪ್ಪಿಕೊಂಡಿವೆ. ಆದರೆ ಭಾರತೀಯ ಸಮಾಜದಲ್ಲಿ ಅವಿವಾಹಿತ ತಾಯ್ತನಕ್ಕೆ ಯಾವುದೇ ರೀತಿಯಾಗಿ ಮನ್ನಣೆ ಸಿಗುವುದಿಲ್ಲ. ಇಂತಹ ಒಂದು ಪರಿಸ್ಥಿತಿಯನ್ನು ಸಮಾಜ ಬಾಹಿರವಾದ ಕೃತ್ಯವೆಂದು ಅನುಸರಿಸುವುದೇ ಭಾರತೀಯ ಸಮಾಜದಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಭಾರತೀಯ ಸಮಾಜದಲ್ಲಿ ಅವಿವಾಹಿತ ತಾಯಿಯಾದ ಮಹಿಳೆಯನ್ನೇ ಈ ಸ್ಥಿತಿಗೆ ತರುತ್ತಿದ್ದರೆ, ಹೊರತು ಅದಕ್ಕೆ ಸಮಭಾಗಿಯಾದ ಪುರುಷನಿಗೆ ಯಾವುದೇ ರೀತಿಯ ತೊಂದರೆಗಳು ಇರಲಿಲ್ಲ. ಪುರುಷ ಪ್ರಧಾನ ಸಂಸ್ಕೃತಿಯ ದ್ಯೋತಕವಾದ ಸಾಮಾಜಿಕ ವ್ಯವಸ್ಥೆ ಕೂಡ ಸ್ತ್ರೀಯನ್ನೆ ಬೆರಳು ಮಾಡಿ ತೋರಿಸುತ್ತದೆಯೇ ವಿನಃ ಪುರುಷನನ್ನು ಹೊಣೆಗಾರ ಎಂದು ದೂಷಿಸುವ ಸಂಭವ ಬಹುಕಡಿಮೆ. ಹೆಜ್ಜೆ-ಹೆಜ್ಜೆಗೂ ಹೆಣ್ಣನ್ನು ನಿಂದಿಸುವ ದೂಷಿಸುವಂತ ಪರಿಸ್ಥಿತಿಗೆ ತಂದೊಡ್ಡುತ್ತಾರೆ.

ಸ್ತ್ರೀಯರ ಬದುಕಿನಲ್ಲಿ ವಿವಾಹವು ಕಡ್ಡಾಯ ಎನ್ನುವ ಭಾವನೆಯಲ್ಲಿ ಎಲ್ಲ ಪೋಷಕರು ಮನಗಂಡಿರುತ್ತಾರೆ. ತಮ್ಮ ಮಗಳು ಲೈಂಗಿಕವಾಗಿ ಶೋಷಣೆಗೆ ಒಳಗಾಗಿ ಅವಿವಾಹಿತಳಾಗಿ ತಾಯಿತನವನ್ನು ಪಡೆದುಕೊಂಡರೆ ಕುಟುಂಬದ ಘನತೆ, ಗೌರವಕ್ಕೆ ದಕ್ಕೆ ಬರುತ್ತದೆಂದು ಅರಿತುಕೊಂಡು ಆದಷ್ಟು ಚಿಕ್ಕ ವಯಸ್ಸಿನಲ್ಲಿಯೇ ಮಗಳ ಮದುವೆಯನ್ನು ಮಾಡಿ ತಮ್ಮ ಹೊಣೆಗಾರಿಕೆಯನ್ನು ಜವಬ್ದಾರಿಯನ್ನು ಕಳೆದುಕೊಳ್ಳಬೇಕೆಂದು ಆತುರಪಡುತ್ತಿರುತ್ತಾರೆ.

ಮಹಿಳೆಯರು ಅತ್ಯಂತ ಜಾಗ್ರತರಾಗಿರಬೇಕಾದ್ದು 'ಲೈಂಗಿಕ ಆಕ್ರಮಣ'ದ ಬಗ್ಗೆ ಎನ್ನುವ ಪರಿಕಲ್ಪನೆಯು ಪಿತೃ ಪ್ರಧಾನ ಸಮಾಜದ ಎಲ್ಲೆಡೆಯಲ್ಲೂ ಹಬ್ಬಿಕೊಂಡಿದೆ. ಹೆಣ್ಣನ್ನು ವಿವಾಹ ಎನ್ನುವ ಸಾಮಾಜಿಕ ಸಂಸ್ಥೆಯೊಳಗೆ ಸೇರಿಸಿಬಿಟ್ಟರೆ, ಅವರು ಸುಖವಾಗಿರುತ್ತಾರೆ ಎಂಬ ನಂಬಿಕೆ ಬಲವಾಗಿ ಬೇರೂರಿರುವುದು ಕಂಡುಬರುತ್ತದೆ. ವೇಶ್ಯಾವೃತ್ತಿಯಲ್ಲಿ ಏರ್ಪಡುವ ಮುಕ್ತ ಲೈಂಗಿಕ ಸಂಬಂಧಗಳು ಅಥವಾ ಅಮಾಯಕ

ಹೆಣ್ಣು ಮಕ್ಕಳ ಮನಸ್ಸಿನಲ್ಲಿ ಭವಿಷ್ಯದ ಬಗ್ಗೆ ಬಣ್ಣದ ಕನಸುಗಳನ್ನು ಕಟ್ಟಿ ಅವರೊಡನೆ ಲೈಂಗಿಕ ಸಂಪರ್ಕವನ್ನು ಸ್ಥಾಪಿಸಿ ನಂತರ ಅವರಿಗೆ ಮೋಸಮಾಡುವುದು ಇಂತಹ ಪರಿಸ್ಥಿತಿಗಳು ಸಾಮಾನ್ಯವಾಗಿ ಹೆಣ್ಣು ಮಕ್ಕಳಿಗೆ ಅವಿವಾಹಿತವಾಗಿ ತಾಯ್ತನವನ್ನು ಪಡೆದುಕೊಳ್ಳಲು ಕಾರಣವಾಗುತ್ತದೆ. ಇನ್ನು ಕೆಲವು ಮಹಿಳೆಯರು ವಿವಾಹ ಎನ್ನುವ ಸಂಬಂಧವನ್ನು ಪ್ರವೇಶಿಸದೇ ತಾಯಿತನವನ್ನು ಪಡೆದುಕೊಳ್ಳಲು ನಿರ್ಧರಿಸುತ್ತಾರೆ. ಆದರೆ ಇಂತಹವರ ಸಂಖ್ಯೆ ಕೇವಲ ಬೆರಳೆಣಿಕೆಯಷ್ಟು ಮಾತ್ರ ಕಂಡುಬರುತ್ತದೆ.

ಪರಿಸ್ಥಿತಿಯ ಒತ್ತಡಗಳಿಗೆ ಮತ್ತು ಬಲತ್ಕಾರದ ಲೈಂಗಿಕ ಸಂಬಂಧಕ್ಕೆ ತಾಯಿತನವನ್ನು ಪಡೆದುಕೊಂಡವರ ಸಂಖ್ಯೆ ಹೆಚ್ಚು. ಯಾವ ಮಹಿಳೆಯಾದರೂ ತನಗೆ ಎಂಥಹುದೇ ಪರಿಸ್ಥಿತಿಯು ಒದಗಿಬರಲಿ ವಿವಾಹವೆನ್ನುವ ಸಂಸ್ಥೆಯಿಂದ ಹೊರಗುಳಿದು ತಾಯಿತನವನ್ನು ಪಡೆದುಕೊಂಡಂತಹ ಸಂದರ್ಭಗಳು ಕಂಡುಬಂದರೂ ಅವರು ಎದುರಿಸುವಂತ ಸಮಸ್ಯೆಯೆಂದರೆ ಸಾಮಾಜಿಕ ಕಳಂಕ. ಅವಿವಾಹಿತ ತಾಯಂದಿರು ತಮ್ಮ ಪಾಡಿಗೆ ತಾವು ಬದುಕುತ್ತಿದ್ದರೂ ಅವರನ್ನು ವಿವಾಹದ ನಿಯಮ ಬಾಹಿರವಾದ ಕೃತ್ಯವನ್ನು ಎಸಗಿದವರಂತೆ ಸಮಾಜವು ಪರಿಗಣಿಸುತ್ತದೆ. ಅವರನ್ನು ಒಂದು ವಿಶೇಷ ವರ್ಗದವರಂತೆ ಕಾಣುತ್ತದೆ. ಅವರೊಡನೆ ಸರಿಯಾಗಿ ಒಡನಾಟವನ್ನು ಇರಿಸಿಕೊಳ್ಳುವುದು ತಮ್ಮ ಘನತೆಗೆ ಸರಿಯಾಗಿ ಕಂಡುಬರುವುದಿಲ್ಲವೆಂದು, ತಾಯಿಯಾದವಳಿಗೆ ಕಟುವಾದ ಹಿಂಸೆಯನ್ನು ಕೊಡುವಲ್ಲಿ ಹಿಂಜರಿಯುವುದಿಲ್ಲ. ಸ್ವತಃ ಅವಳಿಗೆ ಬದುಕುವ ಹಕ್ಕನ್ನು ಸಮಾಜವು ಕಸಿದುಕೊಂಡು ಅವಳನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತದೆ.

ತಾಯಿಯಾದವಳು ಮಗುವನ್ನು ಹೆತ್ತು-ಹೊತ್ತು ಸಾಕಿ ಸಲಹುವವಳು. ಆದರೆ ಆಕೆಯ ಹೆಸರಿನಿಂದಾಗಲಿ, ಅವಳ ಮೂಲದಿಂದಾಗಲಿ ಮಗುವಿನ ವಂಶಾವಳಿಯನ್ನು ಗುರುತಿಸುವ ಪರಂಪರೆಯು ಈ ಸಮಾಜದಲ್ಲಿ ಕಂಡುಬರುವುದಿಲ್ಲ. ಮಗುವಿಗೆ ಶಾಲೆಯ ಪ್ರವೇಶದಿಂದ ಹಿಡಿದು ಜೀವನದ ವಿವಿಧ ಹಂತಗಳಲ್ಲಿ ವ್ಯಕ್ತಿ ತನ್ನನ್ನು ಗುರುತಿಸಿಕೊಳ್ಳಬೇಕಾದಾಗ ತನ್ನ ತಂದೆ ಯಾರು ಎಂಬ ಪ್ರಶ್ನೆಯು ಸರಳವಾಗಿ ಉದ್ಭವವಾಗುತ್ತದೆ. ತಾಯಿಯಾದವಳು ತನ್ನ ಪರಿಶ್ರಮದಿಂದ ಮಗುವನ್ನು ಬೆಳೆಸಿದರೂ ಸಹ ಅದು ಗಣನೆಗೆ ಬರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿಯೂ ತಂದೆ ಯಾರು ಎನ್ನುವ ಪ್ರಶ್ನೆಯ ಉದ್ಭವವಾಗುತ್ತದೆ. ಆಗ ತಾಯಿಯಾದವಳು ಮುಜುಗರ ಅವಮಾನಗಳನ್ನು ಎದುರಿಸಬೇಕಾಗುತ್ತದೆ. ತಮ್ಮ ಜೀವನ ನಿರ್ಧಾರಗಳನ್ನು ಧೈರ್ಯವಾಗಿ, ಅಂಜದೆ ಅಳುಕದೇ ಆರ್ಥಿಕವಾಗಿ ದುರ್ಬಲಳಲ್ಲದ ಮಹಿಳೆಯು ಇಂತಹ ಸಮಸ್ಯೆಗಳನ್ನು ಎದೆಗುಂದದೆ ನಿಭಾಯಿಸುತ್ತಾರೆ. ಆದರೆ ಇಂಥ ಪರಿಸ್ಥಿತಿಯು ಎಲ್ಲ ಮಹಿಳೆಯರಲ್ಲಿ ಇರುವುದು ಕಂಡುಬರುವುದಿಲ್ಲ. ಎಷ್ಟೋ ಜನ ನಿರ್ಗತಿಕರು ಇರುತ್ತಾರೆ. ಇಂತಹ ನಿರ್ಗತಿಕ ಹೆಂಗಸರು ಸಾಮಾಜಿಕವಾಗಿ ಅಪಮಾನಗಳನ್ನು, ನಿಂದನೆಗಳನ್ನು ಎದುರಿಸಬೇಕಾಗುತ್ತದೆ.[೨]

ಅವಿವಾಹಿತ ತಾಯಿತನವನ್ನು ಪಡೆದ ಹೆಣ್ಣು ಮಗ/ಳು ಕೇಳುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ನೀಡಲಾಗದೆ ಬಾಯಿ ಮುಚ್ಚಿಕೊಂಡು ಬಿದ್ದಿರಬೇಕಾದ ಸಂದರ್ಭಗಳು ಕಂಡುಬರುತ್ತವೆ. ಮಗು ಬೆಳೆಯುತ್ತ ದೊಡ್ಡವಾದಂತೆಲ್ಲ ತಮ್ಮ ಗೆಳೆಯರು, ನೆರೆಹೊರೆಯವರು ಅಥವಾ ಆಟದ ಮೈದಾನದಲ್ಲಿ ತಂದೆಯನ್ನು ಕುರಿತ ಪ್ರಶ್ನೆಗಳು ಎದುರಾಗಬಹುದು. ಇತರ ಮಕ್ಕಳು ತನ್ನ ತಂದೆಯ ಬಗ್ಗೆ ಹಾಸ್ಯ ಮಾಡಿದಾಗ ಮಗುವಿನ ಮನಸ್ಸಿಗೆ ತುಂಬಾ ಅಘಾತವಾಗಿ ಪರಿಣಮಿಸುತ್ತದೆ. ಆಗ ಆ ಮಗು ಮನೆಗೆ ಬಂದು ತಾಯಿಯನ್ನು ಪ್ರಶ್ನೆಗಳನ್ನು ಕೇಳುವ ಮೂಲಕ ಸಮಸ್ಯೆಯನ್ನು ಎದುರಿಸುತ್ತಾಳೆ. ಬಹಳಷ್ಟು ಸಂದರ್ಭಗಳಲ್ಲಿ ತಾಯಿ/ಮಗುವಿನ ಸಂಬಂಧಗಳಲ್ಲಿ ತುಂಬಾ ಬಿರುಕು ಮೂಡಿ ಬರುವುದು ಕಂಡುಬರುತ್ತದೆ.

ಅವಿವಾಹಿತಳಾಗಿ ತಾಯಿತನವನ್ನು ಪಡೆದುಕೊಂಡ ಮಹಿಳೆಯ ಆರ್ಥಿಕ ಪರಿಸ್ಥಿತಿ ಅನುಕೂಲಕರವಾಗಿಲ್ಲ ದಿದ್ದಾಗಲಂತೂ ಆಕೆಯ ಬದುಕಿನ ಕಷ್ಟ ನೋವುಗಳು ಮತ್ತಷ್ಟು ಹೆಚ್ಚಾಗುತ್ತವೆ. ಒಂದು ಕಡೆ ಸಾಮಾಜಿಕ ದೋಷ, ನಿಂದನೆ, ಕಳಂಕ ಮತ್ತೊಂದು ಕಡೆ ಆರ್ಥಿಕ ಹೊರೆ ಇಂತಹ ಸಂದರ್ಭಗಳಲ್ಲಿ ಸಿಲುಕಿಕೊಂಡ ತಾಯಿಯ ಬದುಕು ನಿಕೃಷ್ಟವಾಗಿ ಕಂಡುಬರುತ್ತದೆ. ದುಡಿಯುವ ಸ್ಥಳದಲ್ಲಿಯೂ ಆಕೆ ಲೈಂಗಿಕ ಶೋಷಣೆಗೆ ಬಲಿಯಾಗಬಹುದು. ಏಕೆಂದರೆ ಇಂತಹ ಮಹಿಳೆಯರನ್ನು ಸುಲಭದಲ್ಲಿ ಬಳಕೆಮಾಡಿಕೊಳ್ಳಬಹುದು ಎಂಬ ಭಾವನೆಯನ್ನು ಪುರುಷರು ಹೊಂದಿರುತ್ತಾರೆ. ಇಂತಹ ಹೆಂಗಸರಿಗೆ ಕಾನೂನಿನ ನೆರವು ಸಹ ಸಿಗುವುದಿಲ್ಲ. ಪುರುಷ ಪ್ರಧಾನವಾದ ಮೌಲ್ಯಗಳ ಹಿಡಿತದಲ್ಲಿಯೇ ಕಾನೂನುಗಳು ಹಾಗೂ ಅವುಗಳನ್ನು ಅರ್ಥೈಸಿ ತೀರ್ಪುಗಳನ್ನು ನೀಡಬೇಕಾದ ವ್ಯಕ್ತಿಗಳು ಪುರುಷರೇ ಆಗಿರುವುದರಿಂದ ಅವಿವಾಹಿತ ತಾಯಂದಿರ ಹಕ್ಕುಗಳು ಹಾಗೂ ಗೌರವಗಳು ಸಿಗುವುದು ಅತ್ಯಂತ ಕಡಿಮೆಯಾಗಿರುತ್ತದೆ.

ವಿವಾಹದಿಂದಲೇ ಹೆಣ್ಣಿಗೆ ಮುಕ್ತಿ. ವಿವಾಹ ಬಾಹಿರ ಸಂಬಂಧಗಳು ಎಲ್ಲಿಯವರೆಗೆ ಸಮಾಜದಲ್ಲಿ ಕಡಿಮೆಯಾಗಿರುತ್ತವೆಯೋ ಅಲ್ಲಿಯವರೆಗೆ ಅವಿವಾಹಿತ ತಾಯಂದಿರ ಸಮಸ್ಯೆಗಳು ಹಾಗೆಯೇ ಉಳಿದು ಕೊಳ್ಳುತ್ತವೆ. ತಮ್ಮ ತಮ್ಮ ಬದುಕಿನ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಅವರವರಿಗೆ ಸ್ವಾತಂತ್ರ್ಯವಿದೆ. ಬೇರೆ ಯಾರಿಗೂ ಇದು ಸಂಬಂಧಿಸಿದ ವಿಷಯವಲ್ಲ ಎನ್ನುವ ಮನೋಭಾವವನ್ನು ಬೆಳೆಸಿಕೊಂಡಾಗ ಮಾತ್ರ ಇತರರ ಬದುಕಿನಲ್ಲಿ ತಲೆಹಾಕುವಂಥ ಹವ್ಯಾಸಗಳು ದೂರವಾಗುತ್ತವೆ.

ಈ ರೀತಿಯಾಗಿ ಪಿತೃಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಅವಿವಾಹಿತ ಹೆಣ್ಣು ತಾಯ್ತನವನ್ನು ಪಡೆದುಕೊಳ್ಳುವುದರಿಂದ ಸಮಾಜದ ಅನೇಕ ನಿಂದನೆಗಳಿಗೆ, ತೊಂದರೆಗಳಿಗೆ ಒಳಗಾಗಿ ಸಮಸ್ಯೆಗಳನ್ನು ಎದುರಿಸುವ ಪ್ರಸಂಗ ಒದಗಿಬರುತ್ತದೆ.

## ಅತ್ಯಾಚಾರದ ತಾಯ್ತನ

ಪುರುಷ ಪ್ರಧಾನ ಸಮಾಜದ ವ್ಯವಸ್ಥೆಯಲ್ಲಿ ಸ್ತ್ರೀಯನ್ನು ಕೀಳಾಗಿ ಕಾಣುವರು. ಸ್ತ್ರೀಯೆಂದರೆ ಭೋಗದ ವಸ್ತು ಮತ್ತು ಅವಳ ಕೆಲಸವೇನಿದ್ದರೂ ಹೆರುವುದೇ ಆಗಿರುತ್ತದೆ ಎಂದು ಕೀಳು ಭಾವನೆಯಿಂದ ಕಾಣುತ್ತಿದ್ದರು. ಹೆಣ್ಣಿಗೆ ಯಾವುದೇ ರೀತಿಯ ಸ್ವಂತ ನಿರ್ಧಾರವನ್ನು ತೆಗೆದುಕೊಳ್ಳುವ ಅಧಿಕಾರವನ್ನು ಅವಳಿಗೆ ಕೊಡುತ್ತಿರಲಿಲ್ಲ. ಪುರುಷರು ತಾವೇ ಶ್ರೇಷ್ಟರೆಂದು ಅರಿತುಕೊಂಡು ಹೆಂಗಸರನ್ನು ತಮಗೆ ಇಷ್ಟ ಬಂದಂತೆ ಬಳಕೆ ಮಾಡಿಕೊಳ್ಳಬೇಕೆಂಬ ಮನೋಭಾವವನ್ನು ಹೊಂದಿದ್ದರು.

ಪುರುಷ ಪ್ರಧಾನರು ಅತ್ಯಾಚಾರಕ್ಕೆ ಒಳಗಾದ ಹೆಣ್ಣಿನ ಬಗ್ಗೆ ಆಲೋಚನೆ ಮಾಡದೆ, ಅವಳನ್ನು ಹೀನಾಯವಾಗಿ, ನಗೆಪಾಟಲಾಗಿ ಕಾಣಲು ಪ್ರಾರಂಭಿಸುತ್ತಾರೆ. ಇದೆಲ್ಲ ಯಾಕೆ ಹೀಗಾಗುತ್ತದೆ ಎಂಬುದನ್ನು ಸೂಕ್ಷ್ಮವಾಗಿ ಅರ್ಥಮಾಡಿಕೊಂಡಾಗ ನಮಗೆ ಕಂಡುಬರುವುದು ಪಿತೃಪ್ರಧಾನ ವ್ಯವಸ್ಥೆಯೆ ಮುಖ್ಯ ಕಾರಣವಾಗಿರುತ್ತದೆ ಎಂಬ ವಿಚಾರವು ನಮ್ಮ ಗಮನಕ್ಕೆ ಬರುತ್ತದೆ.

ಅತ್ಯಾಚಾರಕ್ಕೆ ಒಳಗಾದ ಹೆಣ್ಣಿನ ಪರಿಸ್ಥಿತಿಯನ್ನು ಪುರುಷರು ಅರಿತುಕೊಳ್ಳದೇ ಅವಳನ್ನು ಕುಟುಂಬದಿಂದ, ಸಮಾಜದಿಂದ ಹೊರಗುಳಿಯುವಂತೆ ಮಾಡುತ್ತಾರೆ. ಆದರೆ ಇಲ್ಲಿ ಹೆಣ್ಣು ಯಾವ ತಪ್ಪು ಮಾಡಿಲ್ಲ. ಆದರೂ ಅವಳನ್ನು ಶಿಕ್ಷೆಗೊಳಪಡಿಸುತ್ತಾರೆ. ಕುಟುಂಬದಲ್ಲಿಯೂ ಸಹ ಅವರ ತಂದೆ ತಾಯಿಯರು ಕೂಡ ಅವಳನ್ನು ಅರ್ಥಮಾಡಿಕೊಳ್ಳದೆ, ಅವಳ ಜೀವನದಲ್ಲಿ ಯಾವುದೋ ಒಂದು ದುರ್ಘಟನೆ ನಡೆದುಹೋಗಿದೆ ಎಂದು ಅರಿತುಕೊಂಡು ಅವಳಿಗೆ ಯಾವುದೇ ಸಹಕಾರವನ್ನು ಕೊಡದೇ ತಿರಸ್ಕೃತ ಭಾವನೆಯಿಂದ ಕಾಣುತ್ತಾರೆ.

ಕುಟುಂಬದವರು ಕೂಡ ಅವಳ ವ್ಯಕ್ತಿತ್ವದ ಮೇಲೆ ಅನುಮಾನ ಆಸ್ಪದಗಳನ್ನು ತಂದುಕೊಂಡು ಕೊನೆಗೆ ಅವಳನ್ನು ಬೀದಿಪಾಲಾಗಿ ಮಾಡುವಲ್ಲಿ ಹಿಂಜರಿಯುವುದಿಲ್ಲ. ಇವೆಲ್ಲ ಯಾಕೆ ಹೀಗಾಗಿದೆಯೆಂದರೆ, ಪಿತೃ ಪ್ರಧಾನ ಸಂಸ್ಕೃತಿಯಲ್ಲಿ ಹೆಣ್ಣು ನಿಯಮಗಳಿಗೆ ಬದ್ಧಳಾಗಿ ನಡೆದುಕೊಂಡಿಲ್ಲ. ಅದಕ್ಕೆ ವಿರುದ್ಧಳಾಗಿ ನಡೆದುಕೊಂಡಿದ್ದಾಳೆ ಎನ್ನುವ ತಾತ್ಸಾರ ಭಾವನೆಯಿಂದ ಕುಟುಂಬದವರು ತಾವು ಸಾಮಾಜಿಕ ನಿಂದನೆಗಳಿಗೆ ಒಳಗಾಗದೆ ಅತ್ಯಾಚಾರಕ್ಕೆ ಒಳಗಾದ ಮಗಳನ್ನು ನಿಂದಿಸುತ್ತಾರೆ. ಸಾಮಾಜಿಕ ಸಂಸ್ಥೆಗಳಾದ ವಿವಾಹ, ಕುಟುಂಬ ಈ ಚೌಕಟ್ಟಿನಲ್ಲಿಯೆ ಸ್ತ್ರೀ ಜೀವಿಸುವ ಅವಕಾಶವನ್ನು ಪಡೆದಿರುತ್ತಾಳೆ.

ಪುರುಷರಿಗೆ ಇಂತಹ ಯಾವುದೇ ನಿಂದನೆಗಳು, ನಿರ್ಬಂಧನೆಗಳು ಇರುವುದಿಲ್ಲ. ಅವನು ವಿವಾಹವಾಗಿದ್ದರೂ ಮತ್ತೊಬ್ಬ ಹೆಂಗಸಿನಿಂದ ಲೈಂಗಿಕ ಸ್ವೇಚ್ಛಾಚಾರವನ್ನು ಹೊಂದಬಹುದಿತ್ತು. ಅವನಿಗೆ ಹೆಂಗಸಿಗಿದ್ದಂತಹ ನಿಯಮಗಳು ಇದ್ದಿಲ್ಲ. ಹೀಗಾಗಿ ಪುರುಷನು ತನ್ನದೆ ಆದಂತಹ ಅಧಿಕಾರವನ್ನು

ಚಲಾಯಿಸುವಲ್ಲಿ ಹಿಂಜರಿಯುತ್ತಿರಲಿಲ್ಲ. ಆದರೆ ಸ್ತ್ರೀಯರು ಈ ನಿರ್ಬಂಧನೆಗಳನ್ನೆಲ್ಲ ಅನುಸರಿಸಬೇಕಾಗುತ್ತದೆ. ಆದರೂ ಅತ್ಯಚಾರಕ್ಕೆ ಒಳಗಾಗಿ ತಾಯ್ತನವನ್ನು ಪಡೆದುಕೊಂಡರೆ ವಾಸ್ತವಾಂಶದಲ್ಲಿ ಅಂತಹ ಹೆಂಗಸನ್ನು ಸಾಮಾನ್ಯವಾಗಿ 'ವ್ಯಭಿಚಾರಿ' ವೇಶ್ಯೆ, ಕುಲಗೆಟ್ಟವಳು ಎಂದು ಸಂಭೋದಿಸಿ ಕುಟುಂಬದಿಂದ ಹೊರಗೆ ಹಾಕುತ್ತಾರೆ.

ಅತ್ಯಾಚಾರವು ನಡೆಯುವಲ್ಲಿ ಹೆಂಗಸಿನ ಪಾತ್ರವು ಗೌಣವಾಗಿರುತ್ತದೆ. ಇದನ್ನು ಅವಳು ತಿರಸ್ಕೃತ ಭಾವನೆಯಿಂದ ಕಂಡರೂ ಪುರುಷರು ಲೆಕ್ಕಿಸದೆ ಅವಳನ್ನು ಅತ್ಯಾಚಾರಕ್ಕೆ ಒಳಪಡಿಸಿ ತಾಯಿತನಕ್ಕೆ ಎಡೆಮಾಡಿಕೊಡುತ್ತಾರೆ. ಆಗ ಸ್ತ್ರೀಯು ತನ್ನ ಜೀವನದಲ್ಲಿ ನಡೆದ ಇದೊಂದು ದುರ್ಘಟನೆ ಎಂದು ಕೆಲವು ಹೆಂಗಸರು ಅರಿತುಕೊಂಡು ಇಂತಹ ಸಂಕಷ್ಟಗಳಿಗೆ ಒಳಗಾಗಿ ತಮ್ಮ ಮನಸ್ಸಿನಲ್ಲಿಯೆ ನೊಂದು ಜೀವಿಸುತ್ತಿರುತ್ತಾರೆ. ಇನ್ನೂ ಕೆಲವು ಹೆಂಗಸರು ಅತ್ಯಾಚಾರಕ್ಕೆ ಒಳಗಾಗಿದ್ದನ್ನು ತಡೆದುಕೊಳ್ಳದೇ ಸಮಾಜಕ್ಕೆ ಯಾವ ರೀತಿಯಾಗಿ ನಮ್ಮ ಮುಖವನ್ನು ತೋರಿಸಬೇಕು ಎನ್ನುವ ಹಟದಿಂದ ತಮ್ಮ ಜೀವನಕ್ಕೆ ದಕ್ಕೆ ಬರುವಂತ ಕೆಲಸವನ್ನು ಮಾಡಿಕೊಳ್ಳಲು ಲೆಕ್ಕಿಸುವುದಿಲ್ಲ.

ಹೀಗೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ವಿವಾಹ ಚೌಕಟ್ಟಿನಲ್ಲಿಯೆ, ಕುಟುಂಬದ ಚೌಕಟ್ಟಿನಲ್ಲಿಯೆ ತಾಯ್ತನವನ್ನು ಪಡೆಯಲು ಅರ್ಹಳಿರುತ್ತಾಳೆ. ವಿನಃ ವಿವಾಹಬಾಹಿರ, ಅತ್ಯಾಚಾರದಂತ ದುರ್ಘಟನೆಗಳಿಂದ ತಾಯ್ತನವನ್ನು ಪಡೆದುಕೊಳ್ಳುವಂತಿಲ್ಲ ಎಂದು ಪುರುಷ ಸಂಸ್ಕೃತಿಯು ಸೂಚಿಸುತ್ತದೆ ಎನ್ನುವ ವಾಸ್ತವಾಂಶವನ್ನು ಮನಗಾಣಬಹುದು.

## ಗಂಡು ಮಕ್ಕಳು ಬೇಕು ಎನ್ನುವ ತಾಯ್ತನ

ಪ್ರಸ್ತುತ ಸಮಾಜದಲ್ಲಿ ಗಂಡು ಮಗುವಿಗೆ ಮುಖ್ಯವಾದ ಸ್ಥಾನಮಾನವಿದೆ ಎಂಬುದು ನಮ್ಮ ಪಿತೃಪ್ರಧಾನ ಸಮಾಜದಲ್ಲಿ ಕಂಡುಬರುತ್ತದೆ. ಸ್ತ್ರೀ-ಪುರುಷರು ಬಯಸುವುದು ಕೂಡ ಗಂಡು ಮಗುವನ್ನೆ ವಿನಃ ಹೆಣ್ಣು ಮಗುವನ್ನಲ್ಲ. ಪಿತೃಪ್ರಧಾನ ಸಂಸ್ಕೃತಿಯಲ್ಲಿ 'ಹೆಣ್ಣು ಹುಟ್ಟಿದರೆ ಹೆಗ್ಗಣ ಹುಟ್ಟಿದ್ಹಾಂಗ' ಎನ್ನುವ ಜನಪದ ಕಥೆಗಳಲ್ಲಿ ಕಂಡು ಬಂದಂತೆ, ಸಾಮಾಜಿಕವಾಗಿ ಹೆಣ್ಣನ್ನು ಶೋಷಿಸುವ ಜನರ ಸಂಖ್ಯೆಯು ಹೆಚ್ಚಾಗಿ ಕಂಡುಬರುತ್ತದೆ.

ಹೆಣ್ಣು ಹುಟ್ಟಿದರೆ ಅವಳು ಕೊಟ್ಟ ಮನೆಗೆ ಹೋಗುವವಳು ಎಂದು ಕೀಳುಭಾವನೆಯಿಂದ ಕುಟುಂಬದ ಸದಸ್ಯರೇ ನೋಡಲು ಪ್ರಾರಂಭಿಸುತ್ತಾರೆ. ಆದುದರಿಂದ ಹೆಣ್ಣನ್ನು ಪ್ರತಿಯೊಂದು ಕ್ಷೇತ್ರದಲ್ಲಿಯೂ ತಾರತಮ್ಯ ಮಾಡುವುದು ವಾಸ್ತವವಾಗಿ ಕಂಡುಬರುತ್ತದೆ. ಉದಾ : ಶಿಕ್ಷಣದಲ್ಲಿ ತಾರತಮ್ಯ, ಕುಟುಂಬದ ಬೆಳವಣಿಗೆಯಲ್ಲಿ ತಾರತಮ್ಯ, ಶಿಕ್ಷಣವನ್ನು ಕೊಡಿಸುವಲ್ಲಿಯೂ ಹೆಣ್ಣು, ಗಂಡು ಎನ್ನುವ ತಾರತಮ್ಯದಿಂದ

ಶಿಕ್ಷಣ ಕೊಡಿಸುವುದು ಕಂಡುಬರುತ್ತದೆ. ಹೆಣ್ಣು ಮಗುವಿಗೆ ಕೆಳದರ್ಜೆಯ ಶಿಕ್ಷಣ, ಕಳಪೆ ಶಿಕ್ಷಣವನ್ನು ನೀಡಿ, ಗಂಡುಮಗುವಿಗೆ ಮೇಲ್ದರ್ಜೆಯ ಶಿಕ್ಷಣ ಇಂಜಿನೀಯರಿಂಗ್, ವೈದ್ಯಕೀಯ ಕ್ಷೇತ್ರದಲ್ಲಿ ಶಿಕ್ಷಣವನ್ನು ಕಲಿಯುವಂತ ಅನುಕೂಲಗಳನ್ನು ಕುಟುಂಬದಲ್ಲಿ ತಂದೆ ತಾಯಿಯರು ಮಾಡಿಕೊಡುತ್ತಾರೆ. ಆದರೆ ಅದೇ ಶಿಕ್ಷಣವನ್ನು ಹೆಣ್ಣು ಮಗುವಿಗೆ ಕೊಡಿಸುವುದಿಲ್ಲ. ಇವಳು ಎಷ್ಟು ಕಲಿತರೂ ಅಷ್ಟೆ, ಅಡಿಗೆ ಮನೆಯ ಕೆಲಸಗಳನ್ನು ಮಾಡುವವಳು ಆದುದರಿಂದ ಇವಳಿಗೆ ಹೆಚ್ಚಿನ ಶಿಕ್ಷಣದ ಅವಶ್ಯಕತೆ ಇದೆ ಎನ್ನುವ ಅಭಿಪ್ರಾಯವು ಕಂಡುಬರುವುದಿಲ್ಲ.

ಪಿತೃ ಪ್ರಧಾನವಾದ ಸಂಸ್ಕೃತಿಯಾದುದರಿಂದ, ಸಂಸ್ಕೃತಿಯಲ್ಲಿ ಎಲ್ಲರೂ ಗಂಡು ಮಗುವನ್ನೆ ಬಯಸುತ್ತಾರೆ. ಗಂಡು ಮಗುವಿದ್ದರೆ ತಮಗೆ ಕೆಲವು ಕಷ್ಟಗಳೇ ಪರಿಹಾರವಾಗುತ್ತವೆ ಮತ್ತು ವಂಶದ ಅಭಿವೃದ್ಧಿಯು ಬಳ್ಳಿಯಂತೆ ಸಾಗುತ್ತದೆ ಎಂದು ಗಂಡುಮಗುವನ್ನು ಆಶಿಸುತ್ತಿದ್ದರು. ಗಂಡುಮಗುವು ತಂದೆ ತಾಯಿಯ ಮುಪ್ಪಿನ ವಯಸ್ಸಿನಲ್ಲಿ ಅವರ ಯೋಗಕ್ಷೇಮವನ್ನು, ಅವರ ಜೀವಿತಾ ಅವಧಿಯುದ್ದಕ್ಕೂ ಪಾಲನೆ, ಪೋಷಣೆ ಮಾಡುವಲ್ಲಿ, ಆಶ್ರಯದಾತನಾಗುವವನು ಗಂಡು ಮಗು, ಆದುದರಿಂದ ಹೆಣ್ಣು ಮಗುವಿಗಿಂತ ಗಂಡು ಮಗುವಿನ ಅವಶ್ಯಕತೆಯು ವಾಸ್ತವಾಂಶದಲ್ಲಿ ತುಂಬಾ ಅವಶ್ಯಕತೆ ಇದೆ ಎಂಬುದು ಕಂಡುಬರುತ್ತದೆ.

ಹೆಣ್ಣು ಮಗುವಿನ ಅವಶ್ಯಕತೆಗಿಂತ ಗಂಡು ಮಗುವಿಗೆ ನಮ್ಮ ಸಂಸ್ಕೃತಿಯಲ್ಲಿ ತುಂಬಾ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ ಎಂಬ ವಾಸ್ತವಾಂಶವು ಸತ್ಯವಾಗಿ ಕಂಡುಬರುತ್ತದೆ. ಹೆಣ್ಣಿಗೆ ಗಂಡು ಮಗುವಿನ ಸಂತಾನವಿಲ್ಲದಂತಹ ಸಂದರ್ಭಗಳಲ್ಲಿ ಪುರುಷರು ಬಹುಪತ್ನಿತ್ವ ಮಾಡಿಕೊಳ್ಳುವುದು ಅವರಿಗೆ ಸುಲಭವಾಗಿತ್ತು. ಎರಡನೆಯ ಹೆಂಡತಿಗಾದರೂ ಗಂಡುಮಕ್ಕಳಾಗುತ್ತವೆಂಬ ನಂಬಿಕೆಯಿಂದ ವಿವಾಹವನ್ನು ಮಾಡಿಕೊಂಡ ಎಷ್ಟೋ ಪ್ರಸಂಗಗಳು ಕಂಡುಬರುತ್ತವೆ.

ಸುಮಾರು ಕುಟುಂಬಗಳಲ್ಲಿ ಹೆಣ್ಣು ಮಕ್ಕಳು ನಮಗೆ ಗಂಡು ಮಗು ಬೇಕು ಎಂದು ಬಹಳಷ್ಟು ದೇವರುಗಳಿಗೆ ಹರಕೆ ಹೊತ್ತ ಪ್ರಸಂಗಗಳು ಕಾವ್ಯಗಳಲ್ಲಿ, ಶಾಸನಗಳಲ್ಲಿ ಕಂಡುಬರುತ್ತವೆ. ಪ್ರಾಚೀನ ಕರ್ನಾಟಕದಲ್ಲಿ ಹೆಣ್ಣು ವೀರಪತಿಯನ್ನು ಕೈಹಿಡಿದು 'ವೀರಪತ್ನಿ' ಎನಿಸಿಕೊಳ್ಳಲು ಹಂಬಲಿಸಿದಂತೆ ವೀರಪುತ್ರನನ್ನು ಹಡೆದು ವೀರಮಾತೆ ಎನಿಸಿಕೊಳ್ಳಲು ಇಷ್ಟ ಪಡುತ್ತಿದ್ದಳು. ಹಾಗೆಯೇ ಕಲಚೂರ್ಯ ದಂಡನಾಯಕ 'ಸವರದೇವ'ನಿಗೆ "ಪುಲಿಕರ ನಗರದ ಸೋಮೇಶ್ವರ ದೇವರ ವರಪ್ರಸಾದದಿಂದ" ಸೋಮೇಶ್ವರನೆಂಬ ಮಗ ಹುಟ್ಟಿದನೆಂದು 'ಶಿಕಾರಿ ಪುರ' ಶಾಸನವು ತಿಳಿಸುತ್ತದೆ. ನನ್ನಿಯಗಂಗ ದೇವನ ರಾಣಿ ಕಂಚಲ ಮಹಾದೇವಿಯು ಪದ್ಮಾವತಿ ದೇವಿಗೆ ಹರಕೆ ಹೊತ್ತು ಹೆಮ್ಮಾಡಿ ದೇವನನ್ನು ಪಡೆದಂತೆ ಉಲ್ಲೇಖಗಳಿವೆ.[೩]

ಈ ರೀತಿಯಾಗಿ ಪುತ್ರ ಸಂತತಿಗಾಗಿ, ಗಂಡುಮಗುವಿನ ತಾಯ್ತನಕ್ಕಾಗಿ ಹರಕೆ ಹೊತ್ತು ಪ್ರಸಂಗಗಳು ಆ ಕಾಲದ ಜನತೆಯ ಭಾವನೆಯಲ್ಲಿ ಸ್ಪಷ್ಟವಾಗಿ ಕಂಡುಬರುತ್ತಿತ್ತು. ಒಟ್ಟಾರೆಯಾಗಿ ಗಂಡು ಮಗು ಬೇಕು ಎನ್ನುವ ತಾಯ್ತನವನ್ನು ಶಾಸನಗಳಲ್ಲಿ ಕಾವ್ಯಗಳಲ್ಲಿ ಕಂಡು ಬಂದಂತೆ, ವಾಸ್ತವಿಕವಾಗಿ ಸಮಾಜದಲ್ಲಿ ಗಂಡು ಮಗುವಿನ ಅವಶ್ಯಕತೆಯು ಎಷ್ಟು ಮಹತ್ವವನ್ನು ಪಡೆದುಕೊಂಡಿದೆ ಎಂಬುದು ಕಂಡುಬರುತ್ತದೆ.

ವಿವಾಹವಾದ ದಂಪತಿಗಳಿಗೆ ಮಕ್ಕಳಾಗದಾಗ ಎಲ್ಲರೂ ದ್ವೇಷ ಭಾವನೆಯಿಂದ ಕಾಣುವುದು ಹೆಂಡತಿಯನ್ನು, ಪುರುಷನನ್ನಲ್ಲ. ಹೆಂಗಸರಲ್ಲಿ ಯಾವುದೋ ಲೋಪದೋಷವಾಗಿದೆ ಎಂದು ಹೆಂಗಸನ್ನು ಹೀನಾಯವಾಗಿ ಕಾಣುತ್ತಾರೆ. ಪ್ರಸ್ತುತ ಸಮಾಜದಲ್ಲಿ ಹೆಣ್ಣು ತಾಯ್ತನವನ್ನು ಪಡೆದುಕೊಳ್ಳುವುದು ತಡವಾಗಿ ಕಂಡುಬಂದರೆ, ಸಮಾಜವು ಅಂತಹ ಹೆಣ್ಣಿಗೆ 'ಬಂಜೆ'ಯ ಪಟ್ಟವನ್ನು ಸುಲಭವಾಗಿ ಕಟ್ಟಿ ಸಮಾಜದಲ್ಲಿ ನಿಕೃಷ್ಟವಾಗಿ ಕಾಣುವಂತೆ ಪ್ರಾರಂಭಿಸುತ್ತಾರೆ.[೪] ಸಮಾಜದಲ್ಲಿ ನಿಕೃಷ್ಟವಾಗಿ ಕಂಡಂತೆ, ಕುಟುಂಬದಲ್ಲಿಯೂ ಅವಳನ್ನು ಕೀಳು ಭಾವನೆಯಿಂದ ಕಾಣುತ್ತಿರುವುದು ಎಷ್ಟೋ ಕುಟುಂಬಗಳಲ್ಲಿ ಕಂಡುಬರುತ್ತದೆ.

ಪಿತೃಪ್ರಧಾನವಾದ ಸಂಸ್ಕೃತಿಯಲ್ಲಿ ಹೆಣ್ಣಿಗೆ ಬಂಜೆ ಪಟ್ಟವನ್ನು ಕಟ್ಟುತ್ತಾರೆ. ಆದರೆ ಗಂಡಿಗೆ ಇಂತಹ ಪಟ್ಟವನ್ನು ಕಟ್ಟುವುದಿಲ್ಲ. ಪ್ರಧಾನ ಸಂಸ್ಕೃತಿಯು ಪಿತೃವಂಶೀಯತೆಯಿಂದ ಕೂಡಿದುದರಿಂದ ಪುರುಷನನ್ನು 'ಬಂಜೆ'ಯೆಂಬ ಶಬ್ದದಿಂದ ಯಾರು ಕರೆಯುತ್ತಿರಲಿಲ್ಲ. ಹೆಣ್ಣಿನಲ್ಲಿ ಲೋಪದೋಷವಿದೆ ಎಂದು ಗುರುತಿಸಿದ ಪಿತೃಪ್ರಧಾನ ಸಂಸ್ಕೃತಿಯು ಗಂಡಿನಲ್ಲಿ ದೋಷವಿದೆ ಎಂದು ಯಾರು ಗುರುತಿಸುತ್ತಿರಲಿಲ್ಲ. ಪುರುಷನಲ್ಲಿ ಲೋಪದೋಷಗಳು ಕಂಡುಬಂದರೂ, ಅವನನ್ನು ಪರೀಕ್ಷಿಸಲು ಇಷ್ಟ ಪಡುವುದಿಲ್ಲ. ಅವನು ದೃಢಕಾಯವಾದ ದೇಹವನ್ನು ಹೊಂದಿದವನಾಗಿದ್ದಾನೆ ಆದುದರಿಂದ ಇವನಲ್ಲಿ ಯಾವುದೇ ರೀತಿಯ ಷಂಡತನದ ಲಕ್ಷಣಗಳು ಇಲ್ಲವೆನ್ನುವ ಮನೋಭಾವನೆಯನ್ನು ಪುರುಷ ಸಂಸ್ಕೃತಿಯು ಹೊಂದಿರುತ್ತದೆ.

ಕೆಲವೊಂದು ಪ್ರಸಂಗಗಳಲ್ಲಿ ಸ್ತ್ರೀ-ಪುರುಷರ ಲೈಂಗಿಕ ಸಂಯೋಗದಲ್ಲಿಯೂ ವ್ಯತ್ಯಾಸಗಳು ಕಂಡುಬಂದರೂ ಸಹ ಮಕ್ಕಳಾಗದಿರುವುದಕ್ಕೆ ಕಾರಣವಾಗುತ್ತದೆ. ಇಂತಹ ದಾಂಪತ್ಯದ ಒಳ ಸಮಸ್ಯೆಗಳನ್ನು ಸಮಾಜವು ಅರ್ಥಮಾಡಿಕೊಳ್ಳುವುದಿಲ್ಲ. ಹೆಣ್ಣಿಗೆ ವಿವಾಹವಾದ ತಕ್ಷಣ ಒಂದೆರಡು ವರ್ಷಗಳಲ್ಲಿ ಫಲವಂತಿಕೆಯು ಕಂಡುಬಂದರೆ, ಅಂತಹ ಮಹಿಳೆಯನ್ನು ಫಲವಂತಿಕೆಯುಳ್ಳ ಮಹಿಳೆ ಎಂದು ಗುರುತಿಸುತ್ತಾರೆ. ವಿವಾಹವಾದ ಕೆಲವು ವರ್ಷಗಳು ಮಕ್ಕಳಾಗದೆ ಮುಂದುವರೆದರೆ, ಸಮಾಜವು ಅವಳಿಗೆ ಇಲ್ಲಸಲ್ಲದ ಮಾತುಗಳನ್ನು ಆಡಿ ನಿಂದಿಸುತ್ತದೆ. ತಾಯಿಯಾಗದ ಹೆಣ್ಣನ್ನು ಸಮಾಜವು ವಕ್ರದೃಷ್ಟಿಯಿಂದ ಕಾಣುತ್ತದೆ. ಇವಳು

ಹಿಂದಿನ ಜನ್ಮದಲ್ಲಿ ಯಾವುದೋ ಪಾಪವನ್ನು ಮಾಡಿಬಂದಿದ್ದಾಳೆ. ಆದ್ದರಿಂದ ಇವಳಿಗೆ ಮಕ್ಕಳಾಗಲಿಲ್ಲ ಎನ್ನುವ ಧೋರಣೆಯನ್ನು ಮಾಡುತ್ತಾರೆ. ಸಮಾಜವು ಇಂತಹ ಹೆಂಗಸರನ್ನು ಯಾವುದೇ ಸಮಾರಂಭಗಳಲ್ಲಿಯೂ ಭಾಗವಹಿಸದಂತೆ ತಡೆಯುತ್ತಾರೆ. ಆದರೆ ಪುರುಷರನ್ನು ಈ ರೀತಿಯಾಗಿ ತಡೆಗಟ್ಟುವುದಿಲ್ಲ ಪುರುಷರಲ್ಲಿ ಬಂಜೆತನದ ಲಕ್ಷಣಗಳಿಲ್ಲ ಎನ್ನುವ ಭಾವನೆಯು ಹಲವಾರು ಜನರಲ್ಲಿ ಮರೆಮಾಚಿಕೊಂಡಿರುತ್ತದೆ.

ಆದರೆ ಅದೇ ವಿವಾಹಿತ ಮಹಿಳೆಗೆ ಬಹಳಷ್ಟು ವರ್ಷಗಳಿಂದ ತಡವಾಗಿ ತಾಯ್ತನವನ್ನು ಪಡೆದುಕೊಂಡರೆ, ಕುಟುಂಬದಲ್ಲಿ ಗಂಡ, ಅತ್ತೆ, ಮಾವ ಮನೆಯಲ್ಲಿಯ ಸದಸ್ಯರೆಲ್ಲರೂ ಅವಳನ್ನು ಅದ್ದೂರಿಯಾಗಿ ಸ್ವಾಗತಿಸುತ್ತಾರೆ. ತಾಯ್ತನದ ಶಬ್ದವೇ ಇಲ್ಲದಂತ ಹೆಣ್ಣಿನಲ್ಲಿ ತಾಯ್ತನವು ಲಭಿಸಿದೆ ಎಂದು ತಿಳಿದಾಗ ಅವರು ಹಲವಾರು ದೇವರುಗಳಿಗೆ ಹರಕೆಗಳನ್ನು ಹೊತ್ತು ದೇವರಿಗೆ ವಿಶೇಷವಾದ ಪೂಜೆ ಪುನಸ್ಕಾರಗಳಿಂದ ನೈವೇಧ್ಯೆಯನ್ನು ಸಲ್ಲಿಸುವುದು ವಾಸ್ತವಾಂಶದಲ್ಲಿ ಕಂಡುಬರುತ್ತದೆ. ಬಂಜೆಯಾಗಿದ್ದ ಹೆಣ್ಣಿನ ಸಂತೋಷ ಸಂಭ್ರಮ ತಾಯ್ತನವನ್ನು ಪಡೆದ ಹೆಣ್ಣಿನಲ್ಲಿ ತುಂಬಿತುಳುಕುತ್ತಿರುತ್ತದೆ. ಇದೆಲ್ಲವನ್ನು ವಾಸ್ತವಾಂಶದಲ್ಲಿ ನಾವು ಗಮನಿಸಬಹುದು.

ಕುಟುಂಬದಲ್ಲಿ(ಮೊದಲು) ತಾಯ್ತನವನ್ನು ಪಡೆಯದ ಸಂದರ್ಭದಲ್ಲಿ ಮತ್ತು ಪಡೆದ ಸಂದರ್ಭಗಳಲ್ಲಿ ಮೊದಲು ಉಪಚರಿಸಿದಂತೆ, ನಂತರ ಉಪಚರಿಸುವುದು ಕಂಡುಬರುತ್ತಿರಲಿಲ್ಲ. ಏಕೆಂದರೆ ಅವಳು ಮೊದಲಿನಂತೆ ಬಂಜೆಯಲ್ಲ ಅವಳು ಈಗ ತಾಯ್ತನವನ್ನು ಪಡೆದುಕೊಂಡು ತಾಯಿಯ ಪಟ್ಟವನ್ನು ಕಟ್ಟಿಕೊಂಡಿದ್ದಾಳೆ. ಅವಳು ಸಮಾಜದಲ್ಲಿ ನಡೆಯುವಂತ ಎಲ್ಲ ಕಾರ್ಯಕ್ರಮಗಳಲ್ಲಿ ಸುಲಭವಾಗಿ ಭಾಗವಹಿಸುವ ಅವಕಾಶವು ಹೆಣ್ಣಿಗೆ ಲಭಿಸಿದೆ.

ಹೀಗೆ ಪಿತೃಪ್ರಧಾನ ಸಮಾಜವು ಹೆಣ್ಣನ್ನು ಬಂಜೆಯೆಂದು ನಂತರ ಬಂಜೆಯು ತಾಯ್ತನವನ್ನು ಪಡೆದುಕೊಂಡು ಬಂಜೆಯ ಪಟ್ಟದಿಂದ ಕೆಳಗಿಳಿಸಿ ತಾಯಿತನದ ಪಟ್ಟವನ್ನು ಕಟ್ಟಿ ಅವಳನ್ನು ಸಮಾಜದ ವಾಸ್ತವಾಂಶದಲ್ಲಿ ಆದರ್ಶ ಮಹಿಳೆಯೆಂದು ಗುರುತಿಸುತ್ತದೆ.

ಪಿತೃ ಪ್ರಧಾನ ಸಮಾಜದಲ್ಲಿ ಹೆಣ್ಣು ಅವಿವಾಹಿತಳಾಗಿ ತಾಯ್ತನವನ್ನು ಪಡೆದುಕೊಂಡಾಗ ಅದರಿಂದ ಅವಳಿಗೆ ಆಗುವಂತ ತೊಂದರೆಗಳನ್ನು ಹಲವಾರು ಸಮಸ್ಯೆಗಳನ್ನು ಅನುಭವಿಸಬೇಕಾಗುತ್ತದೆ. ಹೆಣ್ಣು ತಾಯ್ತನವನ್ನು ಪಡೆದುಕೊಳ್ಳುವಾಗ ವಿಜ್ಞಾನವು ಮಹಿಳೆಗೆ ಸಹಕಾರಿಯಾದರೂ ಮಹಿಳೆಯ ಆರೋಗ್ಯದ ಮೇಲೆ ತುಂಬಾ ದುಷ್ಪಾರಿಣಾಮ ಬೀರುತ್ತದೆ. ಪ್ರಭುತ್ವವು ಸಹ ಮಹಿಳೆಯ ಮೇಲೆ ಶೋಷಣೆ ಮಾಡುತ್ತಿರುವುದು ವಾಸ್ತವಾಂಶದಲ್ಲಿ ಕಂಡುಬರುತ್ತದೆ. ಉದಾ : ಕುಟುಂಬ ಯೋಜನೆಯನ್ನು ಮಾಡುವಲ್ಲಿ

ಸಂತಾನಹರಣ ಚಿಕಿತ್ಸೆ ಪುರುಷನಿಗೆ ಸುಲಭವಾದರೂ ಸಹ ಹೆಂಗಸಿಗೆ ಮಾಡಿಸುತ್ತಾರೆ. ಹೆಂಗಸಿನ ಆರೋಗ್ಯಕ್ಕೆ ತೊಂದರೆಯಾಗುತ್ತದೆ ಎಂದು ತಿಳಿದಾಗಲು ಸಹ ಅವಳ ಮೇಲೆ ಒತ್ತಾಯವನ್ನು ಹೇರಿ ಸಂತಾನಹರಣ ಚಿಕಿತ್ಸೆಯನ್ನು ಮಾಡಿಸುತ್ತಾರೆ. ಇದೇ ಚಿಕಿತ್ಸೆಯು ಪುರುಷನಿಗೆ ಮಾಡಿಸಿದರೆ ಅವನು ದೈಹಿಕವಾಗಿ ಬಲಹೀನನಾಗುತ್ತಾನೆ. ಕುಟುಂಬದ ವ್ಯವಹಾರವೆಲ್ಲ ಪುರುಷನ ಮೇಲೆಯೆ ನಿಂತಿರುತ್ತದೆ. ಆದ್ದರಿಂದ ಪುರುಷನು ಭಾರವಾದ ಕೆಲಸಗಳನ್ನು ಮಾಡುವಾಗ ತುಂಬಾ ತೊಂದರೆಯನ್ನು ಅನುಭವಿಸುವಂತವನಾಗುತ್ತಾನೆ. ಅದೇ ಚಿಕಿತ್ಸೆಯನ್ನು ಮಹಿಳೆಗೆ ಮಾಡಿಸಿದರೆ, ಅವಳನ್ನು ಮನೆಯಲ್ಲೆ ಇರಿಸಿ ಅವಳ ಯೋಗಕ್ಷೇಮವನ್ನು ಪುರುಷನು ನೋಡಿಕೊಳ್ಳಬಹುದು ಎಂದು ಹೆಂಗಸರಿಗೆ ಸಂತಾನಹರಣ ಚಿಕಿತ್ಸೆಯನ್ನು ಮಾಡಿಸುತ್ತಾರೆ.

ಪಿತೃಪ್ರಧಾನ ವ್ಯವಸ್ಥೆಯಾಗಿರುವುದರಿಂದ ಪುರುಷನು ತನಗೆ ಮನಸ್ಸಿಗೆ ಬಂದಂತೆ ತನ್ನ ಅಧಿಕಾರವನ್ನು ಚಲಾಯಿಸಲು ಮುಂದಾಗುತ್ತಾನೆ. ಸಂತಾನಹರಣ ಚಿಕಿತ್ಸೆಯಿಂದ ಮಹಿಳೆಯ ಆರೋಗ್ಯದ ಮೇಲೆ ಎಂತಹ ಪರಿಣಾಮಗಳು ಬೀರುತ್ತವೆ ಎಂದು ತಿಳಿದರೂ ಇವನು ಅವೆಲ್ಲವುಗಳನ್ನು ಗಮನಿಸದೇ, ಲೆಕ್ಕಿಸದೇ ಸಂತಾನಚಿಕಿತ್ಸೆಯನ್ನು ಮಾಡಿಸಿ ಅವಳಿಗೆ ಆಗುವಂತ ಅನಾಹುತ, ತೊಂದರೆಗಳನ್ನು ಸಂತಾನಹರಣ ಚಿಕಿತ್ಸೆಯಿಂದ ಕುಟುಂಬ ಯೋಜನೆಯಿಂದ ಸ್ತ್ರೀಯರ ಮೇಲೆ ಪ್ರಭುತ್ವವು ಯಾವ ತೆರನಾಗಿ ಅಧಿಕಾರವನ್ನು ಚಲಾಯಿಸುತ್ತದೆ. ಇದರಿಂದ ಮಹಿಳೆಯರ ಮೇಲೆ ಆಗುವ ತೊಂದರೆಗಳು ಏನು ಇದಕ್ಕೆ ಪರಿಹಾರೋಪಾಯಗಳು ಏನು? ಎಂಬುದನ್ನು ಮುಂದಿನ ಅಧ್ಯಾಯವಾದ 'ತಾಯ್ತನ ಮತ್ತು ಕುಟುಂಬಯೋಜನೆ' ಎಂಬ ಅಧ್ಯಯದಲ್ಲಿ ಕೂಲಂಕುಷವಾಗಿ ಚರ್ಚಿಸಲಾಗಿದೆ.

**ಅಡಿಟಿಪ್ಪಣಿಗಳು**

೧. ಡಾ.ಆರ್.ಇಂದಿರಾ, **ಮಹಿಳೆ : ಸಮಾಜ ಮತ್ತು ಸಂಸ್ಕೃತಿ,** ಪು.೫೭

೨. ಅದೇ, ಪು-೫೮, ೫೯, ೬೦

೩. ಡಾ.ಚನ್ನಕ್ಕ ಎಲಿಗಾರ, **ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦, ಪು.೩೩

೪. ಡಾ.ಅನುಪಮಾ ನಿರಂಜನ, **ಕೇಳು ಕಿಶೋರಿ,** ಪು.೪೦

೫. ಅದೇ, ಪು.೪೧

ಅಧ್ಯಾಯ ೪

# ತಾಯ್ತನ ಮತ್ತು ಕುಟುಂಬ ಯೋಜನೆ

ಜನಸಂಖ್ಯೆ ಸಮಸ್ಯೆಯು ಇಂದು ವಿಶ್ವದ ಎಲ್ಲ ರಾಷ್ಟ್ರಗಳಲ್ಲಿಯೂ ಹೆಚ್ಚಾಗಿ ಕಂಡುಬರುತ್ತಿದೆ. ಕೇವಲ ರಾಷ್ಟ್ರದ ಸಂಪತ್ತನ್ನು ನಿರ್ವಹಿಸಿಕೊಂಡು ಹೋಗುವಷ್ಟು ಜನಸಂಖ್ಯೆಯ ಪ್ರಮಾಣವಿದ್ದರೆ ಸಾಲದು, ರಾಷ್ಟ್ರದ ಸರ್ವತೋಮುಖ ಕಲ್ಯಾಣವನ್ನು ಸ್ವಸಾಮರ್ಥ್ಯದ ಮೇಲೆ ಸಾಧಿಸಿಕೊಳ್ಳಬೇಕು. ರಾಷ್ಟ್ರದ ಜನರು ಬುದ್ಧಿವಂತರಾಗಿ, ಶ್ರಮಜೀವಿಗಳಾಗಿ, ನೈತಿಕ ಮತ್ತು ರಾಜಕೀಯ ಪ್ರಜ್ಞೆಯನ್ನು ಹೊಂದಿದಾಗ ಮಾತ್ರ ಜನಸಂಖ್ಯೆಯ ಹೆಚ್ಚಳ ಇಳಿಕೆಯ ಸಮಸ್ಯೆಯ ಬಗ್ಗೆ ತಿಳುವಳಿಕೆ ಮೂಡಿ ಜನಸಂಖ್ಯೆಯನ್ನು ಕಡಿಮೆ ಮಾಡುವಲ್ಲಿ ಯಶಸ್ವಿಯನ್ನು ಕಾಣಬಹುದು.

ಜನಸಂಖ್ಯೆ ಸಮಸ್ಯೆಯ ಬಗ್ಗೆ ಚಿಂತನೆ ಮಾಡಿದಾಗ ಒಂದು ರಾಷ್ಟ್ರದ ಜನಸಂಖ್ಯೆಯನ್ನು ಅಲ್ಲಿಯ ಪ್ರಾಕೃತಿಕ ಸಂಪನ್ಮೂಗಳ ದೃಷ್ಟಿಯಿಂದ ಗಮನಿಸಿ ರಾಷ್ಟ್ರದಲ್ಲಿರುವ ನೈಸರ್ಗಿಕ ಸಂಪನ್ಮೂಲಗಳ ಕೊರತೆಯಿಂದ ಜನರ ಜೀವನಮಟ್ಟವನ್ನು ಸುಧಾರಿಸಲು ಸಾಧ್ಯವಿಲ್ಲದಿರುವುದು ಮತ್ತು ಸಂಪನ್ಮೂಲಗಳ ಪ್ರಮಾಣ ಹೆಚ್ಚಿದ್ದು, ಅಲ್ಲಿಯ ಜನಸಂಖ್ಯೆ ಬಹಳ ಕಡಿಮೆ ಪ್ರಮಾಣದಲ್ಲಿರುವುದು. ಹೀಗೆ ಜನಸಂಖ್ಯೆಯ ಸಮಸ್ಯೆಯನ್ನು ಜನಸಂಖ್ಯೆಯ ಪ್ರಮಾಣದ ದೃಷ್ಟಿಯಲ್ಲಿ ನೋಡಬಹುದು. ಇದು ಜನಸಂಖ್ಯೆಯ ಒಂದು ದೃಷ್ಟಿಯಾಗಿದೆ. ರಾಷ್ಟ್ರದ ಸಂಪನ್ಮೂಲಗಳ ಬಳಕೆಯು ಸಮರ್ಪಕವಾಗಿದ್ದರೆ, ಹೆಚ್ಚಿನ ಜನಸಂಖ್ಯೆಯನ್ನು ಹೊಂದುವುದು ಅವಶ್ಯಕವಾಗಿರುತ್ತದೆ. ಸಂಪನ್ಮೂಲಗಳ ಬಳಕೆಯ ಜನರು ಬುದ್ಧಿವಂತಿಕೆ, ಪರಿಶ್ರಮ ಮತ್ತು ದೇಹದಾರ್ಢ್ಯತೆ ಉಳ್ಳವರಾಗಿದ್ದರೆ ಅಧಿಕ ಜನಸಂಖ್ಯೆಯ ಸಮಸ್ಯೆಯು ಹುಟ್ಟಿಕೊಳ್ಳಲು ಸಾಧ್ಯವಾಗುವುದಿಲ್ಲ. ಏಕೆಂದರೆ, ಅವರಲ್ಲಿ ಇರುವ ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯಿಂದ ಕಡಿಮೆ ಸಂಖ್ಯೆಯಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಸುಖಕರವಾದ ಜೀವನವನ್ನು ಒದಗಿಸುವಲ್ಲಿ ಸಹಾಯಕರಾಗುವರು.[೧]

ಒಂದು ವೇಳೆ ಸಂಪನ್ಮೂಲಗಳ ಸಾಮಾರ್ಥ್ಯ ಹೆಚ್ಚು ಇದ್ದು ಅಲ್ಲಿಯ ಜನಸಂಖ್ಯೆ ಕಡಿಮೆ ಇದ್ದು, ಅವರು ಸೋಮಾರಿ, ಅನಾರೋಗ್ಯ ಮತ್ತು ನಿರಂತರ ಪರಿಶ್ರಮ ಪಡದೇ ಆಲಸೀ ಮನೋಭಾವದವರಾಗಿದ್ದರೆ, ಇಂತಹವರಲ್ಲಿ ಜನಸಂಖ್ಯೆಯ ಹೆಚ್ಚಳ ಸುಲಭವಾಗಿ ಕಂಡುಬರುತ್ತದೆ. ಜನಸಂಖ್ಯೆಯ ಹೆಚ್ಚಳಕ್ಕೆ ಸಂಪನ್ಮೂಲಗಳ ಬಳಕೆಯೊಂದೇ ಕಾರಣವಾಗುವುದಿಲ್ಲ. ಇದಕ್ಕೆ ಇನ್ನೂ ಹಲವಾರು ಕಾರಣಗಳು ಒಳಗೊಂಡಿವೆ.

ಹೆಚ್ಚುತ್ತಿರುವ ಜನನ ಪ್ರಮಾಣ ಮತ್ತು ಕಡಿಮೆಯಾಗುತ್ತಿರುವ ಮರಣಪ್ರಮಾಣ ಯಾವುದೇ ದೇಶದ ಜನಸಂಖ್ಯೆಯ ಹೆಚ್ಚಳ ಅಥವಾ ಇಳಿತದ ಪ್ರಮಾಣ ಅಲ್ಲಿನ ಜನನ ಪ್ರಮಾಣ ಮತ್ತು ಮರಣ

ಪ್ರಮಾಣವನ್ನು ಅವಲಂಬಿಸಿರುತ್ತದೆ. ಜನನ ಪ್ರಮಾಣವು ಮರಣ ಪ್ರಮಾಣಕ್ಕಿಂತ ಜನಸಂಖ್ಯೆಯು ಹೆಚ್ಚುತ್ತದೆ. ಮರಣ ಪ್ರಮಾಣವು ಹೆಚ್ಚಾದರೆ ಜನಸಂಖ್ಯೆಯು ಕಡಿಮೆಯಾಗುತ್ತದೆ. ಭಾರತ ದೇಶದಲ್ಲಿ ಜನನ ಪ್ರಮಾಣವು ಮರಣ ಪ್ರಮಾಣಕ್ಕಿಂತ ಹೆಚ್ಚಾಗಿದೆ. ಆದುದರಿಂದ ಜನಸಂಖ್ಯೆಯು ನಾಗಲೋಟದಿಂದ ಬೆಳೆಯಲು ಪ್ರಾರಂಭಿಸಿದೆ. ಆದ್ದರಿಂದ ಭಾರತದ ಜನಸಂಖ್ಯೆಯು ನಿರೀಕ್ಷಿತ ಮಟ್ಟವನ್ನು ತಲುಪುವಲ್ಲಿ ಯಶಸ್ವಿಯನ್ನು ಕಂಡಿಲ್ಲ.

ಸಣ್ಣಸಣ್ಣ ವಯಸ್ಸಿನಲ್ಲಿ ವಿವಾಹ ಮಾಡುವುದರಿಂದ ಮಕ್ಕಳನ್ನು ಹೆರುವ ಅವಧಿಯು ಹೆಚ್ಚಾಗಿ, ಜನಸಂಖ್ಯೆಯು ಹೆಚ್ಚಾಗುವಲ್ಲಿ ಹಿಂಜರಿಕೆ ಕಂಡುಬರುವುದಿಲ್ಲ. ಬಾಲ್ಯವಿವಾಹ ಕಾಯ್ದೆಯು ೧೯೨೯ರಲ್ಲಿ ಜಾರಿಗೊಂಡ ಮೇಲೆ ಸ್ತ್ರೀ-ಪುರುಷರ ವಿವಾಹದ ವಯಸ್ಸು ನಿಧಾನವಾಗಿ ಹೆಚ್ಚುತ್ತ ಬಂದಂತೆಲ್ಲಾ ಹುಡುಗಿಯರಲ್ಲಿ ವಿವಾಹದ ವಯಸ್ಸು ೧೮-೨೦ಕ್ಕೆ ಹೇರಿತು. ಇತರ ರಾಷ್ಟ್ರಗಳಲ್ಲಿ ೨೫ ವರ್ಷಗಳ ನಂತರವೇ ವಿವಾಹವಾಗುತ್ತಾರೆ. ಚಿಕ್ಕ ವಯಸ್ಸಿನಲ್ಲಿ ವಿವಾಹವಾಗುವುದರಿಂದ ದೇಶದಲ್ಲಿ ಜನಸಂಖ್ಯೆಯ ಹೆಚ್ಚಳವು ಕಂಡುಬರುತ್ತದೆ.[೨]

ಭಾರತೀಯರಲ್ಲಿ ಅನೇಕ ಸಂಪ್ರದಾಯಗಳನ್ನು ಅನುಸರಿಸುವವರು ಹೆಚ್ಚಾಗಿ ಕಂಡುಬರುತ್ತಾರೆ. ಹಿಂದೂ ಸಮಾಜದಲ್ಲಿ ಅವಿವಾಹಿತರಿಗೆ ಕೆಲವೊಂದು ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಭಾಗವಹಿಸುವ ಹಕ್ಕು ಇಲ್ಲವೆಂಬುದು ಒಂದು ರೂಢಿಗತವಾಗಿ ಕಂಡುಬಂದಿರುವಂತಹುದಾಗಿತ್ತು. ಏಕೆಂದರೆ ಮಕ್ಕಳಿಲ್ಲದವರಿಗೆ ಸದ್ಗತಿ ಅಥವಾ ಮೋಕ್ಷವಿಲ್ಲವೆಂಬ ಧಾರ್ಮಿಕ ನಂಬಿಕೆಯು ಗಾಢವಾಗಿ ಬೆಳೆದು ಬಿಟ್ಟಿತ್ತು. ಹೀಗೆ ಧರ್ಮ ಹಾಗೂ ಸಂಪ್ರದಾಯಗಳಿಗೆ ಬಲಿಯಾಗಿ ಜನಸಂಖ್ಯೆಯ ಹೆಚ್ಚಳಕ್ಕೆ ಕಾರಣಿಭೂತವಾಯಿತು.

ಜನರ ಜೀವನಮಟ್ಟ ಹೆಚ್ಚಾದಂತೆಲ್ಲ ಜನಸಂಖ್ಯೆಯು ಕಡಿಮೆಯಾಗುತ್ತದೆ. ಆದರೆ ಭಾರತ ದೇಶದಲ್ಲಿ ಬಡತನವು ಹೆಚ್ಚಾಗಿರುವುದರಿಂದ ಲೈಂಗಿಕತೆಯೊಂದೇ ಮನರಂಜನೆಯ ಸಾಧನವೆಂಬ ಮಾತು ಜನಸಾಮಾನ್ಯರಲ್ಲಿ ಬೇರೂರಿತ್ತು. ಹಾಗೆಯೇ ಉಷ್ಣವಲಯದ ಹವಮಾನವು ಕೂಡ ಜನಸಂಖ್ಯೆಯು ಬೆಳೆಯುವಲ್ಲಿ ಸಹಾಯಕಾರಿಯಾಗಿತ್ತು ಎಂದು ಹೇಳಬಹುದು. ಉಷ್ಣ ಹವಮಾನ ಹೆಚ್ಚಾದಂತೆಲ್ಲ ಚಿಕ್ಕ ವಯಸ್ಸಿನ ಮಕ್ಕಳು ಪ್ರೌಢಾವಸ್ಥೆಯನ್ನು ತಲುಪುತ್ತಾರೆ. ಆಗ ಕುಟುಂಬದಲ್ಲಿ ಚಿಕ್ಕ ವಯಸ್ಸಿನ ಮಕ್ಕಳಿಗೆ ಮದುವೆ ಮಾಡಿ ಅವರ ಕೈತೊಳೆದುಕೊಳ್ಳುತ್ತಾರೆ. ಭಾರತ ದೇಶದಲ್ಲಿ ಅಕ್ಷರಸ್ಥರ ಸಂಖ್ಯೆಗಿಂತ ಅನಕ್ಷರಸ್ತರ ಸಂಖ್ಯೆ ಹೆಚ್ಚಾಗಿರುವುದರಿಂದ ಅವರು ಕೆಲವೊಂದು ಸಂಪ್ರದಾಯಗಳನ್ನು ಅನುಸರಿಸುತ್ತ ರಾಷ್ಟ್ರದ ಸಮಸ್ಯೆಗಳ ಬಗ್ಗೆ ಪ್ರಜ್ಞೆಯಿಲ್ಲದೆ ನಿರಕ್ಷರತೆಯಿಂದ ಜನನ ನಿಯಂತ್ರಣವು ಧಾರ್ಮಿಕ ಸಂಪ್ರದಾಯಕ್ಕೆ ವಿರುದ್ಧವಾದುದು ಎಂಬ ಭಾವನೆ ಜನರಲ್ಲಿ ಅಡಗಿತ್ತು. ಮಕ್ಕಳಿಲ್ಲದವರಿಗೆ ಸಾಮಾಜಿಕ ಮನ್ನಣೆ ಇಲ್ಲ ಎನ್ನುವ ಸಂಪ್ರದಾಯವೊಂದಿತ್ತು.

ಜನರಲ್ಲಿ ನಿರಕ್ಷರತೆ ಹೆಚ್ಚಾಗಿರುವುದರಿಂದ ಅವರ ಚಿಂತನಾ ಶೀಲತೆ, ರಾಷ್ಟ್ರೀಯ ಪ್ರಜ್ಞೆ ಬೆಳೆಯುತ್ತಿರಲಿಲ್ಲ. ಮಕ್ಕಳಾಗದಿದ್ದರೆ, ಗಂಡಿಸಿಗೆ ಮತ್ತೊಂದು ಮದುವೆ ಮಾಡುವ ಸಂಪ್ರದಾಯವಿದೆ ಎನ್ನುವ ನಂಬಿಕೆಯು ಹೆಚ್ಚಾಗಿತ್ತು. ಅವಿಭಕ್ತ ಕುಟುಂಬ ಪದ್ಧತಿಯು ಸಹ ಸಾಮಾಜಿಕ ಜೀವನದ ಒಂದು ಅಂಗವಾಗಿದೆ. ಅವಿಭಕ್ತ ಕುಟುಂಬಗಳಲ್ಲಿ ಮಕ್ಕಳು ತಂದೆ, ತಾಯಿಗಳಿಗೆ ಸಮಸ್ಯೆಯಾಗಿ ಕಂಡುಬರುವುದಿಲ್ಲ. ಹೀಗಾಗಿ ಕುಟುಂಬ ಯೋಜನೆ ಮತ್ತು ಸಂತಾನ ನಿಯಂತ್ರಣಗಳು ಹೆಚ್ಚಾಗಿ ಕಂಡು ಬಂದಿರುವುದಿಲ್ಲ. ಆದರೆ ಜನಸಂಖ್ಯೆಯು ವಿಚಿತ್ರವಾದ ಬೆಳವಣಿಗೆಯನ್ನು ಹೊಂದುವಲ್ಲಿ ಯಶಸ್ವಿಯಾಗಿದೆ.[೩]

ಹೆಚ್ಚುತ್ತಿರುವ ಜನಸಂಖ್ಯೆಯಿಂದ ರಾಷ್ಟ್ರದ ಆರ್ಥಿಕ ಸ್ಥಿತಿಯಲ್ಲಿ ಬದಲಾವಣೆಯಾದಂತೆ ತಲಾವರಮಾನದಲ್ಲಿಯೂ ಬದಲಾವಣೆಯಾಗುತ್ತದೆ. ಜನಸಂಖ್ಯೆಯ ಹೆಚ್ಚಳಕ್ಕನುಗುಣವಾಗಿ ಉತ್ಪಾದನೆಯು ಹೆಚ್ಚಾಗದಿದ್ದರೆ, ತಲಾವರಮಾನವು ತೀವ್ರವಾಗಿ ಬೆಳೆಯುತ್ತಿರುವ ಜನಸಂಖ್ಯೆಯಿಂದ ಇಳಿಮುಖವಾಗುತ್ತ ಹೋಗುವುದು ಕಂಡುಬರುತ್ತದೆ. ಹಾಗೆಯೇ ಬಡತನ ಮತ್ತು ನಿರುದ್ಯೋಗವು ಸಹ ಜನಸಂಖ್ಯೆಯನ್ನು ಹೆಚ್ಚಿಸುವಲ್ಲಿ ಕಾರಣವಾಗಿದೆ. ಜನಸಂಖ್ಯೆಯ ಹೆಚ್ಚಳದಿಂದ ಸರ್ಕಾರದ ವೆಚ್ಚದ ಪ್ರಮಾಣವು ಹೆಚ್ಚಾಗಿದೆ. ಮಕ್ಕಳಿಗಾಗಿ ಉಚಿತಶಿಕ್ಷಣ, ವೈದ್ಯಕೀಯ ಸೌಲಭ್ಯಗಳು ಇನ್ನೂ ಮೊದಲಾದವುಗಳಿಗಾಗಿ ಸರಕಾರವು ಪ್ರತಿವರ್ಷ ಬಹಳಷ್ಟು ಹಣವನ್ನು ವ್ಯಯಮಾಡುತ್ತದೆ. ಇದರಿಂದ ಬಂಡವಾಳದ ಶೇಕರಣೆಗೆ ಅಡ್ಡಿಯಾಗಿ, ಉತ್ಪಾದನೆಯ ಪ್ರಮಾಣವು ಕುಗ್ಗಿ ಜನರ ಜೀವನ ಮಟ್ಟ ಕುಸಿಯ ತೊಡಗಿತು. ಜನಸಂಖ್ಯೆಯ ಹೆಚ್ಚಳದಿಂದ ಮೂಲ ಸೌಲಭ್ಯಗಳ ಕೊರತೆಯುಂಟಾಗಿ ಜನರಲ್ಲಿ ಸಾಂಕ್ರಮಿಕ ರೋಗಗಳು ಹೆಚ್ಚಾಗಿದ್ದವು. ಜನರಲ್ಲಿ ನಿರಕ್ಷರತೆಯೇ ಇದಕ್ಕೆಲ್ಲ ಮೂಲಕಾರಣವಾಗಿತ್ತು.

ಜನಸಂಖ್ಯೆಯನ್ನು ತಡೆಗಟ್ಟುವಲ್ಲಿ ಅನೇಕ ರೀತಿಯ ಆಚರಣೆಗಳು, ರೂಢಿಸಂಪ್ರದಾಯಗಳು, ಅಡ್ಡಬರಬಹುದು, ಆದರೆ ಅವುಗಳನ್ನು ಗಮನಕ್ಕೆ ತೆಗೆದುಕೊಳ್ಳದೆ, ನಮ್ಮ ಆಚಾರ, ವಿಚಾರಗಳು, ಸಂಪ್ರದಾಯಗಳು, ಪರಂಪರೆಗಳು, ಮೌಲ್ಯಗಳಲ್ಲಿ ತೀವ್ರ ತರದಲ್ಲಿ ಮಾರ್ಪಾಡು ಮಾಡಬೇಕು. ಸ್ತ್ರೀ-ಪುರುಷರ ವಿವಾಹ ವಯಸ್ಸನ್ನು ಮುಂದೂಡಿ ನಿಧಾನವಾಗಿ ಮದುವೆ ಆಗುವುದಕ್ಕೆ ಪ್ರೋತ್ಸಾಹಿಸಬೇಕು. ಸ್ತ್ರೀ-ಪುರುಷರು ಸಾಮಾಜಿಕ ಜೀವನದಲ್ಲಿ ಸಮಾನವಾದ ಜೀವನವನ್ನು ಸಾಗಿಸಿ, ಮಕ್ಕಳಿಗೆ ಯೋಗ್ಯ ಶಿಕ್ಷಣ ಮತ್ತು ತರಬೇತಿಯನ್ನು ನೀಡಿದಲ್ಲಿ ಶಿಕ್ಷಣದಿಂದ ಸಾಮಾಜಿಕ ಪ್ರಜ್ಞೆ ಬೆಳೆದು ಸುಖಕರವಾದ ಜೀವನವನ್ನು ಸಾಗಿಸುವ ಹಟ ಬೆಳೆಯುತ್ತದೆ. ಜೊತೆಗೆ ಒಳ್ಳೆಯ ಶಿಕ್ಷಣದಿಂದ ಸಾಮಾಜಿಕವಾಗಿರುವಂತ ಮೂಢನಂಬಿಕೆಗಳು, ರೂಢಿಸಂಪ್ರದಾಯಗಳಂತ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುತ್ತದೆ. ಚಿಕ್ಕ ಮಕ್ಕಳನ್ನು ದುಡಿಯಲು ಬಿಡದೆ ಶಿಕ್ಷಣವನ್ನು ಕಲಿಯಲು ಪ್ರೋತ್ಸಾಹಿಸಿ, ಹೆಣ್ಣು ಮಕ್ಕಳಿಗೂ ಶಿಕ್ಷಣದ ಕಡೆ ಮನವೊಲಿಸಿ ಅವರಿಗೂ ಯೋಗ್ಯ ಶಿಕ್ಷಣವನ್ನು ನೀಡಿದಾಗ ಮಾತ್ರ ರಾಷ್ಟ್ರದ ಸಮಸ್ಯೆಗಳ ಬಗ್ಗೆ

ಪ್ರಜ್ಞೆ ಮೂಡಿ ರಾಷ್ಟ್ರದ ಅಭಿವೃದ್ಧಿಗೆ ಪೋಷಕರಾಗುವರು. ಕುಟುಂಬ ಯೋಜನೆ ಮತ್ತು ಸಂತಾನ ನಿರೋಧದ ಕ್ರಮಗಳನ್ನು ಬಳಸಿಕೊಳ್ಳುವಂತೆ ಜನರ ಗಮನವನ್ನು ಕುಟುಂಬ ಯೋಜನೆ ಕಡೆ ಗಮನ ಸೆಳಯಬೇಕು.

ಕುಟುಂಬ ಯೋಜನೆಯಿಂದ ರಾಷ್ಟ್ರದ ಪ್ರಗತಿಯಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಈ ದೃಷ್ಟಿಯಿಂದ ಕಡಿಮೆ ಮಕ್ಕಳನ್ನು ಹೆರುವುದು ಜನನ ನಿಯಂತ್ರಣ ಕಾರ್ಯಕ್ರಮದ ಉದ್ದೇಶವಾಗಿದೆ. ಒಂದು ಮಗುವಿನಿಂದ ಮತ್ತೊಂದು ಮಗುವಿನ ಮಧ್ಯ ಅಂತರವನ್ನು ಕಾಯ್ದುಕೊಳ್ಳುವುದು ಆರೋಗ್ಯ ದೃಷ್ಟಿಯಿಂದ ಒಳ್ಳೆಯದು ಆದರೆ ಭಾರತದಲ್ಲಿ ಜನಸಂಖ್ಯೆ ಮಿತಿಮೀರಿ ಬೆಳೆದಿದ್ದರಿಂದ ಕುಟುಂಬ ಯೋಜನೆಯು ಕುಟುಂಬದ ಗಾತ್ರವನ್ನು ಕಡಿಮೆ ಮಾಡುವಲ್ಲಿ ಮಾತ್ರ ಹೆಚ್ಚಿನ ಗಮನವಹಿಸಿದೆ. ಕುಟುಂಬ ಯೋಜನೆಯು ಇಂದು ಹೆಚ್ಚಿನ ಪ್ರಮಾಣದಲ್ಲಿ ಜಾಹಿರಾತುಗಳ ಮೂಲಕ ಪ್ರಚಾರ ಮಾಡುವಲ್ಲಿ ಮುಂದಾಳತ್ವವನ್ನು ವಹಿಸಿ ಸಂತಾನ ನಿಯಂತ್ರಣವನ್ನು ಮಾಡಿಸಿ ಕೊಳ್ಳುವವರಿಗೆ ಸರಕಾರದಿಂದ ಪ್ರೋತ್ಸಾಹಧನ ಮತ್ತು ಇತರ ಮೂಲಸೌಲಭ್ಯಗಳನ್ನು ನೀಡಲಾಗುತ್ತದೆ. ನಿರಕ್ಷರಿಗಳು ತೀರ ಬಡತನದಲ್ಲಿದ್ದವರಿಗೆ ರಾಷ್ಟ್ರದ ಬಗೆಗೆ ಪ್ರಜ್ಞೆಯನ್ನು ತಳೆಯದೇ ಇರುವ ಜನರಿಗೆ ಕುಟುಂಬ ಯೋಜನೆಯ ಬಗ್ಗೆ ಪ್ರಜ್ಞೆಯನ್ನು ನೀಡುವಂತೆ ರಾಷ್ಟ್ರದ ನಾಗರೀಕರು, ಸ್ವಯಂ ಸೇವಾ ಸಂಘಗಳು, ಸಕ್ರಿಯವಾಗಿ ಕಳಕಳೆಯಿಂದ ಸಹಕರಿಸುವುದು ಅವಶ್ಯಕವಾಗಿದೆ. ಬ್ರಹ್ಮಚರ್ಯಪಾಲನೆ, ತಡವಾಗಿ ಮದುವೆಯಾಗುವುದು, ಮೊದಲಾದ ಸ್ವಯಂ ಪ್ರೇರಿತ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಇವೆಲ್ಲವುಗಳನ್ನು ಪಾಲಿಸುವುದು ಕಷ್ಟವೆನಿಸಿದರೆ, ಕೃತಕ ವಿಧಾನಗಳ ಮೂಲಕ ಸಂತಾನೋತ್ಪತ್ತಿಯನ್ನು ನಿಯಂತ್ರಿಸಬಹುದು.[೪]

## ಕುಟುಂಬ ಯೋಜನೆಯನ್ನು ರೂಪಿಸಿದ ಬಗೆ

ಕುಟುಂಬ ಯೋಜನಾ ಕಾರ್ಯಕ್ರಮವನ್ನು ಮೊದಲಿಗೆ ರಾಷ್ಟ್ರೀಯ ಕಾರ್ಯಕ್ರಮವನ್ನಾಗಿ ೧೯೫೨ರಲ್ಲಿ ರೂಪಿಸಿದರು. ಇದಕ್ಕಿಂತ ಮುಂಚೆ ಮೈಸೂರು, ಮದರಾಸ್ ಪ್ರಾಂತ್ಯಗಳು ತಮ್ಮದೇ ಆದ ಮಾರ್ಗದಲ್ಲಿ ಈ ಯೋಜನೆಯನ್ನು ಪ್ರಾರಂಭಿಸಿದವು. ೧೯೩೦ರಲ್ಲಿ ರಾಮನಗರದಲ್ಲಿ ಮೈಸೂರು ಸರ್ಕಾರ ಒಂದು ಕುಟುಂಬ ಯೋಜನಾ ಚಿಕಿತ್ಸಾಲಯವನ್ನು ಆರಂಭಿಸಿತು. ೧೯೩೧ರಲ್ಲಿ ಮದರಾಸ್ ಸರ್ಕಾರ ಮತ್ತು ೧೯೩೨ರಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನ ಲಕ್ನೋವಿನಲ್ಲಿ ಒಂದು ಕುಟುಂಬ ಯೋಜನಾ ಚಿಕಿತ್ಸಾಲಯವನ್ನು ತೆರೆದಿದ್ದವು. ಕುಟುಂಬ ಯೋಜನಾ ಕಾರ್ಯಕ್ರಮವು ಆರಂಭದಲ್ಲಿ ಆರೋಗ್ಯ ಸೇವೆಗಳ ನಿರ್ದೇಶನಾಲಯದಲ್ಲಿ ಒಂದು ಸಣ್ಣ ವಿಭಾಗವಾಗಿ ಅಸ್ತಿತ್ವಕ್ಕೆ ಬಂದು ರಾಷ್ಟ್ರಗಳ ಮಟ್ಟದಲ್ಲಿ

ಕುಟುಂಬ ಯೋಜನಾ ಅಧಿಕಾರಿಗಳನ್ನು ನೇಮಿಸಿದರು. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಕುಟುಂಬ ಯೋಜನಾ ಮಂಡಲಿಗಳನ್ನು ಕೇಂದ್ರ ಹಾಗೂ ರಾಜ್ಯ ಮಟ್ಟಗಳಲ್ಲಿ ಪ್ರಾರಂಭಿಸಿದರು.

೧೯೬೬ರಲ್ಲಿ ಕುಟುಂಬ ಯೋಜನೆಗಾಗಿಯೇ ಒಂದು ಪ್ರತ್ಯೇಕವಾದ ಇಲಾಖೆಯನ್ನು ಸ್ಥಾಪಿಸಿ ಆರೋಗ್ಯ ಮಂತ್ರಾಲಯಕ್ಕೆ ಆರೋಗ್ಯ ಮತ್ತು ಕುಟುಂಬ ಯೋಜನಾ ಮಂತ್ರಾಲಯವೆಂದು ಪುನರ್ ನಾಮಕರಣ ಮಾಡಿದರು. ಕುಟುಂಬ ಯೋಜನಾ ಮತ್ತು ಆರೋಗ್ಯದ ವಿಷಯಗಳನ್ನು ನೋಡಿಕೊಳ್ಳಲು ಇದಕ್ಕೆ ಪ್ರತ್ಯೇಕವಾದ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳನ್ನು ಆಯ್ಕೆ ಮಾಡಿ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಕುಟುಂಬ ಯೋಜನೆಗಾಗಿ ಒಂದು ಕ್ಯಾಬಿನೆಟ್ ಸಮಿತಿಯನ್ನು ಸ್ಥಾಪಿಸಿದರು. ನಂತರ ಕೇಂದ್ರ ಸರ್ಕಾರದ ಆರೋಗ್ಯ ಮಂತ್ರಿಗಳಿಗೆ ಒಪ್ಪಿಸಿ ೧೯೬೬ರಲ್ಲಿ ಕುಟುಂಬ ಯೋಜನಾ ಆರೋಗ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸ್ಥಾಪಿಸಿದರು.[೫]

ಗ್ರಾಮೀಣ ಪ್ರದೇಶಗಳಲ್ಲಿ ಕುಟುಂಬಯೋಜನಾ ಸೇವೆಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಕ, ನಗರ ಪ್ರದೇಶಗಳಲ್ಲಿ ನಗರ ಕುಟುಂಬ ಆರೋಗ್ಯ ಕೇಂದ್ರಗಳ ಮೂಲಕ ಕುಟುಂಬ ಯೋಜನೆ ಸೇವೆಯನ್ನು ನೀಡಲಾಗುತ್ತಿದೆ. ಇದು ಅಲ್ಲದೆ ಪ್ರಸವದ ನಂತರ ಕೆಲವು ಆರೋಗ್ಯ ಕೇಂದ್ರಗಳಲ್ಲಿ ಕುಟುಂಬ ಯೋಜನೆಯನ್ನು ಸ್ಥಾಪಿಸಿ ಅದರಿಂದ ಸೇವೆಯನ್ನು ಒದಗಿಸಲಾಗುತ್ತಿತ್ತು. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಕುಟುಂಬ ಯೋಜನೆಗಾಗಿ ೬೫ ಲಕ್ಷ ರೂಪಾಯಿಗಳನ್ನು, ಎರಡನೆ ಹಾಗೂ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ೫ ಮತ್ತು ೨೫ ಕೋಟಿ ರೂಪಾಯಿಗಳನ್ನು, ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ೩೩೦ ಕೋಟಿ ರೂಪಾಯಿಗಳನ್ನು ಕುಟುಂಬ ಯೋಜನೆಗಾಗಿ ಖರ್ಚು ಮಾಡಲಾಯಿತು. ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಕುಟುಂಬ ಯೋಜನೆಯ ಕಾರ್ಯಚರಣೆಯ ಲೋಪದೋಷಗಳನ್ನು ಒಂದು ವಿಶಿಷ್ಟವಾದ ಕ್ರಮವಾದ ರೂಪದಲ್ಲಿ ಕೈಗೊಳ್ಳಲಾಗಿತ್ತು. ಒಂದು ಕುಟುಂಬಕ್ಕೆ ಎರಡೇ ಮಕ್ಕಳು ಸಾಕು ಎಂಬುದಾಗಿ ಪ್ರಚಾರ ಮಾಡಲಾಯಿತು. ಒಂದು ಎರಡು ಆಸ್ತಿ, ಮಿಕ್ಕಿದ್ದೆಲ್ಲಾ ಜಾಸ್ತಿ, ಕೀರ್ತಿಗೊಬ್ಬ ಮಗ, ಅರತಿಗೊಬ್ಬ ಮಗಳು ಎಂಬ ಘೋಷಣೆಗಳು ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಜನಪ್ರಿಯತೆಯನ್ನು ಪಡೆದುಕೊಂಡಿದ್ದವು.

ಈ ರೀತಿಯಾಗಿ ಕುಟುಂಬ ಯೋಜನೆಯು ಹಂತ ಹಂತವಾಗಿ ಪ್ರಥಮ ಪಂಚವಾರ್ಷಿಕ ಯೋಜನೆಯಿಂದ ಆರಂಭವಾಗಿ ಎರಡನೇ ಮತ್ತು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಕುಟುಂಬ ಯೋಜನೆಗಾಗಿ ಹೆಚ್ಚಿನ ಶ್ರಮವಹಿಸಿ, ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಕುಟುಂಬ ಯೋಜನೆಗಾಗಿ ಅಧಿಕ ಪ್ರಮಾಣದಲ್ಲಿ ಹಣವನ್ನು ವೆಚ್ಚಮಾಡಿ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಬೇರೆ ಬೇರೆ ರೀತಿಯ

ಘೋಷಣೆಗಳ ಮೂಲಕ ಕುಟುಂಬ ಯೋಜನೆಯನ್ನು ರೂಪಿಸುವಲ್ಲಿ ಯಶಸ್ವಿಯನ್ನು ಪಡೆಯಿತು ಎಂದು ಹೇಳಬಹುದು.

ಕುಟುಂಬಯೋಜನೆಯು ಹೆಂಗಸಿನ ಜೀವನದ ಮೇಲೆ ಬಹಳಷ್ಟು ಒತ್ತಡವನ್ನು ತರುತ್ತಲಿದೆ. ಜನಸಂಖ್ಯಾ ನೀತಿಯಿಂದಾಗಿ, ಕುಟುಂಬ ಯೋಜನೆಯ ಅಭಿವೃದ್ಧಿಗಳನ್ನು ಕುರಿತಂತೆ ನಮ್ಮ ಗ್ರಹಿಕೆಗಳು, ಪರಿಭಾಷೆ ವೈಚಾರಿಕ ಆಕೃತಿಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಲಿವೆ. ಆದರೆ ಮಾನವ ಸಂತತಿಯ ಅಭಿವೃದ್ಧಿಗೆ ಜೀವನಾಡಿಯಾಗಿರುವ ಹೆಂಗಸರು ಮಾತ್ರ ಸಮಾಜದಲ್ಲಿ ಒಂದಲ್ಲ ಒಂದು ಸಮಸ್ಯೆಗೆ, ಒತ್ತಡಕ್ಕೆ ಈಡಾಗುತ್ತಲೇ ಇದ್ದಾರೆ. ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯ ಸಂಪ್ರದಾಯವಾದಿ ನಡವಳಿಕೆಗಳು ವ್ಯಾಪಕವಾಗಿ, ಸ್ಥಿರವಾಗಿ ನಿಂತ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರು ದೈನ್ಯತೆ, ವಿದೇಯತೆ, ಅಧೀನತೆಯ ಭಾವನೆಗಳನ್ನು ಅಳವಡಿಸಿಕೊಂಡಿರುವ ದುರಂತಗಳನ್ನು ಕಾಣಬಹುದು.

ಜನಸಂಖ್ಯೆಯನ್ನು ತಡೆಗಟ್ಟುವಲ್ಲಿ ಕುಟುಂಬ ಯೋಜನೆಯನ್ನು ಸ್ಥಾಪಿಸಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಮಹಿಳೆಯರ ಆರೋಗ್ಯದ ಮೇಲೆ, ಸಂತಾನೋತ್ಪತ್ತಿಯ ಹಕ್ಕುಗಳ ಮೇಲೆ ಪುರುಷ ಪ್ರಧಾನರು ತುಂಬಾ ಒತ್ತಡವನ್ನು ತಂದೊಡ್ಡಿದರು. ಸಂತಾನೋತ್ಪತ್ತಿಗೆ ಸಂಬಂಧಿಸಿದಂತೆ ಸ್ವಂತ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಮಹಿಳೆಯರಿಗೆ, ಕೌಟುಂಬಿಕವಾಗಿಯಾಗಲಿ ಮತ್ತು ಸಾಮಾಜಿಕವಾಗಿ ಯಾಗಲಿ ಯಾವುದೇ ರೀತಿಯ ನಿರ್ಧಾರಕ ಪಾತ್ರವನ್ನು ವಹಿಸಲು ಮಹಿಳೆಗೆ ಸಾಧ್ಯವಾಗು ತ್ತಿರಲಿಲ್ಲ. ಕುಟುಂಬ ಯೋಜನೆ ಮತ್ತು ಜನಸಂಖ್ಯಾ ನೀತಿಯ ಯೋಜನೆಗಳಲ್ಲಿ ಮಿಲನವಾಗಿರುವ ಲಿಂಗ ಸಂಬಂಧಿ ತಾರತಮ್ಯ, ಲಿಂಗ ಅಸಮಾನತೆ ಸ್ತ್ರೀ ಶೋಷಣೆ ಈ ಎಲ್ಲ ಅಸಮಾನ ನೆಲೆಗಳಿಂದ ಸ್ತ್ರೀಯು ಧಮನಗೊಳ್ಳುತ್ತಾಳೆ.[೬]

ಕುಟುಂಬ ಯೋಜನೆ ಕಾರ್ಯಕ್ರಮದ ಮೂಲದಲ್ಲಿ ಪುರುಷಶಾಹಿತ್ವವು ಚಾಲಕ ಶಕ್ತಿಯಾಗಿ ಕಾರ್ಯ ನಿರ್ವಹಿಸುತ್ತದೆ. ಜನಸಂಖ್ಯೆಯ ಅರ್ಧಭಾಗದಷ್ಟಿರುವ ಮಹಿಳೆಯರು ಕುಟುಂಬದ ಸದಸ್ಯರಾಗಿ ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು ಹೊಸ ತಲೆಮಾರಿಗೆ ಸೃಷ್ಟಿಕರ್ತರಾಗಿರುವುದು, ಸರಕುಗಳನ್ನು ಉತ್ಪಾದಿಸುವುದು, ಪಂಚಾಯತ್ ಗಳಲ್ಲಿ ವಿಧಾನಸಭೆಗಳಲ್ಲಿ ಜನ ಪ್ರತಿನಿಧಿಯಾಗಿರುವುದು ಕಂಡುಬಂದರೂ ಸಹ ಸಂತಾನೋತ್ಪತ್ತಿಗೆ ಸಂಬಂಧಪಟ್ಟಂತೆ ಅವಳಿಗೆ ಅಧಿಕಾರವಿಲ್ಲದಿರುವುದು ಮತ್ತು ಅವಳ ದುಡಿಮೆಗೆ ಬೆಲೆ ಇಲ್ಲದೆ ಇರುವುದು ಅವಳ ಬದುಕಿನಲ್ಲಿ ಒಂದು ದುರಂತವಾಗಿದೆ.

ತಾಯಂದಿರ ಮರಣ ಪ್ರಮಾಣ ಭಾರತ ದೇಶದಲ್ಲಿ ಅಧಿಕ ಪ್ರಮಾಣದಲ್ಲಿ ಇರುವುದು ಕಂಡುಬರುತ್ತದೆ. ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಸುಮಾರು ೧೫ ರಿಂದ ೪೫ರ ವಯಸ್ಸಿನ ವಯೋಮಾನದ ಮಹಿಳೇಯರು

ಅನಿಮಿಯಾ 'ರಕ್ತಹೀನತೆ'ಯಿಂದ ನರಳುತ್ತಿದ್ದಾರೆ. ಇನ್ನೂ ಕೆಲವು ಮಹಿಳೆಯರು ಮಗುವಿನ ಭ್ರೂಣದ ಹಂತದಲ್ಲೆ ಸಾವಿಗೀಡಾಗುತ್ತಿದ್ದಾರೆ.

ಮಹಿಳೆಯ ಬದುಕಿನ ಎಲ್ಲ ಸಂಗತಿಗಳಲ್ಲೂ ಭ್ರೂಣವು ತಾಯಿಯ ಗರ್ಭ ಸೇರಿದಾಗಿನಿಂದ ಹಿಡಿದು ಭೂಮಿಯ ಗರ್ಭಸೇರುವವರೆಗೂ ಅವಳು ತಾರತಮ್ಯ ಮತ್ತು ಧಮನಕ್ಕೆ ಈಡಾಗುತ್ತಾಳೆ. ಅವಳು ತನ್ನ ಜೀವನದ ಎಲ್ಲ ಹಂತಗಳಲ್ಲಿ 'ದೈನೇಸಿ' ಬದುಕನ್ನು ಸಾಗಿಸಬೇಕಾಗುತ್ತದೆ. ತಮ್ಮ ಕುಟುಂಬಗಳಲ್ಲಿ ಸಾಕಷ್ಟು ಆಹಾರವು ಲಭ್ಯವಿದ್ದರೂ ಅವರು ಅಪೌಷ್ಠಿಕತೆಯಿಂದ ನರಳುತ್ತಿರುತ್ತಾರೆ. ಕುಟುಂಬದಲ್ಲಿ ಆಹಾರವನ್ನು ಸಿದ್ಧಪಡಿಸುವವಳು, ವಿತರಣೆ ಮಾಡುವವಳು ಹೆಂಗಸಾದರೂ ಅದರ ಅನುಭೋಗದಲ್ಲಿ ಅವಳಿಗೆ ಸಮಪಾಲು ದೊರೆಯುತ್ತಿಲ್ಲ. ಇದರಿಂದ ಅವಳಿಗೆ ತೀವ್ರವಾದ ರೀತಿಯಲ್ಲಿ ಆತಂಕಕ್ಕೆ ಎಡೆಮಾಡಿಕೊಟ್ಟಂತೆ ಆಗುತ್ತದೆ.[೭]

ಸಂತಾನೋತ್ಪತ್ತಿಗೆ ಸಂಬಂಧಿಸಿದಂತ ವಿಷಯಗಳನ್ನು ಕುರಿತಂತೆ ಅವಳಿಗೆ ಸ್ವಂತ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಪ್ರಭುತ್ವವು ಭಾಗಿಯಾಗಿ ಅವರಿಗಿರುವ ನಿರ್ಣಾಯಕ ಪಾತ್ರವನ್ನು ರದ್ದುಗೊಳಿಸುತ್ತದೆ. ಈ ರೀತಿಯಾಗಿ ಪ್ರಭುತ್ವವು ಹೇರಲ್ಪಡುವ ನಿರ್ಬಂಧನೆಗಳು ಮಹಿಳೆಯರ ವೈಯಕ್ತಿಕ, ಸಾಮಾಜಿಕ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ಯಶಸ್ವಿಯನ್ನು ಹೊಂದುವುದಿಲ್ಲ.

ಪುರುಷ ಪ್ರಧಾನ ಸಮಾಜದಲ್ಲಿ ಪರಂಪರೆ ಮತ್ತು ಆಧುನಿಕತೆಗಳು ಎರಡು ಪುರುಷರ ಸಹಭಾಗಿತ್ವವನ್ನು ಅರ್ಥಮಾಡಿಕೊಂಡಿವೆ. ಆಧುನೀಕತೆಯನ್ನು ಪ್ರಸರಿಸುತ್ತಿರುವ ಎಲ್ಲ ಸಾಧನಗಳು, ಕುಟುಂಬ ಯೋಜನೆಯನ್ನು ಸೇರಿಕೊಂಡು, ಕುಟುಂಬ ಯೋಜನೆಯು ಇಂದು ಸಂಪೂರ್ಣವಾಗಿ ಮಹಿಳೆಯರಿಗೆ ಸಂಬಂಧಿಸಿದ್ದಾಗಿದ್ದರೆ, ಅದರ ಮೂಲದಲ್ಲಿ ಪುರುಷ ಸಹಭಾಗಿತ್ವವು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಸಂತಾನ ಹರಣಶಸ್ತ್ರ ಚಿಕಿತ್ಸೆಯು ಪುರುಷರಿಗಿಂತ ಸ್ತ್ರೀಯರ ಸಂಖ್ಯೆವರ್ಷದಿಂದ ವರ್ಷಕ್ಕೆ ಹೆಚ್ಚಾಗುವಲ್ಲಿ ಪುರುಷರೇ ಹೆಚ್ಚಿನ ಒತ್ತಡವನ್ನು ಹೇರಿದ್ದಾರೆ.

ಸಂತಾನೋತ್ಪತ್ತಿ ಶಕ್ತಿಯು ಪುರುಷತ್ವದ ಒಂದು ಸಂಕೇತವಾಗಿ ಗುರುತಿಸಲಾಗಿದೆ. ಈ ಶಕ್ತಿಯು ಹೆಂಗಸಿನ ಮೂಲಕವೇ ನಡೆಯುತ್ತದೆ. ಪುರುಷ ಸಮುದಾಯದಲ್ಲಿ ಸಂತಾನೋತ್ಪತ್ತಿ ಶಕ್ತಿಯು ಹೆಣ್ಣಿಗೆ ಒಂದು ಸಾಧನವಾಗಿ ಪರಿಣಮಿಸಿದೆ. ಕೌಟುಂಬಿಕ ಹಾಗೂ ಸಾಮಾಜಿಕ ನೆಲೆಗಳಲ್ಲಿ ನಿರ್ಧಾರವನ್ನು ತೆಗೆದುಕೊಳ್ಳುವ ಅಧಿಕಾರವನ್ನು ಪುರುಷ ಸಮುದಾಯವು ಹೇಗೆ ಬಳಕೆ ಮಾಡಿಕೊಂಡಿದೆಯೊ ಹಾಗೆಯೇ ಸಂತಾನೋತ್ಪತ್ತಿ ವಿಷಯದಲ್ಲಿಯೂ ನಿರ್ಣಯವನ್ನು ತೆಗೆದುಕೊಳ್ಳುವ ಅಧಿಕಾರವನ್ನು ಪುರುಷನೇ ಹೊಂದಿರುತ್ತಾನೆ. ಪುರುಷ ಸಹಾಭಾಗಿತ್ವದಲ್ಲಿ ಅಜ್ಞಾನಳಾಗಿ ಕಂಡುಬರುವಂತ ಸ್ಥಿತಿ ಹೆಂಗಸಿನದ್ದಾಗಿರುತ್ತದೆ. ಸಂತಾನೋತ್ಪತ್ತಿಗೆ ಸಂಬಂಧಿಸಿದಂತೆ ನಿರ್ಧಾರಗಳನ್ನು ತೆಗೆದು ಕೊಳ್ಳುವಲ್ಲಿ ಹೆಣ್ಣಿನ ಸಹಭಾಗಿತ್ವವು

ಶೂನ್ಯವೆಂದು ಕಂಡುಬಂದರೂ, ಸಂತಾನಕ್ರಿಯೆ ಚಲಾವಣೆಯಲ್ಲಿರುತ್ತದೆ. ಕುಟುಂಬದ ಎಲ್ಲ ನಿಯಮಗಳಿಗೆ ಬದ್ಧಳಾಗಿ ನಡೆದುಕೊಳ್ಳುವ ಪರಿಪಾಠವು ನಮ್ಮ ಪಿತೃಪ್ರಧಾನ ಸಮಾಜದಲ್ಲಿದೆ.

ಕುಟುಂಬ ಯೋಜನೆಗೆ ಸಂಬಂಧಪಟ್ಟಂತೆ ತಾಂತ್ರಿಕ ಪರಿಶೋಧನೆಗಳಿಗೆ ಬಲಿಪಶುಗಳಾಗುವವರು ಹೆಚ್ಚಾಗಿ ಹೆಂಗಸರಾಗಿರುತ್ತಾರೆ. ಯಾವುದೋ ಒಂದು ಔಷಧಿಯು ಮಾರುಕಟ್ಟೆಗೆ ತರಬೇಕಾದರೆ ಅದನ್ನು ಮೊದಲು ಹೆಂಗಸಿನ ಆರೋಗ್ಯದ ಮೇಲೆ ಪ್ರಯೋಗ ಮಾಡುತ್ತಾರೆ. ಅವಳಿಗೆ ಏನಾದರೂ ಆಗಲಿ ಪರವಾಗಿಲ್ಲ ನಮಗೆ ಮಾತ್ರ ಏನು ತೊಂದರೆ ಆಗಬಾರದು ಎನ್ನುವ ಚಿಂತನೆಗಳು ಪುರುಷರಲ್ಲಿ ಮನೆಮಾಡಿಕೊಂಡಿರುತ್ತವೆ.

ಕುಟುಂಬ ಯೋಜನಾ ವಿಧಾನಗಳಲ್ಲಿ ಹೆಂಗಸರಿಗೆ ಇರುವ ವಿಧಾನಗಳೆಲ್ಲ ಅವರ ಆಂತರಿಕ ಉಪಯೋಗಕ್ಕೆ ಸಂಬಂಧಪಟ್ಟಿವೆ. ಅದರ ಸೈಡ್ ಎಫೆಕ್ಟ್ಸ್ ತುಂಬಾ ಅಪಾಯಕಾರಿಯಾದುದು ಆದರೂ ಕಾಂಡೋಮ್ಸ್ ಗಳು ಸಾಮಾನ್ಯವಾದ ಅನುಭವವನ್ನು ಕೊಡುವುದಿಲ್ಲ ಎಂಬ ಕಾರಣಕ್ಕಾಗಿ ಅವುಗಳನ್ನು ಪುರುಷರು ಒಪ್ಪಿಕೊಳ್ಳುತ್ತಿರಲಿಲ್ಲ. ಕಾಂಡೋಮ್ಸ್ ಬಿಟ್ಟರೆ ಪುರುಷರಿಗೆ ತಾತ್ಕಾಲಿಕವಾದ ಬೇರೆ ವಿಧಾನವು ಬಳಕೆಗೆ ಕಂಡುಬಂದಿಲ್ಲ. ಹೀಗಾಗಿ ಅದರ ಹೊರೆಯೆಲ್ಲ ಹೆಂಗಸರ ಮೇಲೆ ಬೀಳುತ್ತಿದೆ. ಈ ಸಮಸ್ಯೆಯು ಎಷ್ಟೋ ಜನ ಪುರುಷರಿಗೆ ತಿಳಿದಿದ್ದರೂ, ಹೆಂಗಸರ ಮುಂದೆ ಇದಕ್ಕಿಂತ ಬೇರೆ ಮಾರ್ಗವಿಲ್ಲ ಎನ್ನುವಂತೆ ಕಾಣುತ್ತಾರೆ. ಆದರೆ ಇಷ್ಟು ಸೂಕ್ಷ್ಮವಾಗಿ ತಿಳಿದುಕೊಳ್ಳುವ ಪುರುಷರ ಸಂಖ್ಯೆ ತುಂಬಾ ಕಡಿಮ. ಏಕೆಂದರೆ ತಮ್ಮ ಕುಟುಂಬಗಳ ವಿಚಾರದಲ್ಲೆ ಅರ್ಥಮಾಡಿಕೊಳ್ಳುವವರ ಸಂಖ್ಯೆ ಕಡಿಮೆ ಇರುವಾಗ ಗಂಡಸರೇ ಪ್ರಾಬಲ್ಯದಲ್ಲಿರೋ ತಂತ್ರಜ್ಞಾನ ಕ್ಷೇತ್ರದಲ್ಲಾಗಲೀ, ದೇಶದ ಆಡಳಿತದಲ್ಲಾಗಲಿ, ಯೋಜನೆಯಲ್ಲಾಗಲಿ ಹೆಂಗಸರ ಪರವಾದ ಕಾಳಜಿಯನ್ನು ಹೊಂದಿರುತ್ತಾರೆ ಎನ್ನುವುದು ಕನಸಿನ ಮಾತಾಗಿದೆ ಅಷ್ಟೆ.[೮]

ಗರ್ಭನಿರೋಧಕವನ್ನು ಕ್ವಿನ್‌ಕ್ರಾನ್‌ನಂತಹ ವಿಷಕಾರಿ ಮಾತ್ರೆಗಳ ಪ್ರಯೋಗವನ್ನು ಮಹಿಳೆಯರ ಮೇಲೆ ಪ್ರಭುತ್ವವು ಮಾಡುತ್ತದೆ. ಎಲ್ಲವುಗಳಿಗೆ ಕಾರಣಿಭೂತಳಾಗುವವಳು ಮಹಿಳೆ. ಅವಳ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರಿದರೂ ಸಹ ಪ್ರಭುತ್ವವು ಅದನ್ನು ಲೆಕ್ಕಿಸದೆ ಜನಸಂಖ್ಯೆ ನಿಯಂತ್ರಣ ಮಾಡುವಲ್ಲಿ ಅವಳ ಹಕ್ಕು ಇಲ್ಲದೆ ಸಂತಾನ ಚಿಕಿತ್ಸೆಯನ್ನು ಮಾಡುತ್ತೇವೆ ಎನ್ನುವ ಅಧಿಕಾರವನ್ನು ಪುರುಷರು ಚಲಾಯಿಸುತ್ತಿದ್ದಾರೆ. ಕುಟುಂಬ ಯೋಜನೆಯು ಜನಸಂಖ್ಯೆಯನ್ನು ನಿಯಂತ್ರಿಸುವ ಸಲುವಾಗಿ ಕೆಲವೊಂದು ವಿಧಾನಗಳನ್ನು ಒಳಗೊಂಡಿದೆ. ಅವುಗಳು ಈ ಕೆಳಗಿನಂತೆ ಇರುವುದು ಕಂಡುಬರುತ್ತದೆ.

ಸುರಕ್ಷಿತ ಕಾಲ ಇದು ನೈಸರ್ಗಿಕ ಜನನ ನಿಯಂತ್ರಣದ ವಿಧಾನ ಈ ಸುರಕ್ಷಿತಕಾಲವನ್ನು ಪಾಲಿಸಲು ಗಂಡ-ಹೆಂಡತಿಯರಿಬ್ಬರಿಗೆ ಹೆಚ್ಚಿನ ಕಾಲವಧಿ ಬೇಕಾಗುತ್ತದೆ. ಹೆಂಡತಿ ಮುಟ್ಟಾದ ಏಳು ದಿನ ಮತ್ತು ಮುಟ್ಟಾಗದೆ ಇರುವ ಏಳುದಿನಗಳ ಮುಂಚಿನ ಕಾಲವನ್ನು ಸುರಕ್ಷಿತ ಕಾಲವೆಂದು ಹೇಳಬಹುದು. ಈ

ಅವಧಿಯಲ್ಲಿ ಗಂಡ ಹೆಂಡತಿಯರಿಬ್ಬರೂ ಯಾವ ವಿಧಾನದ ಸಹಾಯವನ್ನು ಪಡೆಯದೆ ದಾಂಪತ್ಯ ಸುಖವನ್ನು ಪಡೆಯಬಹುದು. ಇನ್ನುಳಿದ ಮುಟ್ಟಾದ ೭ ದಿನಗಳು ಮತ್ತು ಕೊನೆಯ ಏಳು ದಿನದ ಮಧ್ಯದಲ್ಲಿರುವ ಸಮಯದಲ್ಲಿ ದಂಪತಿಗಳು ಬಹಳಷ್ಟು ಎಚ್ಚರಿಕೆಯನ್ನು ವಹಿಸಿ ತಮ್ಮ ಕುಟುಂಬದ ಘನತೆ, ಗೌರವವನ್ನು ಕಾಯ್ದುಕೊಳ್ಳಲು ಅನುಕೂಲವಾಗಿರುವ ವಿಧಾನವಾಗಿದೆ.[೯]

ಡಯಾಫ್ರಮ್ ಮತ್ತು ಜೆಲ್ಲಿ ಇದೊಂದು ರಬ್ಬರ್ ಚೀಲ. ಈ ಚೀಲವನ್ನು ಸ್ತ್ರೀಯರು ಸಂಭೋಗಕ್ಕಿಂತ ಮುಂಚೆ ತಮ್ಮ ಯೋನಿಯಲ್ಲಿ ಅಳವಡಿಸಿಕೊಂಡಲ್ಲಿ ಮಕ್ಕಳಾಗುವ ಸಂಭವ ಕಡಿಮೆಯಾಗಿ ಕಂಡುಬರುತ್ತದೆ. ಪೇಸ್ಟ್ ನಂತಿರುವ ಜೆಲ್ಲಿಯೂ ಸಹ ಸ್ತ್ರೀಯರಿಗೆ ಸಂಬಂಧಿಸಿದ್ದಾಗಿದೆ. ಇದನ್ನು ಸ್ತ್ರೀಯು ಸಂಭೋಗಕ್ಕಿಂತ ಮುಂಚೆ ತನ್ನ ಯೋನಿಯಲ್ಲಿ ಲೇಪಿಸಿಕೊಂಡಾಗ ಗರ್ಭಧರಿಸುವುದನ್ನು ತಡೆಗಟ್ಟುತ್ತದೆ. ಇದರ ಬಳಕೆಯು ಹೆಚ್ಚಾಗಿ ಪಾಶ್ಚಿಮಾತ್ಯ ದೇಶಗಳಲ್ಲಿ ಕಂಡುಬರುತ್ತದೆ. ನಮ್ಮ ದೇಶದಲ್ಲಿ ಇದರ ಬಳಕೆ ಪೂರ್ಣ ಪ್ರಮಾಣದಲ್ಲಿ ಕಡಿಮೆಯಾಗಿದೆ.

ನೊರೆಗುಳಿಗೆಗಳು ಸಹ ಮಹಿಳೆಯರಿಗೆ ಸಂಬಂಧಿಸಿದ್ದಾಗಿದೆ. ಈ ಗುಳಿಗೆಗಳು ಸುಲಭವಾಗಿ ಮತ್ತು ಅಗ್ಗವಾಗಿರುವುದಾದರೂ ಇದರ ಬಳಕೆಯು ಅಷ್ಟೊಂದು ಯಶಸ್ವಿಯನ್ನು ಕಂಡಿಲ್ಲ. ಇದನ್ನು ಸಂಭೋಗಕ್ಕಿಂತ ಮುಂಚೆ ಒಂದು ನೊರೆ ಗುಳಿಗೆಯನ್ನು ಸ್ತ್ರೀ ತನ್ನ ಯೋನಿಯಲ್ಲಿಟ್ಟುಕೊಳ್ಳಬೇಕು. ಆದರೆ ಈ ವಿಧಾನವನ್ನು ಹೆಚ್ಚಾಗಿ ದಂಪತಿಗಳೇ ತಿರಸ್ಕರಿಸಿದ್ದಾರೆ.[೧೦]

ಸಂತಾನ ಹರಣ ಶಸ್ತ್ರ ಚಿಕಿತ್ಸೆಯು ಕುಟುಂಬ ಯೋಜನಾ ಕಾರ್ಯಕ್ರಮ ಜಾರಿಗೆ ಬರುವುದಕ್ಕಿಂತ ಮುಂಚೆ ನಗರಗಳಲ್ಲಿ ಸ್ವಲ್ಪ ಜನಪ್ರಿಯತೆಯನ್ನು ಪಡೆದಿತ್ತು. ಜೊತೆಗೆ ಹೆರಿಗೆಗೊಳಗಾದ ಮಹಿಳೆಯರು ಈ ಶಸ್ತ್ರಚಿಕಿತ್ಸೆಗೆ ಒಪ್ಪಿಗೆ ಕೊಡುತ್ತಿದ್ದರು. ೧೯೫೬ರ ಸಂದರ್ಭದಲ್ಲಿ ಕುಟುಂಬ ನಿಯಂತ್ರಣದಲ್ಲಿ ಯಾರು ಹೆಚ್ಚಾಗಿ ಬಾಗಿಗಳಾಗಿದ್ದರು ಎಂಬುದು ಅಂಕಿಸಂಖ್ಯೆಗಳಿಂದ ತಿಳಿದುಬರುತ್ತದೆ. ೧೯೫೬ರಿಂದ ೧೯೬೧ರವರೆಗೆ ೮೧.೭೧೨ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸಂತಾನಹರಣ ಶಸ್ತ್ರಚಿಕಿತ್ಸೆಗೆ ಭಾಗಿಗಳಾಗಿದ್ದರು. ಆದರೆ ಪುರುಷರ ಸಂಖ್ಯೆಯ ೧೯೬೧ರ ನಂತರ ೧೯೬೭ರವರೆಗೆ ೩೮.೨ ಲಕ್ಷ ಪುರುಷರು ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಗಾಗಿ ನಂತರ ಕಡಿಮೆಯಾದರು. ೧೯೭೮ರ ನಂತರ ಮಹಿಳಾ ಚಿಕಿತ್ಸೆಯು ಹೆಚ್ಚು ಹೆಚ್ಚಾಗಿ ಪ್ರಚಲಿತಗೊಂಡಿತು. ಅಂದಿನಿಂದ ಇಂದಿನವರೆಗೂ ಈ ಶಸ್ತ್ರಚಿಕಿತ್ಸೆಯು ಹೆಚ್ಚಿನ ರೀತಿಯಲ್ಲಿ ಬಳಕೆಯಾಗುವುದು ಕಂಡುಬರುತ್ತದೆ. ಅದರಲ್ಲೂ ವಿಶೇಷವಾಗಿ ಉದರ ದರ್ಶಕ ಶಸ್ತ್ರಚಿಕಿತ್ಸೆ ಬಂದ ನಂತರ(ಲ್ಯಾಪ್ರೋ ಸ್ಕೋಪಿಕ್ ಸ್ವರ ಲೈಸೇಶನ್) ಜನರ ಒಲವು ಇದರ ಕಡೆ ಹೆಚ್ಚಾಯಿತು. ಇದು ಶಾಶ್ವತ ವಿಧಾನ. ೧೯೮೫ರಿಂದ ಪ್ರತಿವರ್ಷ ಕನಿಷ್ಠ ಪಕ್ಷ ೪೦ಲಕ್ಷ ವಿವಾಹಿತ ಮಹಿಳೆಯರು ಟುಬೆಕ್ಟಮಿ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಳ್ಳುತ್ತಿದ್ದರು. ಆದರೆ ವಾಸೆಕ್ಟಮಿ ಮಾಡಿಸಿಕೊಳ್ಳುವವರ ಸಂಖ್ಯೆ ತೀರಾ

ಇಳಿಮುಖವಾಗಿ ಹೋಯಿತು. ೧೯೮೮-೮೯ರಲ್ಲಿ ಟುಬೇಕ್ಟಮಿ ಮಾಡಿಸಿಕೊಂಡವರ ಸಂಖ್ಯೆ ೪೧ ಲಕ್ಷವಿದ್ದರೆ, ವಾಸೆಕ್ಟಮಿ ಮಾಡಿಸಿಕೊಂಡವರ ಸಂಖ್ಯೆ ಕೇವಲ ೭.೧ ಲಕ್ಷವಿತ್ತು ಇದರಿಂದ ಕಂಡುಬರುವುದೇನೆಂದರೆ, ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿ ಪುರುಷರು ಭಾಗವಹಿಸುವರ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ತುಂಬಾ ವಿರಳವಾಗಿ ಕಂಡುಬರುತ್ತದೆ.

ನಿರೋಧ್ ಗರ್ಭನಿರೋಧಕ ಸಾಧನ. ಇದನ್ನು ಪುರುಷರು ಬಳಕೆ ಮಾಡುವ ಸಾಧನ. ಇದನ್ನು ರಬ್ಬರಿನಿಂದ ತಯಾರಿಸಿದಂತ ಬೆಲೂನಿನಾಕಾರದಂತಿರುವ ಈ ನಿರೋಧವನ್ನು ದಂಪತಿಗಳು ದಾಂಪತ್ಯ ಸುಖವನ್ನು ಅನುಭವಿಸುವ ಸಂದರ್ಭದಲ್ಲಿ ಪುರುಷನು ಉಪಯೋಗಿಸಬಹುದು. ಇದರಿಂದ ಲೈಂಗಿಕಾ ತೃಪ್ತಿಯನ್ನು ಪಡೆಯಬಹುದಲ್ಲದೆ, ಆರೋಗ್ಯಕ್ಕೆ ಯಾವುದೇ ರೀತಿಯ ತೊಂದರೆಗಳು ಆಗುವುದಿಲ್ಲ. ಇದನ್ನು ಸರ್ಕಾರಿ ಕೇಂದ್ರಗಳಲ್ಲಿ ಉಚಿತವಾಗಿ ಪಡೆಯಬಹುದು. ನಿರೋಧ್ ಬಳಸುವುದರಿಂದ ಗರ್ಭಧಾರಣೆಯನ್ನು ತಡೆಗಟ್ಟಬಹುದು. ಇದರ ಬಳಕೆಯಿಂದ ಲೈಂಗಿಕ ಸೋಂಕು ರೋಗಗಳಿಂದ ಮುಕ್ತರಾಗಬಹುದು. ಜೊತೆಗೆ ತಾತ್ಕಾಲಿಕ ಕುಟುಂಬ ನಿಯಂತ್ರಣವನ್ನು ಮಾಡಬಹುದು.[೧೧]

ವೈದ್ಯಕೀಯ ಗರ್ಭಪಾತ ಸ್ತ್ರೀಯರಿಗೆ ಅನ್ವಯಿಸುವಂತ ಸಾಧನವಾಗಿದೆ. ಬೇಡದ ಮಗುವನ್ನು ಹಿಂದೆ ಸುರಕ್ಷಿತವಲ್ಲದ ಸಾಧನಗಳಿಂದ ತೆಗೆಸಿಕೊಳ್ಳುತ್ತಿದ್ದರು. ಇದರಿಂದ ಹೆಂಗಸಿನ ಆರೋಗ್ಯಕ್ಕೆ ತುಂಬಾ ಅಪಾಯಕಾರಿಯಾಗಿ ಪರಿಣಮಿಸುತ್ತಿತ್ತು. ಇಂತಹ ಅಪಾಯಕಾರಿಯಾದ ಗರ್ಭಪಾತವನ್ನು ತಪ್ಪಿಸಲು ಭಾರತ ಸರ್ಕಾರವು ೧೯೭೧ ಏಪ್ರಿಲ್ ನಲ್ಲಿ ಗರ್ಭಪಾತವನ್ನು ಮಾಡಿಸಿಕೊಳ್ಳುವುದು ಕಾನೂನಿನ ಬಾಹಿರವಲ್ಲ ಎಂದು ಘೋಷಿಸಿತು. ವಿವಾಹಿತ ಯಾವುದೇ ಗರ್ಭಿಣಿ ಹೆಂಗಸು ತನಗೆ ಮಗುವನ್ನು ಪಡೆಯುವುದು ಇಷ್ಟವಿಲ್ಲವೆಂದು ನಿರ್ಣಯವನ್ನು ತೆಗೆದುಕೊಂಡರೆ, ಗಂಡ-ಹೆಂಡರ ಒಪ್ಪಿಗೆಯಿಂದ ಗರ್ಭಪಾತವನ್ನು ಮಾಡಿಸಿಕೊಳ್ಳಲು ಈ ಕಾನೂನು ಅವಕಾಶ ಮಾಡಿಕೊಟ್ಟಿದೆ. ಇದರಿಂದ ಹೆಂಗಸಿನ ಆರೋಗ್ಯಕ್ಕೆ ಯಾವುದೇ ರೀತಿಯ ಅನಾಹುತಗಳು, ತೊಂದರೆಗಳು ಆಗುವುದಿಲ್ಲ.[೧೨]

ಈ ರೀತಿಯಾಗಿ ಕುಟುಂಬ ಯೋಜನೆಯನ್ನು ಅಭಿವೃದ್ಧಿ ಪಡಿಸುವಲ್ಲಿ ಸರ್ಕಾರವು ಈ ಎಲ್ಲ ವಿಧಾನಗಳನ್ನು ಅಳವಡಿಸಿಕೊಂಡಿದ್ದಲ್ಲದೆ ಇನ್ನೂ ಹಲವಾರು ಬೇರೆ ಬೇರೆ ರೀತಿಯ ಚುಚ್ಚುಮದ್ದುಗಳನ್ನು ಹೆಂಗಸಿನ ಆರೋಗ್ಯದ ಮೇಲೆ ಬಲವಾಗಿ ದುಷ್ಪಾರಿಣಾಮವನ್ನು ಬೀರುವಂತೆ ಮಾಡಿದವುಗಳು ಸಹ ಕಂಡುಬರುತ್ತವೆ.

ಗರ್ಭನಿರೋಧಕ ಚುಚ್ಚು ಮದ್ದುಗಳು ಹೆಂಗಸಿನ ಆರೋಗ್ಯದ ಮೇಲೆ ಯಾವುದೇ ಪರಿಣಾಮವನ್ನು ಬೀರುವುದಿಲ್ಲ ಎನ್ನುವುದಕ್ಕೆ ಆಧಾರಗಳಿಲ್ಲ. ಜನಸಂಖ್ಯಾ ನಿಯಂತ್ರಣಕ್ಕಾಗಿ ಈಗಾಗಲೇ ಬಹಳಷ್ಟು

ಗರ್ಭನಿರೋಧಕ ಸಾಧನಗಳು ವಿವಿಧ ದೇಶಗಳಲ್ಲಿ ಅದರಲ್ಲೂ ಮುಖ್ಯವಾಗಿ ಅಭಿವೃದ್ಧಿಶೀಲ ಮತ್ತು ಬಡರಾಷ್ಟ್ರಗಳಲ್ಲಿ ಬಳಕೆಯಲ್ಲಿರುವುದು ಕಂಡುಬರುತ್ತವೆ. ಇವುಗಳಲ್ಲಿ ಕೆಲವನ್ನು ಉದಾಹರಿಸಬಹುದು.

ಚುಚ್ಚುಮದ್ದಿನ ರೂಪದಲ್ಲಿರುವ ಗರ್ಭನಿರೋಧಕಗಳಾದ ಡಿ.ಎಂ.ಪಿ.ಎ(D M P A) (Depotme droxy progesterone aceatate) ನೆಟ್.ಎನ್ (NET-EN) (Norethisterone oenathate) ಮತ್ತು ಡಿಪೊ ಪ್ರೊವೇರಾ(Depo provera)

ಚರ್ಮದ ಒಳಗೆ ಸೇರಿಸಬಹುದಾದ ಗರ್ಭನಿರೋಧಕ ನಾರ್ ಪ್ಲಾಂಟ್

ಶಸ್ತ್ರಚಿಕಿತ್ಸೆಗೊಳಗಾಗದೆ ಗರ್ಭಪಾತ ಮಾಡಿಸಬಲ್ಲ ಗುಳಿಗೆಗಳು ಮತ್ತು

ಶಾಶ್ವತವಾಗಿ ಸಂತಾನಹರಣ ಮಾಡಿಸಬಲ್ಲ ಗರ್ಭಕೋಶದಲ್ಲಿಡಬಹುದಾದ ಮದ್ದು(ಕ್ವಿನಾ ಕ್ರೈನ್)[೧೮]

ಡಿ.ಎಂ.ಪಿ.ಎ ಎನ್ನುವ ಚುಚ್ಚುಮದ್ದು ಮೂರು ತಿಂಗಳುಗಳವರೆಗೂ ಗರ್ಭಧಾರಣೆಯಿಂದ ರಕ್ಷಣೆ ನೀಡುತ್ತದೆ. ಈ ವಿಧಾನವು ಅತ್ಯಂತ ಪರಿಣಾಮಕಾರಿಯಾಗಿದ್ದರೂ ಸಹ ಮುಟ್ಟಿನ ಸ್ರಾವದಲ್ಲಿ ಏರುಪೇರುಗಳನ್ನುಂಟು ಮಾಡಿಮುಟ್ಟನ್ನು ತಾತ್ಕಾಲಿಕವಾಗಿ ನಿಲ್ಲುವಂತೆ ಮಾಡುತ್ತದೆ. ಈ ಚುಚ್ಚು ಮದ್ದನ್ನು ಬಳಸುತ್ತಿದ್ದ ಮಹಿಳೆಯರು ಉಪಯೋಗಿಸುವುದನ್ನು ನಿಲ್ಲಿಸಿದರೆ, ಅವರು ಮತ್ತೆ ಫಲವಂತಿಕೆಯನ್ನು ತುಂಬಾ ವಿಳಂಬವಾಗಿ ಪಡೆಯುತ್ತಾರೆಂಬುದು ತಿಳಿದುಬರುತ್ತದೆ.

ನೆಟ್.ಎನ್ (Net-en) ಗರ್ಭನಿರೋಧಕ ಈ ಚುಚುಮದ್ದು ಸುಮಾರು ಎರಡು ತಿಂಗಳುಗಳವರೆಗೆ ಮಾತ್ರ ಗರ್ಭನಿರೋಧಕ ರಕ್ಷಣೆಯನ್ನು ನೀಡುತ್ತದೆ. ಇದನ್ನು ಒಂದು ವರ್ಷದವರೆಗೆ ಬಳಸಿದರೆ ಸ್ತ್ರೀಯರಲ್ಲಿ ಶರೀರದ ತೂಕ ಹೆಚ್ಚಾಗುತ್ತದೆ ಮತ್ತು ಅನಿಯಮಿತವಾದ ಮುಟ್ಟಿನ ರಕ್ತಸ್ರಾವ ಉಂಟಾಗುತ್ತದೆಂದು ತಿಳಿದುಬಂದಿದೆ. ಭಾರತದ ಒಂದು ಸಮೀಕ್ಷೆಯ ಪ್ರಕಾರ ನೆಟ್.ಎನ್ ಗರ್ಭನಿರೋಧಕ ಚುಚ್ಚು ಮದ್ದು ಮೂವತ್ ನಾಲ್ಕು ದೇಶಗಳಲ್ಲಿ ಬಳಕೆಯಲ್ಲಿರುವುದು ತಿಳಿದುಬರುತ್ತದೆ. ಇದನ್ನು ಬಳಸುವ ದೇಶಗಳು ಬಡರಾಷ್ಟ್ರಗಳಾಗಿವೆ. ಈ ಗರ್ಭನಿರೋಧಕ ಚುಚ್ಚುಮದ್ದು, ಗರ್ಭಕೋಶದ ಬಾಯಿಯ ಬಳಿಯಿರುವ ಲೋಳೆಯನ್ನು(Mucus) ಗಟ್ಟಿಗೊಳಿಸುವುದರಿಂದ ವೀರ್ಯಾಣುಗಳು ಚಲಿಸುವುದು ಕಷ್ಟವಾಗುತ್ತದೆ. ಜೊತೆಗೆ ಫಲಗೊಂಡು ಅಂಡಾಣುವು ಕೂಡ ಗರ್ಭಕೋಶವನ್ನು ಪ್ರವೇಶಿಸುವುದು ಸಾಧ್ಯವಿಲ್ಲ.[೧೯]

ನೆಟ್.ಎನ್ ಚುಚ್ಚುಮದ್ದನ್ನು ಉಪಯೋಗಿಸುವ ಮಹಿಳೆಯರು ಹೆರಿಗೆಯಾದ ಆರು ತಿಂಗಳವರೆಗೆ ಮಗುವಿಗೆ ಎದೆಹಾಲುಣಿಸುವುಂತಿಲ್ಲ. ಆರು ತಿಂಗಳ ಹಸುಗೂಸು ತಾಯಿಯ ಹಾಲಿಲ್ಲದೆ ಸೋಂಕು ರೋಗಗಳಿಂದ ನರಳುವ ಪರಿಸ್ಥಿತಿ ಒದಗಿಬರುತ್ತದೆ. ತಾಯಿ ಹೆರಿಗೆಯಾದ ಮೊದಲ ಎರಡು-ಮೂರು

ದಿನಗಳು ದ್ರವಿಸುವ ಕೊಲೆಸ್ಟ್ರಾಂ ನೀಡುವ ಸೋಂಕು ನಿರೋಧಕ ರಕ್ಷೆ ಸಹ ಮಗುವಿಗೆ ಸಿಗುವಂತಿಲ್ಲ. ಹಾಗೆಯೇ ಈ ಹಾಲನ್ನು ಕುಡಿಸಿದರೆ ಮಗುವು ಸೋಂಕು ರೋಗಗಳಿಗೆ ತುತ್ತಾಗುವ ಅವಕಾಶವಿರುತ್ತದೆ.

ಒಟ್ಟಿನಲ್ಲಿ ಈ ಚುಚ್ಚುಮದ್ದು ಮಹಿಳೆಯ ಆರೋಗ್ಯದ ಮೇಲೆ ಅಘಾತವಾದ ಪರಿಣಾಮವನ್ನು ಬೀರಿದೆ ಎಂದು ಮತ್ತು ಹುಟ್ಟಿದ ಮಗುವಿನ ಮೇಲೆ ಸಹ ಪರಿಣಾಮ ಬೀರಬಲ್ಲದು. ಆದರೂ ಪ್ರಭುತ್ವವು ಇದನ್ನು ಬಳಕೆ ಮಾಡಲು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದರಿಂದ ಮಹಿಳೆಯ ಆರೋಗ್ಯದ ಮೇಲೆ ದುಷ್ಪಾರಿಣಾಮ ಬೀರುವುದು ಕಂಡುಬರುತ್ತದೆ.

ಡಿಪೋಪ್ರೊವೇರಾ **(Depo-provera):** ಡಿಪೋಪ್ರೊವೇರಾ ಒಂದು ವಿವಾದಾತ್ಮಕ ಚುಚ್ಚುಮದ್ದು ಇದನ್ನು ಮೊಟ್ಟ ಮೊದಲಿಗೆ ಏಳು ವರ್ಷಗಳ ಹಿಂದೆ ಹದಿನಾರು ಬೀಗಲ್ ಜಾತಿ ನಾಯಿಗಳ ಮೇಲೆ ನಂತರ ರಿಸೆಸ್ ಕೋತಿಗಳ ಮೇಲೆ ಪ್ರಯೋಗ ಮಾಡಿ ಫಲಿತಾಂಶಗಳನ್ನು ಕಂಡುಕೊಂಡು ಇದರಿಂದ ಮನುಷ್ಯರಿಗೆ ಯಾವುದೇ ರೀತಿಯ ತೊಂದರೆಯಿಲ್ಲವೆಂದು ಭರವಸೆ ನೀಡಿ ಈ ಗರ್ಭನಿರೋಧಕ ಚುಚ್ಚು ಮದ್ದನ್ನು ಮೂರನೇ ವಿಶ್ವದ ದೇಶಗಳಲ್ಲಿ ಮಾರುಕಟ್ಟೆಗೆ ತರುವಲ್ಲಿ ಪ್ರಯತ್ನಿಸಿದರು. ಹಾಗೆಯೇ ನಾರ್ ಪ್ಲಾಂಟ್ ಗರ್ಭನಿರೋಧಕವು ಸಹ ಚರ್ಮದಡಿಯಲ್ಲಿ ಸೇರಿಸಿಡಲು ಉಪಯೋಗಿಸುತ್ತಿದ್ದರು. ಇದನ್ನು ವೈದ್ಯರ ಅನುಮತಿಯಿಂದಲೇ ಬಳಕೆ ಮಾಡಬೇಕಾಗಿತ್ತು. ಹೆಚ್ಚಾಗಿ ರಕ್ತಸ್ರಾವವುಳ್ಳ ಮಹಿಳೆಯರು ಹಾಗೂ ಸ್ತನ ಕ್ಯಾನ್ಸರ್ ಇದೆ ಎಂದು ಅನುಮಾನವುಳ್ಳವರು, ಸಕ್ಕರೆ ಕಾಯಿಲೆಯುಳ್ಳವರು, ರಕ್ತದ ಒತ್ತಡವುಳ್ಳವರು, ಅಲ್ಲದೆ ಮಗುವಿಗೆ ಹಾಲುಣಿಸುವ ತಾಯಿಯರಿಗೆ ಧೂಮಪಾನಿ ಮಹಿಳೆಯರಿಗೆ, ಇತರೆ ಔಷಧಿಗಳ ಬಳಕೆ ಮಾಡಿಕೊಳ್ಳುವವರಿಗೆ ಈ ಗರ್ಭನಿರೋಧಕ ಮದ್ದು ಒಳ್ಳೆಯದಲ್ಲ. ಇದನ್ನು ಬಳಸಬೇಕಾದರೆ, ಅವಶ್ಯಕ ವಾಗಿ ವೈದ್ಯಕೀಯ ಪರೀಕ್ಷೆ ಬೇಕೆಬೇಕಾಗುತ್ತದೆ. ವೈದ್ಯಕೀಯ ಪರೀಕ್ಷೆ ಇಲ್ಲದಿದ್ದರೆ, ಇದನ್ನು ಉಪಯೋಗಿಸುವುದು ಅತ್ಯಂತ ಅಪಾಯಕಾರಿಯಾದುದು ಎಂದು ಹೇಳಬಹುದು.

ಕೃತಕವಾಗಿಯೇ ತಯಾರಿಸಲ್ಪಟ್ಟ ಲೆವೆನೋ ಜೆಸ್ಟಿರಾಲ್ ಚೋದನಿಯವನ್ನು ತುಂಬಿರುವ ಉದ್ದನೆಯ ಮಾತ್ರೆಯ ರೂಪದ(capsule) ನಾರ್ ಪ್ಲಾಂಟ್ ನ್ನು ಮುಂದೋಳು ಅಥವಾ ಮೇಲಿನ ತೋಳಿನ ಚರ್ಮದಡಿಯಲ್ಲಿ ಅಳವಡಿಸಲಾಗುತ್ತದೆ. ಇದರ ಕಾಲಾವಧಿ ಐದು ವರ್ಷಗಳು ಮಾತ್ರ ನಂತರ ತೆಗೆದುಹಾಕಬೇಕು ಹಾಗೆ ಮುಂದುವರೆಸಿದರೆ, ಬೇಡದ ಬಸಿರು ಬೆಳೆಯಲಾರಂಬಿಸುತ್ತದೆ. ಕೆಲವು ಸಲ ಅಂಡವಾಹಿ ನಾಳದಲ್ಲಿ ಬೆಳೆಯುವ ಅಪಾಯವಿದೆ.[19]

ಸಂತಾನ ನಿರೋಧ ವಿಧಾನಗಳ ಬಗ್ಗೆ ಸಂಪೂರ್ಣಮಾಹಿತಿ ಮತ್ತು ಅವುಗಳ ಲಭ್ಯತೆ, ಮಹಿಳೆಯರ ಸಂಪೂರ್ಣ ಹಕ್ಕು. ಇವುಗಳನ್ನು ಬಳಸುವಲ್ಲಿ, ಯಶಸ್ವಿಗೊಳಿಸುವಲ್ಲಿ, ಸಂತಾನನಿರೋಧ ವಿಧಾನಗಳ ಸಾಧಕ ಬಾಧಕಗಳ ಬಗ್ಗೆ ಸಂಪೂರ್ಣ ಮಾಹಿತಿ ಮಹಿಳೆಯರಿಗೆ ಇರಬೇಕು. ಸಂತಾನ ನಿಯಂತ್ರಣದ

ಆಯ್ಕೆ ಸ್ವಾತಂತ್ರ್ಯವನ್ನು ಮಹಿಳೆಗೆ ಒದಗಿಸಿಕೊಡಬೇಕು. ಸರ್ಕಾರದ ಕುಟುಂಬ ಯೋಜನಾ ಕಾರ್ಯಕ್ರಮಗಳಲ್ಲಿ ಜನನ ನಿಯಂತ್ರಣವೇ ಮುಖ್ಯವಾಗಿರುತ್ತದೆ. ಸಂತಾನ ನಿಯಂತ್ರಣದ ಹಕ್ಕುಗಳು ಮಹಿಳೆಯರಿಗೆ ನೀಡಿಲ್ಲ. ಅವಳಿಗೆ ಅರ್ಥವಾಗದ ಶಕ್ತಿಗಳು ಕುಟುಂಬದ ಒಳಗೆ ಮತ್ತು ಹೊರಗೆ ಅವಳನ್ನು ನಿಯಂತ್ರಿಸಿ ಈಗಿರುವ ವ್ಯವಸ್ಥೆಯಲ್ಲಿ ಜನನ ನಿಯಂತ್ರಣ, ಗರ್ಭಪಾತ, ಕೊನೆಗೆ ತಾಯ್ತನದ ಆರೈಕೆ ಹೀಗೆ ಹೊಸ ಚಿಂತನೆಗಳಿಲ್ಲದೆ, ಹಿಂದಿನಿಂದ ಬಂದ ಪುರುಷ ಹಿತಾಸಕ್ತಿಯ ಸಂಪ್ರದಾಯಗಳನ್ನು ಹೊಸ ವಿಧಾನಗಳ ತಾಂತ್ರಿಕತೆಯ ಒಳಗೆ ಮುಂದುವರಿಸಿಕೊಂಡು ಹೋಗುವಂತೆ ಮಾಡಿವೆ.[೧೬]

ಕುಟುಂಬ ಯೋಜನೆಗಳ ಮೂಲಕ ಶಕ್ತಿಶಾಲಿಯಾದ ಪುರುಷಪ್ರಧಾನ ಸಂರಚನೆಗಳು ಮತ್ತು ಮೌಲ್ಯಗಳು ಮಹಿಳೆಯರ ಸಂತಾನೋತ್ಪತ್ತಿಯ ಮೇಲೆ ತಮಗಿರುವ ಹಿಡಿತವನ್ನು ಬಿಗಿಗೊಳಿಸಿವೆ. ಯಾಂತ್ರೀಕರಣ, ನಿರುದ್ಯೋಗ ಮಕ್ಕಳನ್ನು ಹೇರಲೇಬೇಕೆಂಬ ಸಾಮಾಜಿಕ ನಿರೀಕ್ಷೆಯ ಭಾರವು ಮಹಿಳೆಯ ಆರೋಗ್ಯದ ಮೇಲೆ ಮತ್ತು ಅವಳ ದುಡಿಮೆಗೆ ಇರುವ ಮಾರುಕಟ್ಟೆಯನ್ನು ಆಕ್ರಮಿಸಿಕೊಂಡು ಅವಳಿಗಿರುವ ಮೂಲಭೂತ ಸೌಕರ್ಯಗಳ ಮೇಲೆ ದುಷ್ಪಾರಿಣಾಮಗಳು ಬೀರುತ್ತಿವೆ. ಕೌಟುಂಬಿಕ ಪಾತ್ರಗಳು ಹೆಣ್ಣಿನ ಸ್ಥಾನಮಾನ ಮತ್ತು ರಾಜಕೀಯ ಹಿತಾಸಕ್ತಿಗಳು ಅವಳ ಸಂತಾನೋತ್ಪತ್ತಿಯಲ್ಲಿ ನಿರ್ಣಾಯಕ ಅಂಶಗಳಾಗಿ ಕೆಲಸ ಮಾಡುತ್ತಿವೆ. ವೈದ್ಯಕೀಯ ರಂಗದಲ್ಲಿ ಕಾರ್ಯನೀತಿ ನಿರೂಪಣೆಯಲ್ಲಿ ನಿರ್ಣಾಯಕ ಪಾತ್ರಗಳನ್ನು ಪುರುಷರೆ ನಿರ್ವಹಿಸಿ ಮಹಿಳೆಗೆ ಎಷ್ಟು ಮಕ್ಕಳಿರಬೇಕು ಮತ್ತು ಅವಳಿಗೆ ಬಸಿರನ್ನು ತೆಗೆದು ಹಾಕುವ ಹಕ್ಕು ಇರಬೇಕೋ ಬೇಡವೋ ಎಂಬುದನ್ನೆಲ್ಲ ಪುರುಷರೇ ನಿರ್ಧರಿಸುತ್ತಾರೆ.[೧೭]

ಹೀಗೆ ಜನಸಂಖ್ಯೆಯನ್ನು ನಿಯಂತ್ರಿಸುವ ಗುಂಗಿನಲ್ಲಿ ಆವೇಶದಲ್ಲಿ ಮಹಿಳೆ ಯಾವ ಬಗೆಯ ಗರ್ಭನಿರೋಧಕಗಳನ್ನು ಬಳಸಬೇಕು ಎನ್ನುವ ಸಮಸ್ಯೆಯು ಮಹಿಳೆಯರಲ್ಲಿ ನೆಲೆಯೂರಿದೆ. ಈ ರೀತಿಯ ಗರ್ಭನಿರೋಧಕಗಳ ಬಳಕೆಯಿಂದ ಮಹಿಳೆಯ ಆರೋಗ್ಯದ ಮೇಲೆ ಆಘಾತವಾದ ಪರಿಣಾಮ ಬೀರುತ್ತದೆ ಎಂದು ಹೇಳಬಹುದು.

ಪುರುಷ ಸಂತಾನ ನಿರೋಧ ಶಸ್ತ್ರ ಚಿಕಿತ್ಸೆಯು ಸ್ತ್ರೀಯರ ಶಸ್ತ್ರಚಿಕಿತ್ಸೆಗಳಿಗೆ ಹೋಲಿಸಿದಲ್ಲಿ ಸ್ತ್ರೀಯರಿಗಿಂತ ಸುಲಭವಾದ ಶಸ್ತ್ರಚಿಕಿತ್ಸೆಯಾಗಿದೆ. ಈ ಶಸ್ತ್ರಚಿಕಿತ್ಸೆಯ ನಂತರ ಪುರುಷನ ಶಕ್ತಿಗಾಗಲಿ, ಅವನ ಪೌರುಷಕ್ಕಾಗಲಿ, ಲೈಂಗಿಕ ಸುಖಕ್ಕಾಗಲೀ ಅಥವಾ ಯಾವುದೇ ರೀತಿಯ ಚಟುವಟಿಕೆಗಳಿಗಾಗಲೀ ದಕ್ಕೆ ಬರುವುದಿಲ್ಲ. ಆದರೂ ಸಮಾಜವು ಸಂತಾನಹರಣ ಶಸ್ತ್ರಚಿಕಿತ್ಸೆಯನ್ನು ಪುರುಷತ್ವದ ನಾಶವೆಂದೇ ಭಾವಿಸಿದೆ. ಸಂತಾನಹರಣ ಶಸ್ತ್ರಚಿಕಿತ್ಸೆಯನ್ನು ಮಾಡಿಕೊಂಡ ಪುರುಷನನ್ನು 'ಬೀಜ ಹೊಡೆಸಿಕೊಂಡ ಹೋರಿಗೆ' ಹೋಲಿಸಲಾಗಿದೆ.[೧೮] ಬೀಜ ಹೊಡೆಸಿಕೊಂಡ ಹೋರಿಯ ಮೈಯಲ್ಲಿ ಸೊಕ್ಕು ಯಾವ ರೀತಿಯಾಗಿ ಕಡಿಮೆಯಾಗುತ್ತದೊ ಅದೇ ರೀತಿ ಮನುಷ್ಯನ ಶಕ್ತಿಯು ಕಡಿಮೆಯಾಗುತ್ತದೆ ಎನ್ನುವ

ಮನೋಭಾವವು ಎಷ್ಟೋ ಮಂದಿ ಮಹಿಳೆಯರಲ್ಲಿ ಮನೆಮಾಡಿಕೊಂಡಿದೆ. ಉದರ ದರ್ಶಕ ಸಂತಾನಹರಣ ಶಸ್ತ್ರ ಚಿಕಿತ್ಸೆಯು, ಟುಬೆಕ್ಟಮಿ, ಕಾಪರ್ ಟೀ ಅಳವಡಿಕೆ ನುಂಗುವ ಮಾತ್ರೆಗಳು ಮತ್ತು ಇತರೆ ಸಾಧನೆಗಳು ಹೆಚ್ಚು ಚಲಾವಣೆಯಲ್ಲಿದ್ದು, ಕಾಂಡೋಮ್ ಬಳಕೆ ಮತ್ತು ಪುರುಷರಲ್ಲಿ ಮಾಡುವ ವಾಸೆಕ್ಟಮಿಗಳಷ್ಟೇ ಪುರುಷರಿಗೆ ಸೀಮಿತವಾಗಿದೆ. ಆದರೂ ಇವುಗಳ ಪ್ರಯೋಗ ಹಾಗೂ ಅಂಕಿ ಅಂಶಗಳ ಸಂಖ್ಯೆ ಕಡಿಮೆಯಾಗಿಯೇ ಉಳಿದುಕೊಂಡಿದೆ. ನಿರೋಧ್ ಬಳಸುವಷ್ಟು ಸಹನೆ ನನ್ನ ಗಂಡನಲಿಲ್ಲ. ಡಾಕ್ಟ್ರೇ ಅವರಿಗೆ ನಿರೋಧ್ ಬಳಸುವಲ್ಲಿ ಸಿಟ್ಟು ಬರುತ್ತೆ ಆದುದರಿಂದ ನನಗೆ ಮಾತ್ರೆ ಕೊಡಿ ಅಥವಾ ಕಾಪರ್ ಟೀ ಸಾಧನವನ್ನು ಹಾಕಿ ಎಂದು ಹೆಂಗಸರೇ ವೈದ್ಯರ ಬಳಿ ಈ ಮಾತುಗಳನ್ನು ಆಡುತ್ತಿರುತ್ತಾರೆ ಇನ್ನೂ ಕೆಲವರು 'ಆಪರೇಷನ್ ಮಾಡಿಸಿಕೊಂಡ್ರೆ ನನ್ನ ಗಂಡನ ಪೌರಷತ್ವ ಹೋಗುತ್ತಂತೆ ಕೆಲ್ಸ ಮಾಡೋಕೆ ಅವರಿಗೆ ಆಗೋಲ್ಲ... ನನಗೆ ಆಪರೇಷನ್ ಮಾಡಿಬಿಡಿ' ಎಂದು ಮಹಿಳೆಯರೆ ತಮ್ಮ ಗಂಡಂದಿರ ಪರವಾಗಿ ಮಾತನಾಡುವುದು ಕಂಡುಬರುತ್ತದೆ.[೧೯]

ಪುರುಷ ಶಸ್ತ್ರ ಚಿಕಿತ್ಸೆಯು ನಿಜವಾಗಿಯೂ ಸ್ತ್ರೀಯರಿಗಿಂತ ಸರಳ ಮತ್ತು ಪರಿಣಾಮಕಾರಿ ಈ ಶಸ್ತ್ರಚಿಕಿತ್ಸೆಯಲ್ಲಿ ವೀರ್ಯನಾಳವನ್ನು ಸ್ವಲ್ಪಕತ್ತರಿಸಿ ಬೀಜ ಕೋಶದಲ್ಲಿ ಉತ್ಪತ್ತಿಯಾದ ವೀರ್ಯಾಣು ವೀರ್ಯಕೋಶವನ್ನು ಪ್ರವೇಶಿಸದಂತೆ ಮಾಡುತ್ತದೆ. ಆದರೆ ಲೈಂಗಿಕ ಕ್ರಿಯೆಯಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬರುವುದಿಲ್ಲ. ಅಲ್ಲದೆ ಇದು ಮುಖ್ಯವಾಗಿ ದೇಹದ ಹೊರಗೆ ಮಾಡುವಂತ ಸಣ್ಣಶಸ್ತ್ರಚಿಕಿತ್ಸೆ ಮಹಿಳೆಯರ ಚಿಕಿತ್ಸೆಯಂತೆ ದೇಹದೊಳಗೆ ಮಾಡುವುದಿಲ್ಲ. ಈ ಚಿಕಿತ್ಸೆಯ ನಂತರ ಪುರುಷರು ಆಸ್ಪತ್ರೆಯಲ್ಲಿರುವ ಅವಶ್ಯಕತೆಯಿಲ್ಲ. ಅಂದಿನ ದಿನವೇ ಮನೆಗೆ ತೆರಳಬಹುದು. ತಮಗೆ ಮಕ್ಕಳು ಬೇಕೆಂದಾಗ, ಅವಶ್ಯಕತೆಯಿದ್ದಾಗ ಸರಳವಾಗಿ ಮಹಿಳೆಯರಿಗಿಂತಲೂ ವಾಸೆಕ್ಟಮಿಯಲ್ಲಿ ಸುಲಭವಾಗಿ ಮರುಜೋಡಣೆ ಮಾಡಬಹುದು. ಜೊತೆಗೆ ವೈಜ್ಞಾನಿಕವಾಗಿ ಮಕ್ಕಳನ್ನು ಪಡೆಯಬಹುದು. ಆದರೆ ಇದನ್ನು ಸಮಾಜವು ಒಪ್ಪಿಕೊಳ್ಳಲು ಸಿದ್ಧವಿರುವುದಿಲ್ಲ. ಶಸ್ತ್ರಚಿಕಿತ್ಸೆಯನ್ನು ಪಡೆದುಕೊಂಡ ಪುರುಷರಲ್ಲಿ ಶಕ್ತಿ ಕುಂದುತ್ತದೆ ಎನ್ನುವ ತಪ್ಪುಕಲ್ಪನೆಯಿಂದ ಪುರುಷರು ವಾಸೆಕ್ಟಮಿಯನ್ನು ಮಾಡಿಸುವಲ್ಲಿ ಹಿಂಜರಿಯುತ್ತಾರೆ ಎಂಬುದಕ್ಕೆ ಕೆಳಗಿನವುಗಳು ಸಹಕಾರಿಯಾಗಿವೆ ಎಂದು ಹೇಳಬಹುದು.

೧. ಪುರುಷರು ಎಂದಿನಂತೆ ಸ್ತ್ರೀಯರನ್ನು ಶಸ್ತ್ರಚಿಕಿತ್ಸೆಗೆ ಮುಂದೂಡುತ್ತಾರೆ.

೨. ಏನೆ ತೊಂದರೆಯಾದರೂ ನಮಗೆ ಆಗಲಿ ಎನ್ನುವ ಅಭಿಪ್ರಾಯವು ಮಹಿಳೆಯರಲ್ಲಿ ಅವಿತುಕೊಂಡಿದೆ.

೩. ಆರೋಗ್ಯ ಇಲಾಖೆಯಲ್ಲಿ ಮಹಿಳಾ ಆರೋಗ್ಯ ಸಹಾಯಕಿಯ ಸಂಖ್ಯೆ ಹೆಚ್ಚಾಗಿರುತ್ತದೆ. ಗರ್ಭಧಾರಣೆಯಿಂದ ಹಿಡಿದು ಹೆರಿಗೆಯವರೆಗೆ ಮಹಿಳೆಯರ ಸಂಪರ್ಕವೇ ಹೆಚ್ಚಾಗಿರುವುದರಿಂದ

ಶಸ್ತ್ರಚಿಕಿತ್ಸೆಗೆ ಮನವೊಲಿಸುವುದು ಕಷ್ಟವೆನಿಸುವುದಿಲ್ಲ. ಅಲ್ಲದೆ ಪುರುಷರಿಗೆ ವಾಸೆಕ್ಟಮಿಯ ಬಗ್ಗೆ ವಿವರಿಸುವುದು ಮಹಿಳಾ ಕಾರ್ಯಕರ್ತೆಯರಿಂದ ಸಾಧ್ಯವಿರುವುದಿಲ್ಲ. ಈ ಎಲ್ಲ ಕಾರಣಗಳಿಂದ ಮಹಿಳೆಯರ ಸಂತಾನಹರಣಶಸ್ತ್ರ ಚಿಕಿತ್ಸೆಯು ಹೆಚ್ಚಾಗಿರುವುದು ಕಂಡುಬರುತ್ತದೆ.[೨೦]

ಒಟ್ಟಾರೆಯಾಗಿ ಪುರುಷರಿಗೆ ಸಂತಾನಹರಣ ಶಸ್ತ್ರಚಿಕಿತ್ಸೆಯು ಎಷ್ಟು ಸುಲಭವಾದರೂ ಇದನ್ನು ಅಳವಡಿಸಿಕೊಳ್ಳುವುದಿಲ್ಲ. ಏಕೆಂದರೆ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಸಂತಾನ ಹರಣ ಚಿಕಿತ್ಸೆಯನ್ನು ಮಾಡಿಸಿಕೊಂಡರೆ, ಪುರುಷನನ್ನು ಕೀಳಾಗಿ ಕಾಣುವುದು ಅವನ ದೇಹದಲ್ಲಿ ಶಕ್ತಿಯು ಕುಂದುತ್ತದೆ. ಜೊತೆಗೆ ಷಂಡತ್ವವು ಆವರಿಸಿಕೊಳ್ಳುತ್ತದೆ ಎನ್ನುವ ಮನೋಭಾವವನ್ನು ಪುರುಷರು ಹೊಂದಿರುತ್ತಾರೆ. ಆದುದರಿಂದ ಸಂತಾನಹರಣ ಚಿಕಿತ್ಸೆಯನ್ನು ಮಾಡಿಸಿಕೊಳ್ಳುವಲ್ಲಿ ಮುಂದಾಳತ್ವವನ್ನು ವಹಿಸುವುದಿಲ್ಲ ಹಿಂಜರಿಕೆಯನ್ನು ಹಾಕುವುದು ಕಂಡುಬರುತ್ತದೆ.

ಸಂತಾನಹರಣ ಶಸ್ತ್ರಚಿಕಿತ್ಸೆಯನ್ನು ಕುಟುಂಬ ಯೋಜನೆಯ ಸಲುವಾಗಿಯಾದರೂ ಮಾಡಿಸಿಕೊಳ್ಳ ಬೇಕೆಂದರೆ, ಸ್ತ್ರೀಯರಿಗೆ ಮೀಸಲೆನ್ನುವಂತೆ ಅವರಿಗೆ ಬಿಟ್ಟುಕೊಡುವರು. ಕುಟುಂಬ ಯೋಜನೆಯು ಹೆಚ್ಚಾಗಿ ಮಹಿಳೆಯರ ಮೇಲೆಯೇ ಅವಲಂಬಿತವಾಗಿರುವುದು ಕಂಡುಬರುತ್ತದೆ. ಸಂತಾನಹರಣ ಶಸ್ತ್ರ ಚಿಕಿತ್ಸೆಯಿಂದ ಮಹಿಳೆಯರ ಆರೋಗ್ಯದ ಮೇಲೆ ಎಂತಹ ದುಷ್ಪಾರಿಣಾಮ ಬೀರುತ್ತದೆಂಬುದು ಎಲ್ಲ ಪುರುಷ ಪ್ರಧಾನರಿಗೂ ತಿಳಿದಂತ ವಿಷಯ ಆದರೂ ಈ ಸಂತಾನಹರಣ ಚಿಕಿತ್ಸೆಯನ್ನು ಮಹಿಳೆಯರ ಮೇಲೆಯೇ ಪ್ರಯೋಗಿಸುತ್ತಾರೆ. ಮಾಡಿದ ಪ್ರಯೋಗದಲ್ಲಿ ವ್ಯತ್ಯಾಸಗಳು ಕಂಡುಬಂದರೆ, ಇವೆಲ್ಲವುಗಳನ್ನು ಸುಧಾರಿಸಿಕೊಂಡು ಹೋಗುವ ಹೊಣೆಗಾರಿಕೆಯು ಪುರುಷರದ್ದಾಗಿರುತ್ತದೆ ಎನ್ನುವ ಮನೋಭಾವವು ಪಿತೃಪ್ರಧಾನ ಸಮಾಜವ್ಯವಸ್ಥೆಯಲ್ಲಿ ಸ್ಥಿರವಾಗಿರುವುದು ಕಂಡುಬರುತ್ತದೆ. ಆದುದರಿಂದ ಕುಟುಂಬ ಯೋಜನೆಯ ಕಾರ್ಯಕ್ರಮವನ್ನು ನಿಯಂತ್ರಿಸುವಲ್ಲಿ ಹೆಚ್ಚಾಗಿ ಮಹಿಳೆಯರಿಗೆ ಗರ್ಭನಿರೋಧಕ ಚುಚ್ಚುಮದ್ದುಗಳು, ಗುಳಿಗೆಗಳನ್ನು ಉಪಯೋಗಿಸುವಂತೆ ಸಮಾಜವು ನಿರ್ಬಂಧನೆಗಳನ್ನು ಹೇರುವಂತೆ ಮಾಡಿದೆ.

ಕುಟುಂಬ ಯೋಜನೆಯನ್ನು ನಿಯಂತ್ರಿಸುವಲ್ಲಿ ಸ್ತ್ರೀ-ಪುರುಷರ ಪಾತ್ರವು ಸಮಾನವಾಗಿಯೇ ಇರುತ್ತದೆ. ಆದರೆ ಪುರುಷರು ಕುಟುಂಬಯೋಜನೆಯ ಕಡೆ ಗಮನಕೊಡದೆ, ಹೆಚ್ಚಾಗಿ ಸ್ತ್ರೀಯರ ಮೇಲೆ ಹೊಣೆ ಹೇರಿ ಕುಟುಂಬ ಯೋಜನೆಯನ್ನು ಪಡೆದುಕೊಳ್ಳುವಂತೆ ಪ್ರೇರೇಪಿಸುತ್ತಾರೆ. ಮಹಿಳೆಯರಿಗೆ ಈ ಶಸ್ತ್ರಚಿಕಿತ್ಸೆಯು ಇಷ್ಟವಿಲ್ಲದೆ ಇದ್ದರೂ ಒತ್ತಾಯ ಪೂರ್ವಕವಾಗಿಯಾದರೂ ವೈದ್ಯರಲ್ಲಿಗೆ ಕರೆದುಕೊಂಡು ಹೋಗಿ ಸಂತಾನಹರಣ ಚಿಕಿತ್ಸೆಯನ್ನು ಮಾಡಿಸುವಲ್ಲಿ ಯಾವುದೇ ರೀತಿಯಾಗಿ ಹಿಂದುಳಿಯುತ್ತಿರಲಿಲ್ಲ. ತಮಗೆ ಬೇಕಾದ ಇಬ್ಬರು ಮಕ್ಕಳು ಜನಿಸಿದ ನಂತರ ಅವಳ ಒಪ್ಪಿಗೆಯಿಲ್ಲದೆ ಕುಟುಂಬದ ಯಜಮಾನರು,

ಗಂಡ ಅತ್ತೆ ಎಲ್ಲರೂ ಕುಟುಂಬ ಯೋಜನೆಯನ್ನು ಮಾಡಿಸುವ ನಿರ್ಧಾರವನ್ನು ಕೈಗೊಳ್ಳುತ್ತಾರೆ. ಇದಕ್ಕೆ ಹೆಂಡತಿಯ ಅನುಮತಿಯನ್ನು ಲೆಕ್ಕಿಸುವುದಿಲ್ಲ. ಹೆಂಡತಿಯು ಇದಕ್ಕೆ ತದ್ವಿರುದ್ಧವಾಗಿ ನೀನೇ ವಾಸೆಕ್ಟಮಿ ಮಾಡಿಸಿಕೊಂಡು ಕುಟುಂಬ ಯೋಜನೆಯನ್ನು ನಿಯಂತ್ರಿಸು ಎಂದು ಹೇಳಿದರೆ, ಅದಕ್ಕೆ ಅವನು ಒಪ್ಪಿಗೆ ಕೊಡುವುದಿಲ್ಲ.

ಕುಟುಂಬ ಯೋಜನೆಯನ್ನು ಕೈಗೊಳ್ಳುವ ಜಾಹಿರಾತುಗಳನ್ನು ನಾವು ನೋಡಿದಾಗಲೂ ಸಹ ಹೆಚ್ಚಾಗಿ ಸ್ತ್ರೀಯರಿಗೆ ಸಂಬಂಧ ಪಟ್ಟಂತವೇ ಕಾಣುತ್ತವೆ. ಪುರುಷರಿಗೆ ಸಂಬಂಧ ಪಟ್ಟಿರುವಂತಹವು ಕಾಣುವುದು ಕಡಿಮೆಯಾಗಿರುತ್ತವೆ. ಇಲ್ಲಿ ಪ್ರಭುತ್ವವು ಸಹ ಹೆಣ್ಣಿನ ಮೇಲೆ ಶೋಷಣೆ ಮಾಡುತ್ತಿರುವುದನ್ನು ಸುಲಭವಾಗಿ ಗಮನಿಸಬಹುದು. ಏಕೆಂದರೆ ಸಂತಾನಹರಣ ಚಿಕಿತ್ಸೆಯಲ್ಲಿ ಹೆಣ್ಣಿಗೆ ಕೊಟ್ಟಷ್ಟು ಮಹತ್ವವನ್ನು ಗಂಡಿಗೆ ಕೊಡುವುದಿಲ್ಲ. ಪಿತೃಪ್ರಧಾನವಾದ ಸಮಾಜದಲ್ಲಿ ಪುರುಷನೇ ಅಧಿಕಾರವನ್ನು ಚಲಾಯಿಸುವವನು ಆಗಿರುತ್ತಾನೆ. ಆದುದರಿಂದ ಕುಟುಂಬ ಯೋಜನೆಯ ಕಾರ್ಯವು ಹೆಚ್ಚಾಗಿ ಸ್ತ್ರೀಯರ ಮೇಲೆಯೇ ನಿರ್ಬಂಧನೆಯನ್ನು ಹೇರಿದೆ ಪುರುಷರ ಮೇಲೆ ಈ ರೀತಿಯ ನಿರ್ಬಂಧನೆಗಳು ಇರುವುದಿಲ್ಲ ಎಂಬುದು ಜಾಹಿರಾತುಗಳ ಮೂಲಕ, ಪ್ರಭುತ್ವದಲ್ಲಿ ಕಂಡುಬರುತ್ತದೆ.

ಒಟ್ಟಾರೆಯಾಗಿ ಕುಟುಂಬಯೋಜನೆಯನ್ನು ನಿಯಂತ್ರಿಸುವಲ್ಲಿ ವೈದ್ಯಾಕೀಯವಾಗಿ ಹೆಣ್ಣಿನ ಆರೋಗ್ಯದ ಮೇಲೆ ಅಘಾತವಾದ ಪರಿಣಾಮ ಬೀರಿದೆ ಎಂಬುದು ಕಂಡುಬರುತ್ತದೆ. ಹಾಗೆಯೇ ಪಿತೃಪ್ರಧಾನ ವ್ಯವಸ್ಥೆ ಮತ್ತು ಸರ್ಕಾರವು ಸಹ ಹೆಣ್ಣನ್ನು ಶೋಷಣೆಗೆ ಒತ್ತಡಕ್ಕೆ ಒಳಪಡಿಸಿರುವುದು ಕಂಡುಬರುತ್ತದೆ.

ಕುಟುಂಬ ಯೋಜನಾ ಕಾರ್ಯಕ್ರಮವು ಭಾರತ ದೇಶದಲ್ಲಿ ನಿರೀಕ್ಷಿಸಿದ ಗುರಿಯನ್ನು ತಲುಪುವಲ್ಲಿ ವಿಫಲವಾಗಿದೆ. ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಇತರ ಕಾರಣಗಳಿಂದಾಗಿ ಯೋಜಿತ ಗುರಿಯನ್ನು ತಲುಪುವಲ್ಲಿ ಯಶಸ್ವಿಯಾಗಿಲ್ಲ.

ಸಾಮಾಜಿಕವಾಗಿ ನಮ್ಮ ದೇಶವು ಹಿಂದುಳಿದ ದೇಶವಾಗಿದೆ. ಅನಕ್ಷರಸ್ಥರ ಸಂಖ್ಯೆ ಹೆಚ್ಚಾಗಿರುವುದರಿಂದ ಹೊಸ ವಿಷಯಗಳನ್ನು ಗಮನದಲ್ಲಿರಿಸಿ ಕೊಳ್ಳುವುದು ತೀರ ಕಷ್ಟವೆನಿಸುತ್ತದೆ. ಸಾಂಪ್ರದಾಯಿಕವಾದ ಬದುಕಿಗೆ ಹೊಂದಿಕೊಂಡು ಜೀವಿಸುತ್ತಿರುವ ಅವಿದ್ಯಾವಂತರು ತಮ್ಮ ಬದುಕಿನ ರೀತಿಯನ್ನು ಬದಲಾಯಿಸುವಲ್ಲಿ ಅವರಿಂದ ಸಾಧ್ಯವಿರುವುದಿಲ್ಲ. ಆದುದರಿಂದ ಕುಟುಂಬ ಯೋಜನೆಯಂಥ ವೈಯಕ್ತಿಕ ಕಾರ್ಯಕ್ರಮಕ್ಕೆ ಜನರು ಹೆಚ್ಚಿನ ಗಮನವನ್ನು ಕೊಡುತ್ತಿರಲಿಲ್ಲ ಎಂಬುದು ಕಂಡುಬರುತ್ತಿತ್ತು.

ಸಾಮಾಜಿಕ ಮೌಲ್ಯಗಳು ಕುಟುಂಬ ಯೋಜನೆಯನ್ನು ಪ್ರಚಾರ ಮಾಡುವಲ್ಲಿ ಜನರಿಗೆ ತಿಳಿಸುವಲ್ಲಿ ಸಫಲವಾಗಿಲ್ಲ. ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡುವುದು ವಿವಾಹದ ವಯಸ್ಸನ್ನು ಮುಂದೂಡುವುದು,

ದಾಂಪತ್ಯ ಸುಖಕ್ಕೆ ಬೇರೆ ರೀತಿಯ ವಿಧಾನಗಳನ್ನು ಉಪಯೋಗಿಸದೆ ಇರುವುದು. ಹುಟ್ಟಿದ ಮಕ್ಕಳೇ ನಮಗೆ ಆಸ್ತಿ ಎಂದು ನಂಬಿರುವ ಜನರಿಗೆ, ಸಮಸ್ಯೆಯಾಗುತ್ತದೆ ಎಂದು ತಿಳುವಳಿಕೆ ಕೂಡ ಇಲ್ಲ. ನಮ್ಮ ಮಕ್ಕಳು ನಮ್ಮ ಹೊಲದಲ್ಲಿ ಕೆಲಸಮಾಡಿಕೊಂಡು ಜೀವಿಸುವಾಗ ನಮಗೆ ಏಕೆ ಇವರು ಹೊರೆಯಾಗುತ್ತಾರೆ ಎಂಬ ಭಾವನೆಯಿಂದ ಕುಟುಂಬ ಯೋಜನೆಯನ್ನು ಮಾಡಿಸಿಕೊಳ್ಳುವಲ್ಲಿ ಮುಂದುವರಿಯುತ್ತಿರಲಿಲ್ಲ.[೨೧]

ನಿರಕ್ಷರತೆಯಿಂದ ಕೂಡಿದ ಜನರಿಗೆ ದೇಶದ ಬಗ್ಗೆ ಚಿಂತೆ ಮಾಡುವಷ್ಟು ಸಹನೆ, ತಾಳ್ಮೆ ಸಂಯಮ ಮುಕ್ಕಾಲುಪಾಲು ಜನರಲ್ಲಿ ಇರುತ್ತಿರಲಿಲ್ಲ. ಅವರಿಗೆ ನಾನು ನನ್ನದು, ನನ್ನ ಮನೆ ಎನ್ನುವ ಮನೋಭಾವ ಹುಟ್ಟಿನಿಂದಲೂ ಬೆಳೆದುಕೊಂಡು ಬಂದಿರುವಂತ ಸಂಗತಿಯಾಗಿದೆ. ಇದರಿಂದ ಕುಟುಂಬ ಯೋಜನೆಯು ವಿಫಲವಾಗಲು ಸುಲಭವಾಗುತ್ತದೆ ಎಂದು ಹೇಳಬಹುದು.

ಕುಟುಂಬ ಯೋಜನೆಯ ಕಾರ್ಯಕ್ರಮವನ್ನು ಶಿಶು-ವಿರೋಧಿ ಕಾರ್ಯಕ್ರಮವೆಂದು ಜನರು ಅರಿತಿದ್ದರು. ಕುಟುಂಬ ಯೋಜನೆಯ ವಿಧಾನವನ್ನು ಅನುಸರಿಸಿದರೆ, ಶಿಶು-ಹತ್ಯೆ ಮಾಡಿದಂತೆ ಎಂಬ ಸಂಪ್ರದಾಯಿಕವಾದ ನಂಬಿಕೆ ಜನರಲ್ಲಿ ಬೆಳೆದುಕೊಂಡು ಬಂದಿತ್ತು.[೨೨]

ಕುಟುಂಬ ಯೊಜನೆಯಿಂದ ದೇಹದ ಮೇಲೆ ದುಷ್ಪಾರಿಣಾಮಗಳು ಬೀರುತ್ತವೆ ಮತ್ತು ಸಂತಾನ ಹರಣ ಶಸ್ತ್ರಚಿಕಿತ್ಸೆಯ ನಂತರ ಜನರಿಗೆ ಸರಿಯಾದ ಉಪಚಾರ ದೊರೆಯದೆ ಭಯದ ಬೀತಿಯನ್ನು ಹುಟ್ಟಿಸಿತು.

ಕುಟುಂಬ ಯೋಜನೆಯು ವೈಯಕ್ತಿಕವಾದ ವಿಚಾರವಾಗಿದೆ. ಆದ್ದರಿಂದ ಪ್ರತಿಯೊಬ್ಬನಿಗೂ ಇದರ ಬಗ್ಗೆ ಅರಿವನ್ನು ಮೂಡಿಸಿ ಸ್ವತಃ ಪುರುಷನೇ ಕುಟುಂಬಯೋಜನೆಯ ಸಾಧನವನ್ನು ಬಳಸಲು ಮುಂದೆ ನುಗ್ಗುವಂತೆ ಜಾಗೃತಗೊಳಿಸಬೇಕು. ಆದರೆ ಇಂಥ ಪರಿಸ್ಥಿತಿಯು ನಮ್ಮ ದೇಶದಲ್ಲಿ ಇಲ್ಲದೇ ಇರುವುದರಿಂದ ಕುಟುಂಬ ಯೋಜನೆಯು ಯಶಸ್ವಿಯನ್ನು ಪಡೆಯುವಲ್ಲಿ ವಿಫಲವಾಗಿದೆ. ಇದು ಕೇವಲ ಪ್ರಭುತ್ವದ ಕಾರ್ಯವಾಗಿಯೇ ಉಳಿದುಕೊಂಡಿದೆ.[೨೩]

ಕುಟುಂಬ ಯೋಜನೆಯು ನಿರೀಕ್ಷಿಸಿದ ಗುರಿಯನ್ನು ತಲುಪಬೇಕಾದರೆ ಕುಟುಂಬ ಯೋಜನೆಯು ಜಾಹಿರಾತುಗಳ ಮೂಲಕ ಪ್ರಚಾರ ಮಾಡುವುದು, ದಂಪತಿಗಳಿಗೆ ಕುಟುಂಬ ಯೋಜನೆಯ ನಿಯಂತ್ರಣದ ಚಿಕಿತ್ಸೆ ಮಾಡಿಸಿಕೊಂಡ ನಂತರ ಅವರಿಗೆ ಸರಿಯಾದ ಉಪಚಾರ ಮಾಡಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರು, ಸಂತಾನಹರಣ ಶಸ್ತ್ರಚಿಕಿತ್ಸೆಯನ್ನು ಬಳಕೆಮಾಡಿಕೊಂಡ ಯೋಜನಾ ಫಲಾನುಭವಿಗಳಿಗೆ ಸಿಗಬೇಕಾದಂತ ಸೇವೆಯನ್ನು ಮತ್ತು ಉಪಚಾರಗಳನ್ನು ಹೆಚ್ಚಿಸಿದಲ್ಲಿ ಮಾತ್ರ ಕುಟುಂಬ ಯೋಜನೆಯು ನಿರೀಕ್ಷಿಸಿದ ಗುರಿಯನ್ನು ಮುಟ್ಟುವಲ್ಲಿ ಸ್ವಲ್ಪರ ಮಟ್ಟಿಗೆ ಯಶಸ್ವಿಯನ್ನು ಕಾಣಬಲ್ಲದು ಎಂದು ಹೇಳಬಹುದು.

ಪ್ರಭುತ್ವವು ಮಹಿಳೆಯರ ಆರೋಗ್ಯದ ಮೇಲೆ ದುಷ್ಪಾರಿಣಾಮಗಳನ್ನು ಬೀರುವಂತ ಗುಳಿಗೆಗಳನ್ನು, ಚುಚ್ಚು ಮದ್ದುಗಳ ಬಳಕೆ ಮಾಡಿ ಅವರ ಆರೋಗ್ಯದ ಕಡೆ ಹೆಚ್ಚಿನ ಗಮನವನ್ನು ವಹಿಸಬೇಕು ಅಂದಾಗ ಮಾತ್ರ ಕುಟುಂಬ ಯೋಜನೆಯು ಯಶಸ್ವಿಯಾಗಬಹುದು ಎಂದು ಹೇಳಲಾಗಿದೆ.

**ಅಡಿಟಿಪ್ಪಣಿಗಳು**

೧. ಬಿ.ಮೋಹನ್ ರಾವ್, ಸಾಮಾಜಿಕ ವ್ಯವಸ್ಥೆ ಮತ್ತು ಸಾಮಾಜಿಕ ಬದಲಾವಣೆ, ಪು.೨೭೫

೨. ಅದೇ, ಪು.೨೮೮

೩. ಅದೇ, ಪು.೨೮೯

೪. ಅದೇ, ಪು.೨೯೩

೫. ಎ.ಎಸ್.ಚಂದ್ರಮೌಳಿ, ಜನಸಂಖ್ಯೆ ಒಂದು ಅಧ್ಯಯನ, ೧೯೯೬, ಪು.೭೧

೬. ಮಹಿಳಾ ಅಧ್ಯಯನ ಪತ್ರಿಕೆ, ದಕ್ಷಿಣಾಯನ ಸಂಚಿಕೆ-೨, ಸಂಪುಟ-೧, ಜುಲೈ ೧೯೯೯, ಪು.೪೭

೭. ಅದೇ ಪು.೪೮

೮. ಅದೇ, ಪು.೬೪

೯. ಅದೇ, ಪು.೬೪

೧೦. ಎ.ಎಸ್.ಚಂದ್ರಮೌಳಿ, ಜನಸಂಖ್ಯೆ ಒಂದು ಅಧ್ಯಯನ, ೧೯೯೬, ಪು.೭೫

೧೧. ಅದೇ, ಪು.೭೬

೧೨. ಅದೇ, ಪು.೭೭

೧೩. ಅದೇ, ಪು.೭೮

೧೪. ಡಾ.ಕೆ.ಸರೋಜ, ಮಹಿಳೆ ಮತ್ತು ಆರೋಗ್ಯ, ಕ.ವಿ.ವಿ ಹಂಪಿ, ೨೦೦೧, ಪು.೧೧೫

೧೫. ಅದೇ, ಪು.೧೧೬

೧೬. ಅದೇ, ಪು.೧೧೮

೧೭. ಅದೇ, ಪು.೧೨೬

೧೮. ಮಹಿಳಾ ಅಧ್ಯಯನ ಪತ್ರಿಕೆ, ದಕ್ಷಿಣಾಯನ ಸಂಚಿಕೆ-೨, ಸಂಪುಟ-೧, ಜುಲೈ ೧೯೯೯, ಪು.೫೧

೧೯. ಅದೇ, ಪು.೬೦, ೬೧

೨೦. ಅದೇ, ಪು.೬೭

೨೧. ಎ.ಎಸ್.ಚಂದ್ರಮೌಳಿ, ಜನಸಂಖ್ಯೆ ಒಂದು ಅಧ್ಯಯನ, ೧೯೯೬, ಪು.೭೯

೨೨. ಅದೇ, ಪು.೮೦

೨೩. ಅದೇ, ಪು.೮೧

ಅಧ್ಯಾಯ ೫

# ತಾಯ್ತನ ಮತ್ತು ಮಹಿಳಾ ಚಳುವಳಿಗಳು

ಪ್ರಸ್ತುತ ಸಮಾಜವು ಪಿತೃಪ್ರಧಾನ ವ್ಯವಸ್ಥೆಯಲ್ಲಿ ನಿರ್ಮಿತಗೊಂಡಿದೆ. ಸ್ತ್ರೀ-ಪುರುಷರು ಅಸಮಾನತೆಯ ನೆಲೆಗಳಿಂದ ಕೂಡಿದ್ದಾರೆ ಎಂಬುದು ಕಂಡುಬರುತ್ತದೆ. ಯಾಕೆಂದರೆ ಸ್ತ್ರೀ-ಪುರುಷರ ಅಸಮಾನತೆಗೆ ಮುಂದೊಡ್ಡುವ ಜೈವಿಕ ಮೂಲವನ್ನು ಗಮನಿಸಬಹುದು. ಜೈವಿಕ ಮೂಲ ರಚನೆಗಳು ಗಂಡಿನ ಜೈವಿಕ ರಚನೆಯನ್ನು ಅವನ ಗಂಡುತನವನ್ನು ಸೃಷ್ಟಿಸಿ ಗಂಡುತನವು ಹೆಣ್ಣುತನಕ್ಕಿಂತ ಶ್ರೇಷ್ಠವೆಂದು ನಂಬುವಂತೆ ಮಾಡಿದೆ.

ಜೈವಿಕ ಸಾಕ್ಷ್ಯ ಹೆಣ್ಣನ್ನು ಗಂಡಿಗಿಂತ ಭಿನ್ನಳೆಂದು ತೋರಿಸುತ್ತದೆಯೇ ಹೊರತು ಕೀಳೆಂದಲ್ಲ. ಆದರೆ ಈ ಜೈವಿಕ ವ್ಯತ್ಯಾಸವನ್ನು ಅನುಸರಿಸಿಕೊಂಡು ಪುರುಷ ಪ್ರಧಾನರು ಹೆಣ್ಣನ್ನು ಕೀಳು, ಇವಳಿಂದ ಯಾವುದೇ ಕೆಲಸವನ್ನು ಮಾಡುವುದು ಸಾಧ್ಯವಿಲ್ಲ ಎಂದು ಕೀಳಾಗಿ ಕಾಣುತ್ತಾರೆ. ಹೆಣ್ಣು ಮಾಡುವ ಮನೆಕೆಲಸವನ್ನು ಪರಿಗಣಿಸದೆ, ಅದನ್ನು ಅನುತ್ಪಾದಕ ಕೆಲಸವೆಂದು ಪರಿಗಣಿಸಿ ಅದಕ್ಕೆ ಯಾವುದೇ ರೀತಿಯ ಮೌಲ್ಯವು ದೊರೆಯದಂತೆ ಮಾಡಿದೆ. ಹೆಣ್ಣನ್ನು ಎರಡನೆಯ ದರ್ಜೆಯ ಪ್ರಜೆಯನ್ನಾಗಿ ಮಾಡಿದೆ ಎಂದು ಹೇಳಬಹುದು. ಪುರುಷನು ಹೊರಗಿನ ಕೆಲಸವನ್ನು ಮಾಡವುದರಿಂದ ಅದನ್ನು ಉತ್ಪಾದಕ ಕೆಲಸವೆಂದು ಅದಕ್ಕೆ ಮೌಲ್ಯವನ್ನು ಕಟ್ಟಿದೆ. ಆದರೆ ಮನೆಯೊಳಗೆ ದುಡಿಯುವುದರಿಂದ ಅವಳ ಕೆಲಸಕ್ಕೆ ಯಾವುದೇ ರೀತಿಯ ಮೌಲ್ಯವು ಸಿಗುತ್ತಿಲ್ಲ. ಈ ಆರೋಪಿತ ದರ್ಜೆಯನ್ನು ಹೇಗಾದರೂ ಮಾಡಿ ಬದಲಾವಣೆ ಮಾಡಬೇಕೆಂದು ಹಲವಾರು ಮಹಿಳಾ ಚಳುವಳಿಕಾರರು ಹೋರಾಟವನ್ನು ಮಾಡಲು ಮುಂದುವರೆದರು.

ಮಾನವ ವರ್ಗ ಎಂದರೆ ಪುರುಷವರ್ಗ ಅದರಲ್ಲಿ ಮಹಿಳೆಯರು ಬಾಗಿಯಾದರೂ ಒಂದು ಷರತ್ತಿನ ಮೇಲೆ ಭಾಷಿಕ ನೆಲೆಯಲ್ಲಿ ಆಕೆಗೆ ಸ್ಥಾನವಿಲ್ಲ. ಮತ್ತು ಆ ನೆಲೆಯಲ್ಲಿ ಆಕೆ ಕಾಣಿಸಿಕೊಳ್ಳುವುದು ಇಲ್ಲ. ಮತ್ತು ಕೇಳಿಸುವುದು ಇಲ್ಲ. ಈ ಕಲ್ಪನೆ ಪುರುಷ ಸ್ವಭಾವ ಮತ್ತು ಜೈವಿಕತೆಯನ್ನು ಅಧಿಕೃತಗೊಳಿಸಿ ಸ್ತ್ರೀ-ಪುರುಷರನ್ನು ಕುರಿತ ಸಾಮಾಜಿಕ ದೃಷ್ಟಿಕೋನ ಏನು? ಎಂಬ ಪ್ರಶ್ನೆಯನ್ನು ಚಳುವಳಿಕಾರರು ಎತ್ತಿ ಹಿಡಿದಾಗ ಹೆಣ್ಣು ಗಂಡಿನ ಗುಣ ಸ್ವಭಾವ ಶ್ರಮ ವಿಭಜನೆಯನ್ನು ಬೇರೆ ಬೇರೆ ಮಾಡುವ ಪುರುಷ ಕೇಂದ್ರಿತ ಗ್ರಹಿಕೆಗಳನ್ನು ಒಡೆಯುವುದು ಸಾಧ್ಯವಾಗುತ್ತದೆ ಎಂಬ ನಿಲುವನ್ನು ಚಳುವಳಿಕಾರರು ಹೊಂದಿರುತ್ತಾರೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ಶೀಲದ ನೆಪದಲ್ಲಿ ವಿವಾಹ ಎನ್ನುವ ಬಂಧನದಲ್ಲಿ ಸಿಲುಕಿಸಿದೆ. ಶೀಲ ಮತ್ತು ಪಾತಿವ್ರತ್ಯದ ಆಚೆಗೆ ಹೆಣ್ಣಿಗೆ ವ್ಯಕ್ತಿತ್ವವನ್ನು ಮತ್ತು ಅವಳಿಗಿರುವ ಹಕ್ಕುಗಳನ್ನು ಮಹಿಳಾ ಚಳುವಳಿಗಳೂ ಎತ್ತಿ ತೋರಿಸುತ್ತವೆ. ಹೆಣ್ಣಿನ ಶೀಲಕ್ಕೆ ವಿಶೇಷ ಮಹತ್ವಕೊಟ್ಟು ಅವಳನ್ನು ಸಮಸ್ಯೆಯ ಸುಳಿಯಲ್ಲಿ ಸಿಲುಕಿಸಿ ಹಾಕುವಂತ ಪುರುಷ ಪ್ರಧಾನವು ಹೆಣ್ಣನ್ನು ಅನೇಕ ನಿರ್ಬಂಧನೆಗಳಿಗೆ ಎಡೆಮಾಡಿಕೊಟ್ಟಿದೆ. ಹೆಣ್ಣೆಂದರೆ ಶೀಲ, ಶೀಲ ಎಂದರೆ ಹೆಣ್ಣು ಎನ್ನುವ ನಿಲುವಿನಲ್ಲಿ ಕಾಣುತ್ತಿದ್ದಾರೆ. ಹೀಗಾಗಿ ಶೀಲ ಮತ್ತು ಪಾತಿವ್ರತ್ಯದ ನೆಪದಲ್ಲಿ ಮೌಲ್ಯವಾಗಿ ಸ್ವೀಕರಿಸಿದ ಎಲ್ಲ ಸಂಸ್ಕೃತಿಗಳಲ್ಲಿ ಹೆಣ್ಣನ್ನು ನೋಡುವ ದೃಷ್ಟಿಯೇ ಬೇರೆಯಾಗಿರುವುದು ಕಂಡುಬರುತ್ತದೆ. ಪಾತಿವ್ರತ್ಯವನ್ನು ಮೀರಿದ ಹೆಣ್ಣನ್ನು ಅತ್ಯಂತ ಕಟುವಾಗಿ ಅವಮಾನಿಸುವಲ್ಲಿ ಶೀಲದ ಮೌಲ್ಯವನ್ನು ಕಾಪಾಡಿಕೊಂಡು ಬರಲಾಗಿದೆ. ಹೆಣ್ಣು ತನ್ನ ಶೀಲವನ್ನು ಗಂಡು ಒಡ್ಡುವ ಎಲ್ಲ ಪರೀಕ್ಷೆಗಳನ್ನು ಗೆದ್ದು ತನ್ನ ಶೀಲವನ್ನು ಸಾರ್ವಜನಿಕವಾಗಿ ಸಾಬೀತುಪಡಿಸಿಕೊಳ್ಳಬೇಕು ಎಂದು ನಿರ್ಬಂಧಿಸಿದೆ.

ನಮ್ಮ ಅನೇಕ ಪುರಾಣ ಮಹಾಕಾವ್ಯಗಳಲ್ಲಿ ಕಂಡುಬಂದಂತೆ ಅಶೌಚಕ್ಕೆ ಅತೀತನಾದ ಪುರುಷನಲ್ಲಿ ಅನೇಕ ಸಂದರ್ಭಗಳಲ್ಲಿ ಕಾಣೆಯಾದ ಪದವೆಂದರೆ, ಶೀಲ ಹೆಣ್ಣನ್ನು ಬಿಡಿಬಿಡಿಯಾಗಿ ಆವರಿಸಿಕೊಂಡಿರುವ ದ್ವಂದ್ವದಲ್ಲಿ ಪಾತಿವ್ರತ್ಯದ ದ್ವಂದ್ವವನ್ನು ಒಡೆಯಬೇಕು ಮತ್ತು ಲೈಂಗಿಕ ಸಂಪರ್ಕಕ್ಕೆ ಒಳಗಾದ ಹೆಣ್ಣಿಗೆ ಶಿಕ್ಷೆ ಮತ್ತು ಅದಕ್ಕೆ ಸಮರ್ಪಕವಾಗಿ ಬಾಗಿಯಾದ ಪುರುಷನಿಗೆ ಮುಕ್ತಿ ಎನ್ನುವಲ್ಲಿನ ಶೀಲದ ಹಕ್ಕಿನ ವಿರುದ್ಧ ಚಳುವಳಿಕಾರರು ಪ್ರಧಾನ ಕಾಳಜಿಯಾಗಿ ತೆಗೆದುಕೊಂಡಿದ್ದಾರೆ.[೧]

ಸ್ತ್ರೀವಾದಿಗಳು ಯಾವುದನ್ನು ತನ್ನ ಹೋರಾಟದ ಪ್ರಶ್ನೆಗಳನ್ನಾಗಿ ತೆಗೆದುಕೊಂಡಿದ್ದಾರೆಯೋ ಅದೇ ಪ್ರಶ್ನೆಗಳನ್ನು ಮಹಿಳಾ ಚಳುವಳಿಕಾರರು ಕೈಗೆತ್ತಿಕೊಂಡಿದ್ದಾರೆ. ಪಾತಿವ್ರತ್ಯದ ಕಲ್ಪನೆಯನ್ನು ಗಂಡಿಗೂ ವಿಸ್ತರಿಸಬೇಕು. ಹಾಗಲ್ಲದಿದ್ದರೆ, 'ನನಗೆಯಾಕೆ' ಎನ್ನುವ ಪ್ರಶ್ನೆ 'ನಿನಗೆಯಾಕಿಲ್ಲ' ಎನ್ನುವ ಇನ್ನೊಂದು ಪ್ರಶ್ನೆಯಲ್ಲೆ ಮುಕ್ತಾಯವಾಗುವ ಸಂಭವವಿರುತ್ತದೆ. ಮಹಿಳಾ ಚಳುವಳಿಕಾರರು ಶೀಲದ ಬಗ್ಗೆ ಹೋರಾಟ ಮಾಡಿದಾಗ ಹೆಣ್ಣಿಗಿರುವ ಶೀಲವು ಗಂಡಿಗೂ ಇದೆ ಎಂಬ ಮಾತನ್ನು ಒತ್ತಿಹೇಳುತ್ತಾರೆ. ಏಕೆಂದರೆ ಶೀಲ ಎನ್ನುವುದು ಎಲ್ಲ ಮಾನವ ಜನಾಂಗದಲ್ಲಿ ಏಕರೂಪವಾಗಿರುವಂತಹುದು. ಆದ್ದರಿಂದ ಶೀಲದ ವಿಷಯ ಪ್ರಸ್ತಾಪವಾದಾಗ ಗಂಡು-ಹೆಣ್ಣಿಗೂ ಒಂದೇ ಆಗಿರುತ್ತದೆ ಎನ್ನುವ ವಾದವನ್ನು ಮಂಡಿಸುತ್ತಾರೆ. ಹೆಣ್ಣಿನ ಶೀಲಕ್ಕೂ ಗಂಡಿನ ಶೀಲಕ್ಕೂ ಯಾವುದೇ ರೀತಿಯ ಭಿನ್ನ ಸ್ವರೂಪವು ಕಂಡುಬರುವುದಿಲ್ಲ ಎಂದು ಹೇಳುವಲ್ಲಿ ಹಿಂಜರಿಯುವುದಿಲ್ಲ. ಹೆಣ್ಣಿನ ಶೀಲಕ್ಕೆ ಸಂಬಂಧಿಸಿದಂತೆ ವಂಶ ಮತ್ತು ಆಸ್ತಿಯ ಹಕ್ಕಿನ ಮೇಲೆ ಹೆಚ್ಚಿನ ಗರ್ಭಾಶಯದ ಮೇಲೆ ತಾಯ್ತನದ ಒತ್ತಡವನ್ನು ಕಡಿತಗೊಳಿಸಲು ಈ ಚಳುವಳಿಕಾರರು ಹೋರಾಡುತ್ತಿದ್ದಾರೆ.

## ವಂಶದ ಹಕ್ಕು

ಸ್ತ್ರೀ-ಪುರುಷರ ಸಂಯೋಗದಿಂದ ಮಕ್ಕಳು ಜನಿಸುವುದು ಸ್ವಾಭಾವಿಕವಾದ ಸಂಗತಿಯಾಗಿದೆ. ಹುಟ್ಟಿದಂತ ಮಕ್ಕಳ ಮೇಲೆ ಗಂಡ-ಹೆಂಡತಿಯರ ಒಡೆತನವಿರಬೇಕು ಎನ್ನುವುದು ಸ್ತ್ರೀವಾದಿ ಮತ್ತು ಚಳುವಳಿಕಾರರ ಗುರಿಯಾಗಿದೆ. ಮಕ್ಕಳ ಪಾಲನೆ ಮತ್ತು ಪೋಷಣೆಯ ಅಧಿಕಾರ ಸ್ತ್ರೀ-ಪುರುಷರಿಬ್ಬರಿಗೂ ಸೇರಬೇಕು. ಮಕ್ಕಳ ಜವಬ್ದಾರಿಯನ್ನು ಪೂರೈಸುವಾಗ ಸ್ವಲ್ಪಮಟ್ಟಿಗೆ ಗಂಡ-ಹೆಂಡತಿಯರಲ್ಲಿ ಕ್ಲೇಷಗಳುಂಟಾಗಬಹುದು. ಗಂಡ-ಹೆಂಡತಿಯರಿಬ್ಬರೂ ತಮ್ಮಲ್ಲಿರುವ ತಪ್ಪುಗಳನ್ನು ತಿದ್ದಿಕೊಳ್ಳುವ ಪ್ರಸಂಗ ಒದಗಿಬಂದಾಗ ಅವಶ್ಯಕವಾದ ಬದಲಾವಣೆಗಳನ್ನು ಪರಸ್ಪರರು ಮಾಡಿಕೊಳ್ಳಬೇಕು.

ವಂಶದ ಅಭಿವೃದ್ಧಿಯ ಪ್ರಶ್ನೆ ಬಂದಾಗ ಗಂಡನಿಗಿರುವ ಅಧಿಕಾರವು ಹೆಂಡತಿಗೂ ಇರಬೇಕು. ಪ್ರಕೃತಿಯಲ್ಲಿ ಗಂಡು-ಹೆಣ್ಣು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಆದುದರಿಂದ ವಂಶದ ಅಭಿವೃದ್ಧಿಯ ಹಕ್ಕು ಹೆಂಡತಿಗೂ ಇರಬೇಕು. ಮಕ್ಕಳನ್ನು ಪಾಲನೆ-ಪೋಷಣೆ ಮಾಡುವ ಸಹಪಾಲಕತ್ವವಿರಬೇಕು. ಮಕ್ಕಳನ್ನು ಬೆಳೆಸುವಲ್ಲಿ ತಮ್ಮ ಸ್ವಭಾವ ಗುಣಗಳನ್ನು ಹತೋಟಿಗೆ ತಂದು ಹೊಂದಾಣಿಕೆಯನ್ನು ಮಾಡಿಕೊಂಡು ಮಕ್ಕಳಿಗೆ ಒಳ್ಳೆಯ ಅನುಕೂಲಕರವಾದಂತ ವಾತಾವರಣವನ್ನು ಮನೆಯಲ್ಲಿ ನಿರ್ಮಿಸಿಕೊಡಬೇಕು. ಈ ಹೊಣೆಯು ತಂದೆ-ತಾಯಿಯರಿಬ್ಬರಿಗೂ ಸಂಬಂಧಪಟ್ಟುದಾಗಿರುತ್ತದೆ.

ವಂಶಾಭಿವೃದ್ಧಿಯ ಹಕ್ಕು ಪ್ರಾಪ್ತವಾಗಬೇಕಾದರೆ, ಹೆಣ್ಣು ಗಂಡಿನ ಸಮಾನಳಾಗಿ ದುಡಿದು, ಆರ್ಥಿಕವಾಗಿ, ಸಾಮಾಜಿಕವಾಗಿ ಪ್ರಬಲಳಾಗಬೇಕು. ಅದಕ್ಕೆ ಸ್ತ್ರೀ-ಪುರುಷರಿಬ್ಬರೂ ಸದೃಢವಾದ ದೇಹ ಮತ್ತು ಸದೃಢವಾದ ಮನಸ್ಸನ್ನು ಹೊಂದಿ ಆರೋಗ್ಯವಂತರಾಗಿರಬೇಕು. ಪುರುಷನಿಗೆ ಎಲ್ಲ ಕ್ಷೇತ್ರಗಳಲ್ಲಿ ಅಧಿಕಾರವಿರುವ ಹಾಗೆ ಸ್ತ್ರೀಯರಿಗೂ ಅಂತಹ ಸ್ಥಾನವು ಲಭಿಸಬೇಕೆಂಬುದು ಚಳುವಳಿಕಾರರ ಅಭಿಮತವಾಗಿರುತ್ತದೆ. ಒಂದು ಕುಟುಂಬವನ್ನೂ, ವಂಶವನ್ನೂ ಅಭಿವೃದ್ಧಿಪಡಿಸಬೇಕಾದರೆ, ಪುರುಷನೊಬ್ಬನಿಂದಲೇ ಸಾಧ್ಯವಿಲ್ಲ ಅಥವಾ ಸ್ತ್ರೀಯೊಬ್ಬಳಿಂದಲೇ ಸಾಧ್ಯವಿಲ್ಲ. ಅದಕ್ಕೆ ಸ್ತ್ರೀ-ಪುರುಷರಿಬ್ಬರ ಪರಸ್ಪರ ಸಹಕಾರವು ಅವಶ್ಯಕವಾಗಿ ಬೇಕೆ ಬೇಕಾಗುತ್ತದೆ. ಆದುದರಿಂದ ವಂಶದ ಹಕ್ಕು ಹೆಣ್ಣಿಗೂ ಅವಶ್ಯಕವೆನಿಸುತ್ತದೆ. ವಂಶವನ್ನು ಅಭಿವೃದ್ಧಿಪಡಿಸುವಲ್ಲಿ ಮುಖ್ಯವಾಗಿ ಗಂಡುಮಗುವಿನ ಅವಶ್ಯಕತೆಯು ಬೇಕೆ ಬೇಕಾಗುತ್ತದೆ ಮತ್ತು ಗಂಡುಮಗು ಇದ್ದರೆ ಮನೆಯ ಯಜಮಾನಿಕೆಯನ್ನು, ಆಸ್ತಿಯನ್ನು ನಿಭಾಯಿಸುವಲ್ಲಿ ಪುರುಷನಿಂದ ಮಾತ್ರ ಸಾಧ್ಯ ಎನ್ನುವುದು ಪುರುಷ ಪ್ರಧಾನರ ಚಿಂತನೆಯಾಗಿದೆ. ಸ್ತ್ರೀಯರು ಕೊಟ್ಟ ಮನೆಗೆ ತೆರಳುವವರು ಅವರಿಗೆ ಏಕೆ ಬೇಕು ವಂಶದ ಹಕ್ಕು ಎಂಬ ಮಾತನ್ನು ಹೇಳುತ್ತಾರೆ. ಈ ಚಿಂತನೆಯ ವಿರುದ್ಧವಾಗಿ ಸ್ತ್ರೀವಾದಿಗಳು ವಂಶ ಅಭಿವೃದ್ಧಿಯು ಪುರುಷರಿಂದಲೇ ಸಾಧ್ಯವಿಲ್ಲ, ಸ್ತ್ರೀಯರಿಂದಲೂ ಮಾಡಬಹುದು ಎಂದು ವಾದಿಸುತ್ತಾರೆ.

ಹೆಣ್ಣು ಅಂಡಾಣುಗಳನ್ನು(sparm) ಉತ್ಪತ್ತಿ ಮಾಡುವ ಶಕ್ತಿಯನ್ನು ಹೊಂದಿದರೆ ಸಾಕು ವೀರ್ಯಾಣುವನ್ನು ಬೇರೊಬ್ಬನಿಂದ ಪಡೆದು(Testitube) ಟೆಸ್ಟಿಟ್ಯೂಬ್‌ನ ಮೂಲಕ ಮಕ್ಕಳನ್ನು ಪಡೆಯಬಹುದು ಎಂಬುದು ಚಳುವಳಿಕಾರರ ನಿಲುವಾಗಿದೆ. ಹಾಗೆಯೇ ಲೆಸ್ಬಿಯನ್ ಸ್ತ್ರೀವಾದಿಗಳು ಗಂಡಿನ ಸಂಪರ್ಕವಿಲ್ಲದೆ ನಾವು ಮಕ್ಕಳನ್ನು ಪಡೆಯುತ್ತೇವೆ ಎನ್ನುತ್ತಾರೆ. ಅದು ಯಾವ ಬಗೆಯಲ್ಲಿ ಇರುತ್ತದೆಂದರೆ, ಸ್ತ್ರೀ ಸಲಿಂಗ ಕಾಮಿಗಳು ತನ್ನದೇ ಜೀವಕೋಶದ ಮುಖಾಂತರ ಸರೊಗೇಟ್ ಮದರ್ ಅಥವಾ ಬಾಡಿಗೆ ತಾಯಿಯಿಂದ ಮಗುವನ್ನು ಪಡೆದು ವಂಶವನ್ನು ಅಭಿವೃದ್ಧಿ ಪಡಿಸಬಹುದು ಎಂಬುದು ಲೆಸ್ಬಿಯನ್ ಸ್ತ್ರೀವಾದಿಗಳ ಚಿಂತನೆಯಾಗಿದೆ.

ಎಷ್ಟು ಮಕ್ಕಳನ್ನು ಪಡೆದುಕೊಳ್ಳಬೇಕು ಮತ್ತು ಮಕ್ಕಳನ್ನು ಯಾವಾಗ ಪಡೆದುಕೊಳ್ಳಬೇಕು ಎನ್ನುವುದು ಪುರುಷನಿಗೆ ಸಂಬಂಧಿಸಿದ್ದೆಂದು ಪುರುಷ ಪ್ರಧಾನರು ಸ್ತ್ರೀಯರನ್ನು ಒಂದು ಹೆರುವ ಯಂತ್ರವಾಗಿ ಕಾಣಲು ಪ್ರಯತ್ನಿಸಿದರು. ಆದರೆ ಸ್ತ್ರೀಯರು ಬರೀ ಮಕ್ಕಳನ್ನು ಹೆರುವ ಯಂತ್ರವಲ್ಲ ಅವಳಿಗೂ ವಂಶವನ್ನು ಅಭಿವೃದ್ಧಿಪಡಿಸುವಲ್ಲಿ ಸಮಾನವಾದ ಅಧಿಕಾರದ ಹಕ್ಕುಗಳಿವೆ ಎನ್ನುವುದರ ಪರವಾಗಿ ಹೋರಾಡಲು ಪ್ರಯತ್ನಿಸಿ ಕುಟುಂಬದಲ್ಲಿ, ಸಮಾಜದಲ್ಲಿ, ಸಾರ್ವಜನಿಕ ವಲಯದಲ್ಲಿ ಅವಳಿಗೆ ಸಮಾನವಾದ ಅವಕಾಶಗಳು ಸಿಗುವಂತ ಪ್ರಯತ್ನಗಳನ್ನು ಮಹಿಳಾ ಚಳುವಳಿಗಳು ಮಾಡುತ್ತಲಿವೆ. ಸ್ತ್ರೀಯರು ಅಧಿಕ ಸಂಖ್ಯೆಯಲ್ಲಿ ಶಿಕ್ಷಣವನ್ನು ಕಲಿತು ಹೆಚ್ಚಾಗಿ ನೌಕರಿಗಳಲ್ಲಿ ಸೇರಿಕೊಂಡಾಗ, ಕುಟುಂಬಗಳಲ್ಲಿ ಸ್ತ್ರೀಯರಿಗೆ ಸ್ವಲ್ಪ ಮಟ್ಟಿಗೆ ನಿಧಾನಗತಿಯಿಂದ ಕುಟುಂಬದಲ್ಲಿ ವಂಶ ಅಭಿವೃದ್ಧಿಯ ಹಕ್ಕನ್ನು ಪಡೆದುಕೊಳ್ಳಬಹುದು ಎಂಬುದು ಸ್ತ್ರೀವಾದಿಗಳ ವಾದವಾಗಿದೆ. ಸ್ತ್ರೀಯು ಶಿಕ್ಷಿತಳಾಗಿ ಮುಂದುವರೆದಂತೆಲ್ಲಾ ಅವಳಿಗೆ ಸಮಾಜದಲ್ಲಿ ಸಿಗುವಂತ ಗೌರವಗಳು ಬೇರೆ ಬೇರೆ ರೀತಿಯಾಗಿರುವುದು ಸಹಜವಾಗಿ ಕಂಡುಬರುತ್ತದೆ. ಮಕ್ಕಳ ಒಡೆತನ ತಂದೆಯದು, ಸೇವೆ ಶುಶ್ರೂಷೆಗೆ ತಾಯಿ ಎಂಬ ಮಾತು ಮಕ್ಕಳ ಒಡೆತನ, ಸೇವೆ ಶುಶ್ರೂಷೆಯು ತಂದೆ-ತಾಯಿಯರಿಬ್ಬರಿಗೆ ಸಮಾನವಾದುದಾಗಿದೆ ಎಂಬ ಕೂಗು ಮಹಿಳಾ ಚಳವಳಿಕಾರರಿಂದ ಕೇಳಿಬರುತ್ತದೆ.[೨]

ಚಳುವಳಿಕಾರರು ವಂಶದ ಹಕ್ಕಿನ ಪರವಾಗಿ ಹೋರಾಟ ಮಾಡಿದುದರ ಫಲ ಉನ್ನತವರ್ಗದ ಸ್ತ್ರೀಯರಲ್ಲಿ ಸ್ವಲ್ಪರ ಮಟ್ಟಿಗೆ ಕಂಡುಬರುತ್ತದೆ. ಕುಟುಂಬಕ್ಕೆ ಎಷ್ಟು ಮಕ್ಕಳ ಅವಶ್ಯಕತೆ ಇದೆ ಎಂಬುದನ್ನು ಅರಿತುಕೊಂಡು ಅವಳು ಮಕ್ಕಳನ್ನು ಹೆರುವುದು ಕಂಡುಬರುತ್ತದೆ. ಇದಕ್ಕೆ ಗಂಡ-ಹೆಂಡಿರ ಪರಸ್ಪರ ಒಪ್ಪಿಗೆಯಿಂದಲೇ ಈ ಹೆರುವ ಕೆಲಸವನ್ನು ನಿರ್ವಹಿಸುತ್ತಾಳೆ.

## ಆಸ್ತಿಯ ಹಕ್ಕು

ಹಿಂದೂ ಧರ್ಮಶಾಸ್ತ್ರಗಳಲ್ಲಿ ಮಹಿಳೆಯರಿಗೆ ಆಸ್ತಿಯಲ್ಲಿ ಯಾವುದೇ ರೀತಿಯ ಹಕ್ಕುಗಳು ಇಲ್ಲ ಎಂಬುದನ್ನು ಬಹಳಷ್ಟು ಕಟುತರವಾಗಿ ಮಾಡಿದ್ದಾರೆ. ಈ ಪಾಲುಗಾರಿಕೆಯ ನೆಪವೊಡ್ಡಿ ಪಿತೃಪ್ರಧಾನ

ವ್ಯವಸ್ಥೆಯು ಸ್ತ್ರೀಯರನ್ನು ಅಂಕೆಯಲ್ಲಿಟ್ಟುಕೊಳ್ಳುವುದು ಸುಲಭದ ಮಾರ್ಗವೆಂದು ಅವರನ್ನು ಆಸ್ತಿಯ ನೆಪದಲ್ಲಿ ಶೋಷಣೆ ಮಾಡುವಲ್ಲಿ ಮುಂದಾಗಿದ್ದಾರೆ. ಅದಕ್ಕೆ 'ಹೆಲೆನ್ ಟೇಲರ'ಳು ಆಸ್ತಿಹಕ್ಕಿನ ಪ್ರಶ್ನೆಯನ್ನು ಮಹಿಳಾ ವಿಮೋಚನೆಗೆ ಸಂಬಂಧಿಸಿದಂತೆ ಎತ್ತಿಹಿಡಿದರು.[೩] ಆಸ್ತಿಯಲ್ಲಿ ಸಮಾನ ಹಕ್ಕು ಕೊಡಬೇಕು ಎನ್ನುವುದರ ಪರವಾಗಿ ಹೋರಾಡಿ ೧೯೫೬ರ ಹಿಂದೂ ಕಾಯ್ದೆಯ ಅನ್ವಯ ಆಸ್ತಿಯಲ್ಲಿ ಸಮಾನಪಾಲನ್ನೂ ಪಡೆಯುವಲ್ಲಿ ಯಶಸ್ವಿಯಾದರು.

ಮನುವು ಒಂದು ಕಡೆ, ಸಂತಾನವಿಲ್ಲದೆ ಮೃತನಾದವನ ಸಂಪತ್ತಿನ ವಿನಿಯೋಗವು ಆಸ್ತಿ, ಪಾಸ್ತಿ, ಸಂಪತ್ತು ಮೃತನ ತಂದೆಗೆ ಸೇರಬೇಕು. ತಂದೆ ಜೀವಂತವಾಗಿರದಿದ್ದರೆ, ಅವನ ಬಂಧುವಿಗೆ, ಅವನೂ ಇರದಿದ್ದರೆ ಗುರುವಿಗೆ, ಇಲ್ಲವೇ ಮೃತನ ಗುರುವಿನ ಶಿಷ್ಯನಿಗೆ ವಿನಿಯೋಗಿಸಬೇಕೆಂದು ಹೇಳಿದ್ದಾನೆ.[೪] ಇದರಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಆಸ್ತಿಯ ಹಕ್ಕಿನ ಪ್ರಸ್ತಾಪವೇ ಇಲ್ಲದಿರುವುದು ಕಂಡುಬರುತ್ತದೆ.

ಮಹಿಳಾ ಚಳುವಳಿಕಾರರು ಮನುಚರಿತೆಯ ವಿರುದ್ಧ ಸುದೀರ್ಘವಾದ ಹೋರಾಟ ಮಾಡಲು ಮುಂದಾದರು. ಮನುವಿನಂತೆ ಪುರುಷ ಪ್ರಧಾನ ಸಂಸ್ಕೃತಿಯು ನಡೆದುಕೊಂಡರೆ, ಸ್ತ್ರೀಯರಿಗೆ ಯಾವುದೇ ರೀತಿಯ ಹಕ್ಕುಗಳಿಲ್ಲದಂತೆ ಆಗುತ್ತವೆ ಎಂದು ತಮ್ಮ ಹೋರಾಟವನ್ನು ಉಗ್ರವಾಗಿ ಪ್ರಾರಂಭಿಸಿದರು.

ಸ್ತ್ರೀಯರಿಗೆ ಸರಿಯಾದ ಸ್ಥಾನಮಾನವಿಲ್ಲದಂತೆ ಮತ್ತು ಆಸ್ತಿಯ ವಿಷಯದಲ್ಲಿ ಯಾವುದೇ ರೀತಿಯ ಹಕ್ಕು ಇಲ್ಲದಿರುವಂತೆ ಶೋಷಣೆ ಮಾಡಿದ ಮನುಚರಿತ್ರೆಯನ್ನು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ರವರು ಮಹಿಳೆಯರ ಆಸ್ತಿಯ ಹಕ್ಕಿಗಾಗಿ ಸಮಾನತೆಗಾಗಿ ಮಹಿಳೆಯರಿಗೆ ವಿರುದ್ಧವಾಗಿ ಕಂಡುಬರುವ ಮನುಚರಿತ್ರೆಯನ್ನು ೧೯೨೭ರಲ್ಲಿ ಸಾರ್ವಜನಿಕ ಸಭೆಯಲ್ಲಿ ಸುಟ್ಟಾಕಿದರು.[೫] ಮನುಚರಿತ್ರೆಯನ್ನು ಸುಟ್ಟಾಕುವುದು ಅಂಬೇಡ್ಕರ್ ರವರ ಮೂಲ ಉದ್ದೇಶವಾಗಿರಲಿಲ್ಲ. ಮನುಚರಿತ್ರೆಯನ್ನು ಸುಡುವಲ್ಲಿ ಹಲವಾರು ಕಾರಣಗಳಿದ್ದವು. ಅಂತಹ ಕಾರಣಗಳಲ್ಲಿ ಮಹಿಳೆಯರ ಶೋಷಣೆಯ ಕಾರಣವೂ ಒಂದಾಗಿದೆ ಎಂದು ಹೇಳಬಹುದು. ಈ ಎಲ್ಲ ಕಾರಣಗಳಿಂದ ಅಂಬೇಡ್ಕರ್‌ರವರು ಮನುಚರಿತ್ರೆಯನ್ನು ಸುಟ್ಟರು ಎಂದು ಹೇಳಲಾಗಿದೆ.

ಮನುಚರಿತೆಯು ಮಹಿಳೆಯರ ದೃಷ್ಟಿಯಲ್ಲಿ ಹೀನಾಯವಾಗಿ ಕಂಡುಬಂದಿತು. ಮನುಚರಿತ್ರೆಯನ್ನು ರಚಿಸಿದಂತೆ, ಸಂವಿಧಾನವನ್ನು ಅಂಬೇಡ್ಕರ್ ರವರು ರಚಿಸಲಿಲ್ಲ. ಸಂವಿಧಾನದಲ್ಲಿ ಮಹಿಳೆಗೆ ಸಮಾನತೆಯ ಹಕ್ಕುಗಳನ್ನು ಹೆಣ್ಣು-ಗಂಡು ಎಂದು ಬೇದವಿಲ್ಲದೆ ಸಂವಿಧಾನದ ಅನುಚ್ಛೇದ ೧೪, ೧೫, ೧೬ರಲ್ಲಿ ರಚಿಸಿ ಸಮಾನ ಹಕ್ಕುಗಳನ್ನು ನೀಡಿ ಗೌರವಿಸಿದರು.

ಗಂಡನು ಜೀವಂತವಾಗಿರುವಾಗ ತನ್ನಪತ್ನಿಗೆ ಆಸ್ತಿಯಲ್ಲಿ ಯಾವುದೇ ರೀತಿಯ ಪಾಲು ದೊರೆಯುವುದಿಲ್ಲ. ಆಸ್ತಿಯು ಗಂಡನ ಹೆಸರಿನಲ್ಲಿಯೇ ಇರುವುದರಿಂದ ಆಸ್ತಿಯಲ್ಲಿ ಹಕ್ಕು ಸಿಗುವುದಿಲ್ಲ. ಆಸ್ತಿಯ ಹಕ್ಕು

ಸಿಗಬೇಕಾದರೆ ಗಂಡನು ಮರಣಹೊಂದಿರಬೇಕಾಗುತ್ತದೆ. ಮತ್ತು ಅವಳು ಗಂಡು ಮಕ್ಕಳನ್ನು ಹೆರಬೇಕು. ಸತ್ತ ಗಂಡನಿಗೆ ಮೀಸಲಿರುವಂತೆ ಗಂಡನ ಮನೆಯಲ್ಲಿಯೆ ಆಕೆ ವಿಧವೆಯಾಗಿ ಜೀವಿಸುವಂತಿರಬೇಕು. ಮರುವಿವಾಹವನ್ನು ಆಕೆ ಬಯಸಬಾರದು ಅಂತಹ ಸಂದರ್ಭಗಳಲ್ಲಿ ಅವಳು ಆಸ್ತಿಯಲ್ಲಿ ಹಕ್ಕನ್ನು ಪಡೆದುಕೊಳ್ಳಲು ಅರ್ಹಳೆನಿಸಿಕೊಳ್ಳುತ್ತಾಳೆ. ಮಹಿಳೆಯರು ಮಾಡುವಂತ ಮನೆಕೆಲಸಕ್ಕೆ ಬೆಲೆ ಇರುತ್ತಿರಲಿಲ್ಲ. ಆದಾಯದ ಕರವನ್ನೂ ಕಟ್ಟಲು ಪುರುಷರು ಸ್ತ್ರೀಯರ ಉತ್ಪನ್ನದ ಅರ್ಧ ತೆರಿಗೆಯನ್ನು ಆದಾಯ ತೆರಿಗೆಗಳಿಗೆ ಕಟ್ಟುತ್ತಿರುತ್ತಾರೆ.

ಒಟ್ಟಿನಲ್ಲಿ ಆ ಹಣದ ಮೇಲೆ ಸ್ತ್ರೀಯರು ಹಕ್ಕನ್ನು ಪಡೆದುಕೊಳ್ಳುವುದು ಬಹಳ ಕಡಿಮೆಯಾಗಿ ಕಂಡುಬಂದಿದೆ. ಪತಿಯ ನಿತ್ಯ ಆದಾಯದಲ್ಲಿ ಸ್ತ್ರೀಗೆ ಪಾಲನ್ನು ಕೊಡಬೇಕೆಂದು ಮಹಿಳಾ ಸಂಘಟನಕಾರರು ಮತ್ತು ಮಹಿಳಾ ಚಳುವಳಿಕಾರರು ನಿರಂತರವಾಗಿ ಹೋರಾಟವನ್ನು ಮಾಡುತ್ತ ಬಂದಿದ್ದಾರೆ. ಆದರೆ ಆ ಕಾನೂನು ಇನ್ನೂ ಯಶಸ್ವಿಯಾಗಿರದೆ ಇರುವುದು ತಿಳಿದುಬಂದಿದೆ.[೬]

ಆಸ್ತಿಯ ಹಕ್ಕಿನ ಬಗ್ಗೆ ಚರ್ಚಿಸುವಾಗ ವರದಕ್ಷಿಣೆಯ ಬಗ್ಗೆಯೂ ಚರ್ಚಿಸುವುದು ಅಗತ್ಯವಾಗಿದೆ. ಏಕೆಂದರೆ ಹುಡುಗಿಯರೇ ಇಂದು ಹೆಚ್ಚಾಗಿ ವರದಕ್ಷಿಣೆಯನ್ನು ಸಮರ್ಥಿಸುತ್ತಿದ್ದಾರೆ. ತಂದೆಯ ಆಸ್ತಿಯಲ್ಲಿ ನಮಗೆ ಹಕ್ಕು ಸಿಗುವುದಿಲ್ಲ ಅದಕ್ಕಾಗಿ ಏನಾದರೂ ಮಾಡಿ ಇದನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿ ನಮ್ಮ ಪಾಲನ್ನು ವರದಕ್ಷಿಣೆಯ ರೂಪದಲ್ಲಿ ತೆಗೆದುಕೊಂಡು ಹೋಗುತ್ತೇವೆ. ತಂದೆಯ ಮರಣದ ನಂತರ ಬಂಧುಗಳ ನಡುವೆ ನಮಗೆ ಜಗಳಗಳು ಬೇಕಾಗಿಲ್ಲವೆನ್ನುವ ವಿಚಾರವನ್ನೂ ಅನೇಕ ಮಂದಿ ಮಹಿಳೆಯರು ತೋರ್ಪಡಿಸಿದ್ದಾರೆ.

ಹೆಣ್ಣುಮಕ್ಕಳು ಆಸ್ತಿಯ ಹಕ್ಕನ್ನು ಪಡೆದುಕೊಳ್ಳುವಲ್ಲಿ ಕೆಲವೊಂದು ತಂತ್ರಗಳನ್ನು ಹೂಡಿ ಆಸ್ತಿಯನ್ನು ವರದಕ್ಷಿಣೆಯ ಮೂಲಕ ಪಡೆಯುವುದಾದರೆ, ಅದನ್ನು ಅವಳ ಹೆಸರಿನಲ್ಲೆ ಬ್ಯಾಂಕಿನ ಖಾತೆಗೆ ಜಮಾಯಿಸುವುದು. ಮತ್ತು ಆಸ್ತಿಯಲ್ಲಿನ ಹಕ್ಕು ಪತ್ರವನ್ನು ವಿವಾಹದ ಸಮಯದಲ್ಲಿ ಪಡೆಯುವುದು ಸೂಕ್ತವೆನಿಸುತ್ತದೆ.

ಹೀಗೆಯೇ ಸ್ತ್ರೀಯರ ಹೋರಾಟದಿಂದ ಶಾಸನ ಸಭೆಯ ಮೇಲೆ ಪ್ರಭಾವ ಬೀರುತ್ತದೆ. ಸ್ತ್ರೀಯರಿಗಾಗಿಯೇ ವಿಶೇಷವಾದ ಕಾನೂನುಗಳು ರಚನೆಯಾಗುತ್ತಿವೆ. ಆದರೆ ನ್ಯಾಯಾಲಯಗಳು ಮಾತ್ರ ಸ್ತ್ರೀಯರಿಗೆ ನ್ಯಾಯವಾದ ತೀರ್ಪನ್ನು ಕೊಡುವಲ್ಲಿ ಹಿಂದೇಟು ಹಾಕುತ್ತಿವೆ. ಕಾನೂನಿನ ಮೂಲಕ ನ್ಯಾಯಯುತವಾದ ತೀರ್ಪನ್ನು ಕೊಡಬೇಕಾಗುತ್ತದೆ. ಆದರೆ ಪುರುಷನ ವರ್ಚಸ್ಸಿನ ವಿಚಾರಧಾರೆಯ ಕಾನೂನನ್ನು ಯಶಸ್ವಿಯಾಗದಂತೆ ನೋಡಿಕೊಳ್ಳುತ್ತದೆ.[೭] ಈ ಎಲ್ಲ ಸಮಸ್ಯೆಗಳ ಪರವಾಗಿ ಚಳುವಳಿಕಾರರು ಮಹಿಳೆಯರಿಗೆ

ಯಾವುದೇ ರೀತಿಯ ತಾರತಮ್ಯವಿಲ್ಲ ದಂತೆ ಅವರಿಗೂ ಅಧಿಕಾರದ ಎಲ್ಲಹಕ್ಕುಗಳು ಇರಬೇಕೆಂದು ಹೋರಾಟಗಳನ್ನು ಮಾಡುತ್ತಿದ್ದಾರೆ.

## ವಿವಾಹದ ಹಕ್ಕು

ಭಾರತೀಯ ಸಂಸ್ಕೃತಿಯಲ್ಲಿ ಬಾಲ್ಯವಿವಾಹಗಳು ಹೆಚ್ಚಾಗಿ ನಡೆಯುತ್ತಲೇ ಬರುತ್ತಿವೆ. ಮಕ್ಕಳು ಆಟವಾಡುವ ವಯಸ್ಸಿನಲ್ಲಿಯೇ ಮದುವೆ ಮಾಡಿ ತಮ್ಮ ಕೈತೊಳೆದುಕೊಳ್ಳಬೇಕೆಂದು ತಂದೆ-ತಾಯಿಯರು ಬಾಲ್ಯದಲ್ಲಿಯೇ ವಿವಾಹವನ್ನು ಮಾಡಿಮುಗಿಸುತ್ತಿದ್ದಾರೆ. ಬಾಲ್ಯವಿವಾಹದಿಂದ ಹೆಣ್ಣು ಮಕ್ಕಳಿಗೆ ಅನೇಕ ರೀತಿಯ ತೊಂದರೆಗಳಾಗುತ್ತವೆ. ಪತಿ ಎಂದರೆ ಏನು ಎಂಬುದನ್ನು ಅರಿಯುವ ಮೊದಲೇ ಪತಿಯನ್ನು ಕಳೆದುಕೊಂಡ ಬಾಲವಿಧವೆಯರು ಜೀವನದಲ್ಲಿ ನರಕಯಾತನೆಯನ್ನು ಅನುಭವಿಸುವುದು ಕಂಡುಬರುತ್ತದೆ. ಬಾಲವಿಧವೆಯರಿಗೆ ಯೋಗ್ಯಶಿಕ್ಷಣ ದೊರೆಯದೆ, ಯೋಗ್ಯವರನನ್ನು ಹುಡುಕಿ ಲಗ್ನ ಮಾಡದೆ ಇರುವುದು ಬಾಲಕಿಯರ ದುರದುಷ್ಟಕರವಾದ ಸಂಗತಿಯಾಗಿದೆ. ವಿವಾಹ ಮತ್ತು ವಿವಾಹದ ಹಕ್ಕುಗಳನ್ನು ಕುರಿತು ಗಾಂಧೀಜಿಯವರು ಈ ರೀತಿಯಾಗಿ ಅಭಿಪ್ರಾಯ ಪಟ್ಟಿದ್ದಾರೆ.

"ಕುಟುಂಬದಲ್ಲಿ ತಂದೆ-ತಾಯಿಯರು ಮಕ್ಕಳನ್ನು ಬೆಳೆಸುವಾಗ ಹೆಣ್ಣು-ಗಂಡು ಎಂದು ಬೇಧ-ಭಾವ ಮಾಡದೆ, ಹೆಣ್ಣು ಮಕ್ಕಳಿಗೂ, ಗಂಡು ಮಗನಿಗೂ ಸಮಾನವಾದ ಶಿಕ್ಷಣವನ್ನೂ ಕೊಡಿಸಬೇಕು. ಜೊತೆಗೆ ಆಸ್ತಿಯ ಹಕ್ಕುಗಳಿರಲೇ ಬೇಕೆಂದು ಹೇಳುವ ಹಟವಾದಿ ನಾನು" ಎಂದು ಗಾಂಧೀಜಿಯವರು ಅಭಿಪ್ರಾಯಪಟ್ಟಿದ್ದಾರೆ.[೮]

ಹೆಣ್ಣುಗಂಡು ಒಂದೇ. ಇಬ್ಬರದೂ ಒಂದೇ ಆತ್ಮ, ಇಬ್ಬರ ಜೀವನವೂ ಒಂದೇ, ಇಬ್ಬರ ಭಾವನೆಗಳೂ ಒಂದೇ. ಹೆಣ್ಣುಗಂಡುಗಳು ಇಬ್ಬರು ಒಟ್ಟುಗೂಡದೆ ಜೀವನ ಪೂರ್ಣತೆಯನ್ನು ಪಡೆಯುವುದಿಲ್ಲ. ಒಬ್ಬರ ಪ್ರತ್ಯಕ್ಷ ಸಹಾಯವಿಲ್ಲದೆ ಇನ್ನೊಬ್ಬರು ಜೀವಿಸುವಂತಿಲ್ಲ ಎಂದು ಹೇಳುತ್ತಾ ಪ್ರತಿಯೊಂದು ಕ್ಷೇತ್ರದಲ್ಲಿಯೂ ಹೆಣ್ಣುಗಂಡುಗಳಿರಬೇಕು. ಹೆಣ್ಣನ್ನೂ ಕೀಳೆಂದು ಭಾವಿಸಬಾರದು ಹಾಗೆಯೇ ಗಂಡು ಮೇಲೂ ಎಂತಲೂ ಮಾಡಬಾರದು ಎಂಬುದು ಗಾಂಧಿ ವಿಚಾರ ಮಾರ್ಗ ಪುಸ್ತಕದಿಂದ ತಿಳಿದುಬಂದಿದೆ.

ಹೆಣ್ಣು ಮಕ್ಕಳಿಗೆ ಮದುವೆಯ ವಿಷಯದಲ್ಲಿ ಆಯ್ಕೆ ಇರಬೇಕು ಏಕೆಂದರೆ ವಿವಾಹಿತ ಹೆಣ್ಣು ಇಡೀ ಜೀವನವನ್ನೆಲ್ಲ ಅವನೊಂದಿಗೆ ಹಂಚಿಕೊಂಡು ಜೀವಿಸಬೇಕಾಗುತ್ತದೆ. ಆದುದರಿಂದ ವಿವಾಹದ ಆಯ್ಕೆಯು ತಂದೆ-ತಾಯಿಗಳಿಗೆ ಮೀಸಲಾಗದೆ ವಿವಾಹವಾಗುವ ಹೆಣ್ಣಿಗೆ ಸೀಮಿತವಾಗಬೇಕೆಂದು ಮಹಿಳಾ ಸಂಘಟನೆಗಳು ಮತ್ತು ಚಳುವಳಿಗಳು ಹೋರಾಟವನ್ನು ಮಾಡುತ್ತಿವೆ. ಈ ಹೋರಾಟದ ಫಲವಾಗಿ ಹೆಣ್ಣು ಮಕ್ಕಳ ವಿವಾಹಿತ ವಯಸ್ಸು ೧೪-೧೬ ಇದ್ದದ್ದು ೧೬-೧೮ರ ಮೇಲಿನ ವಯಸ್ಸಿಗೆ ಏರಿದೆ. ಇದಕ್ಕಿಂತ ಕಡಿಮೆ

ವಯಸ್ಸಿಗೆ ವಿವಾಹ ಮಾಡಿದರೆ ಕಾನೂನಿನಡಿಯಲ್ಲಿ ಸಿಲುಕಿ ಕೊಳ್ಳಬೇಕಾಗುತ್ತದೆ ಎಂಬ ವಾದವನ್ನು ಮಂಡಿಸಿದರು.

ವಿವಾಹವು ಪುರುಷ ಪ್ರಧಾನರು ಹಾಕಿಕೊಟ್ಟ ಚೌಕಟ್ಟಿನಲ್ಲಿಯೇ ನಡೆಯಬೇಕು. ಅಂತರ ಜಾತಿಯ ವಿವಾಹಕ್ಕೆ ಸಾಮಾಜಿಕ ಮನ್ನಣೆ ಇದ್ದಿಲ್ಲ. ವಿವಾಹದ ಎಲ್ಲ ನಿಯಮಗಳಿಗೆ ಬದ್ಧರಾಗಿಯೇ ವಿವಾಹವನ್ನು ಕೈಗೊಳ್ಳಬೇಕಾಗಿತ್ತು ಎಂಬ ಪಿತೃಪ್ರಧಾನ ವ್ಯವಸ್ಥೆಯ ವಿರುದ್ಧ ಚಳುವಳಿಗಳು ದಂಗೆ ಹೇಳುತ್ತಿವೆ.

## ಅತ್ಯಾಚಾರ

ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ಭೋಗ ವಸ್ತುವನ್ನಾಗಿ ಪರಿಭಾವಿಸುವ ಮನೋಭಾವಕ್ಕೆ ನಮ್ಮ ಸಂಸ್ಕೃತಿಯು ಬೆಳೆದುಬಿಟ್ಟಿದೆ. ಇತಿಹಾಸದುದ್ದಕ್ಕೂ ಹೆಣ್ಣು ಭೋಗವಸ್ತುವಾಗಿ ಜನಪ್ರಿಯ ಕಲೆ, ಸಾಹಿತ್ಯ ಶಿಲ್ಪಗಳಲ್ಲಿ ಬಿಂಬಿತಳಾಗುತ್ತ ಬಂದಿದ್ದಾಳೆ. ಹೆಣ್ಣು ಬಾಹ್ಯ ಸೌಂದರ್ಯದ ಅಪೇಕ್ಷಣೆಯ ಮಾದರಿಯಲ್ಲಿಟ್ಟು ನೋಡುವ ಕಣ್ಣುಗಳು ಗಂಡಿಗೊಂದೆ ಇರುವುದಿಲ್ಲ. ಅದೇ ಆಪೇಕ್ಷಣೆಯ ನೋಟವನ್ನು ತನ್ನ ಸ್ವಂತ ದೇಹದ ಕಡೆ ಬೀರುವಂತೆ ಮಾಡುವ ಸಾಮಾಜಿಕ ಬಂಧಗಳಿವೆ. ಸ್ತ್ರೀ-ಪುರುಷ ಸಂಬಂಧವು ಎಲ್ಲಿಯವರೆಗೆ ಭೋಗ್ಯ-ಭೋಜಕ ಸಂಬಂಧದ ನೆಲೆಯಲ್ಲಿರುತ್ತದೆಯೋ ಅಲ್ಲಿಯವರೆಗೆ ಹೆಣ್ಣು ಸಮಾನತೆಯ ನೆಲೆಯ ಗೌರವಗಳು ಪುರುಷನಿಂದ ಸಿಗುವುದಿಲ್ಲ ಎನ್ನುವುದರ ವಿರುದ್ಧವಾಗಿ ಮಹಿಳಾ ಚಳುವಳಿಗಳು ಇಂಥ ದೇಹಮೂಲ ಸ್ತ್ರೀ ವಿರೋಧಿ ಚಿಂತನೆಗಳ ವಿರುದ್ಧ ದೊಡ್ಡ ಪ್ರತಿಭಟನೆಯನ್ನೇ ರೂಪಿಸಿದವು. ಮೊದಲಿಗೆ ಅತ್ಯಾಚಾರಕ್ಕೆ ಒಳಗಾದ ಹೆಣ್ಣಿನ ಮೇಲೆ ಅತ್ಯಾಚಾರದ ಅಪರಾಧವನ್ನು ಸಾಬೀತುಪಡಿಸುವುದು ಅವಳ ಹೊಣೆಗಾರಿಕೆಯಾಗಿತ್ತು. ಅತ್ಯಾಚಾರಕ್ಕೊಳಗಾದ ಹೆಣ್ಣಿನ ಮನಸ್ಥಿತಿ, ಕುಟುಂಬ ವರ್ಗದವರ ಅವಮಾನದ ಪ್ರಶ್ನೆಗಳು ಹಾಗೂ ಸಾಕ್ಷಿಗಳ ನಾಶ, ಬೆದರಿಕೆಗಳ ಕಾರಣದಿಂದ ಅಪರಾಧಗಳನ್ನು ಸಾಬೀತುಪಡಿಸುವುದು ಸಾಧ್ಯವಿರಲಿಲ್ಲ. ಇದರಿಂದ ಅತ್ಯಾಚಾರಗಳು ಸುಲಭವಾಗಿ ನಡೆಯುತ್ತಿದ್ದವು. ಮಹಿಳಾ ಚಳುವಳಿಗಳ ಹೋರಾಟದಿಂದಾಗಿ ಅತ್ಯಾಚಾರಕ್ಕೆ ಸಂಬಂಧಪಟ್ಟ ಕಾನೂನಿನಲ್ಲಿ ತಿದ್ದುಪಡಿಯುಂಟಾದದ್ದು ಮುಖ್ಯವಾದ ವಿಷಯವಾಗಿದೆ. ಅತ್ಯಾಚಾರದ ಆಪಾದನೆಗೊಳಗಾದ ವ್ಯಕ್ತಿ ತಾನು ಅಪರಾಧಿಯಲ್ಲ ಎಂಬುದನ್ನು ನ್ಯಾಯಾಲಯದಲ್ಲಿ ಸಾಬೀತುಪಡಿಸಬೇಕು ಎನ್ನುವಂತೆ ಕಾನೂನನ್ನು ತಿದ್ದುಪಡಿಗೆ ತರಲಾಗಿದೆ.[೯]

ಹೀಗೆ ಸಾರ್ವಜನಿಕ ಪ್ರತಿಭಟನೆ ಹಾಗೂ ಬೀದಿಗಿಳಿದ ಮಹಿಳಾ ಸಂಘಟನೆಗಳ ಪ್ರತಿಭಟನೆಯಿಂದ ಹಲವಾರು ಕಾರಣಗಳಿಂದ ಮುಚ್ಚಿಹೋದ ಅತ್ಯಾಚಾರದ ಪ್ರಕರಣಗಳಿಗೆ ಮರುಜೀವ ಬಂದಂತಾಯಿತು. ರಾಜಕೀಯ ಹಾಗೂ ನ್ಯಾಯಾಂಗ ವ್ಯವಸ್ಥೆಯಲ್ಲಿ ಪುರುಷರ ಪ್ರತಿಕ್ರಿಯೆಗಳು ಸ್ತ್ರೀಯರ ವಿರೋಧವಾಗಿ ಕಂಡುಬಂದವು. ಮಹಿಳೆಯರಿರುವುದೇ ಭೋಗಿಸಲಿಕ್ಕಲ್ಲವೆ? ಎನ್ನುವ ಪುರುಷ ಪ್ರಧಾನ ನಿಲುವಿನಿಂದಾಗಿ

ಮಹಿಳಾ ಸಂಘಟನೆಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ಕ್ರಿಯಾಶೀಲತೆಯಿಂದ ಅತ್ಯಾಚಾರದ ವಿರೋಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡವು. ಅತ್ಯಾಚಾರದ ಪರವಾಗಿ ಮುಂಬಯಿಯ ಅನಿಲ್ ಥಟ್ಟೆ ಎಂಬ ಪತ್ರಕರ್ತ ತನ್ನ ಪತ್ರಿಕೆಯಲ್ಲಿ 'ಅತ್ಯಾಚಾರವನ್ನು ಮಾಡುವುದು ಹೇಗೆ?" ಎಂಬ ಲೇಖನವನ್ನು ಬರೆದಿದ್ದನು. ಇವನ ವಿರುದ್ಧವಾಗಿ ಮುಂಬಯಿಯ ಮಹಿಳಾ ಪತ್ರಕರ್ತರು ಅವನ ಮೇಲೆ ಶೀಘ್ರ ಕ್ರಮಕೈಗೊಂಡು ಬಂಧಿಸಬೇಕೆಂದು ತಮ್ಮ ಹೋರಾಟಗಳ ಮೂಲಕ ಒತ್ತಾಯಿಸಿದರು.[೧೦]

ಲೈಂಗಿಕ ಅಪರಾಧಗಳಿಗೆ ಸಂಬಂಧಿಸಿದಂತೆ ಕಾನೂನುಗಳ ಸುಧಾರಣೆಗಾಗಿ ನವದೆಹಲಿಯ ಸ್ತ್ರೀವಾದಿ ಸಂಶೋಧನಾ ಕೇಂದ್ರದ 'ಷೊಮೊನಾ ಖನ್ನಾ ಹಾಗೂ ರತ್ನಾಕಪೂರ್ 'ರವರು ೧೯೯೬ರಲ್ಲಿ ಒಂದು ಮನವಿ ಪತ್ರವನ್ನು ತಯಾರಿಸಿದರು. ಮಹಿಳೆಯರು ಮಕ್ಕಳು ಹಾಗೂ ಹದಿಹರೆಯದವರ ಮೇಲೆ ಪುರುಷರು ನಡೆಸುವ ಹಿಂಸಾಚಾರವನ್ನು ಹತ್ತಿಕ್ಕಲು ಕಾನೂನುಗಳ ಕೆಲವು ಸುಧಾರಣೆಗಳನ್ನು ಶಿಫಾರಸ್ಸು ಮಾಡಿದರು.

ರಾಷ್ಟ್ರೀಯ ಮಹಿಳಾ ಆಯೋಗ ಸ್ಥಾಪಿಸಿದ ತಾತ್ಕಾಲಿಕ ಉಪಸಮಿತಿಯು ತನ್ನ ೧೯೯೩ರ ಲೈಂಗಿಕ ಹಲ್ಲೆಕರಡು ಮಸೂದೆಯಲ್ಲಿ ಅತ್ಯಾಚಾರಕ್ಕೆ ಸಂಬಂಧಿಸಿದ ಕಾನೂನುಗಳನ್ನು (IPC) ಭಾರತದ ದಂಡಸಂಹಿತೆಯಲ್ಲಿ ಅಳವಡಿಸಲಾಗಿದೆ. ಅತ್ಯಾಚಾರ(IPC ೩೭೫, ೩೭೬ನೇ ವಿಧಿಗಳು) ಮಹಿಳೆಯರ ಶೀಲದ ಮೇಲಿನ ಆಕ್ರಮಣ(IPC ೫೦೯ನೇ ವಿಧಿ) ಮಹಿಳೆಯ ಶೀಲ ಹರಣದ ಉದ್ದೇಶದಿಂದ ಮಹಿಳೆಯರ ವಿರುದ್ಧ ಆಕ್ರಮಣ(IPC ೩೫೪ ನೇ ವಿಧಿ) ಹಾಗೂ ಮಕ್ಕಳ ವಿರುದ್ಧ ಲೈಂಗಿಕ ದುರಾಚಾರಕ್ಕೆ ಸಂಬಂಧಿಸಿದ ದಂಡನಾ ಅವಕಾಶಗಳನ್ನು[೧೧] ಅತ್ಯಾಚಾರಕ್ಕೆ ಒಳಗಾದ ಹೆಣ್ಣಿಗೂ ತಾಯ್ತನವನ್ನು ಪಡೆದುಕೊಳ್ಳುವ ಸಾಮಾಜಿಕ ಹಕ್ಕನ್ನು ಮತ್ತು ಅವಳಿಗೆ ಅಂಟಿಸಿರುವ ಸಾಮಾಜಿಕ ಪಿಡುಗನ್ನು ತೊಲಗಿಸಿ ಅವಳಿಗೂ ಸಮಾಜದಲ್ಲಿ ಜೀವಿಸುವ ಹಕ್ಕು ಇರಬೇಕು. ಅವಳು ಮನುಷ್ಯಳು ಎನ್ನುವ ಮನೋಭಾವವು ಬೆಳೆಯಬೇಕು. ಅತ್ಯಾಚಾರಕ್ಕೆ ಒಳಗಾದ ಹೆಣ್ಣಿಗೆ ಪಿತೃಪ್ರಧಾನ ಸಮಾಜದಲ್ಲಿ ಸ್ಥಾನಮಾನವಿಲ್ಲದಂತೆ ಕೀಳು ಭಾವನೆಯಿಂದ ಕಾಣಲು ಪುರುಷ ಪ್ರಧಾನವು ಪ್ರಯತ್ನಿಸುತ್ತಿದೆ. ಕಾನೂನಿ ಯಾವುದೇ ಹಕ್ಕು ಬಾದ್ಯತೆಗಳು ಇಲ್ಲವೆನ್ನುವಂತೆ ಸಮಾನವು ಅವಳನ್ನು ಕಾಣುತ್ತಿದೆ. ಈ ಎಲ್ಲವುಗಳ ವಿರುದ್ಧ ಮಹಿಳಾ ಚಳುವಳಿಗಳು ತಮ್ಮ ಹೋರಾಟವನ್ನು ಮುಂದುವರೆಸಿವೆ.

ವಿವಾಹದ ನಿಯಮಗಳನ್ನು ಬದಲಾವಣೆ ಮಾಡಿ ತಾಯ್ತನದ ಜವಬ್ದಾರಿಯನ್ನು ವಹಿಸಿದಂತೆ ಸಮಾನವಾದಂತಹ ಹಕ್ಕು ಇರಬೇಕು ಹಾಗೆಯೇ ಕುಟುಂಬ ನಿಯಂತ್ರಣದಲ್ಲಿಯೂ ಆಕೆಗೆ ಆಯ್ಕೆಯ ಹಕ್ಕು ಇರಬೇಕು. ಕುಟುಂಬ ಯೋಜನೆಯು ಸದ್ಯದಲ್ಲಿ ಮಹಿಳೆಯರ ಆರೋಗ್ಯದ ಮೇಲೆ ಸರಕಾರದ ಧೋರಣೆಯಿಂದ ಅಘಾತವಾದ ಪರಿಣಾಮ ಬೀರುತ್ತಿದೆ. ಸಂತಾನ ನಿರೋಧಕ ಸಾಧನಗಳ ಬಳಕೆಯನ್ನು

ಸ್ತ್ರೀಯರಿಗೆ ಬಲವಂತವಾಗಿ ಮಾಡಿಸುವುದು ರೂಢಿಯಲ್ಲಿ ಇದೆ. ಸಂತಾನನಿರೋಧಕದಿಂದಾಗುವ ಹಾನಿಕಾರಕ ಪರಿಣಾಮಗಳನ್ನು ಹಿಮ್ಮೆಟ್ಟಿಸಲು ಮಹಿಳಾ ಚಳುವಳಿಗಳು ಹೋರಾಟವನ್ನು ಮಾಡುತ್ತಿವೆ.

ಪುರುಷರ ಸಂತಾನಹರಣ ಶಸ್ತ್ರಚಿಕಿತ್ಸೆಯು ತೀರ ಸುಲಭವಾದರೂ ಸಂತಾನ ನಿಯಂತ್ರಣವನ್ನು ಹೆಚ್ಚಾಗಿ ಸ್ತ್ರೀಯರಿಗೆ ಒಳಪಡಿಸುತ್ತಾರೆ. ಸಂತಾನನಿಯಂತ್ರಣವನ್ನು ಮಾಡಿಸಿಕೊಳ್ಳುವಾಗ ಸ್ತ್ರೀಯರನ್ನು ಹೆದರಿಸಿ ಅದಕ್ಕೆ ಬಲವಂತವಾಗಿ ಒಪ್ಪಿಸುತ್ತಾರೆ. ಸರಕಾರಿ ಆಸ್ಪತ್ರೆಗಳಲ್ಲಿ ಗರ್ಭಪಾತವನ್ನು ಉಚಿತವಾಗಿ ಮಾಡಿದರೂ, ಅಲ್ಲಿಗೆ ಹೋಗುವ ಗರ್ಭಿಣಿ ಸ್ತ್ರೀಯರಿಗೆ ಆಗುವ ಉಪಟಳ ಜಾಸ್ತಿಯಾಗುತ್ತದೆ. ಅದನ್ನು ಸಂಶಯ ದೃಷ್ಟಿಯಿಂದ ಪುರುಷ ಪ್ರಧಾನರು ಕಾಣುತ್ತಿದ್ದರು. ಆದರೂ ಗರ್ಭಪಾತಕ್ಕೆ ಮಾನ್ಯತೆ ಸಿಕ್ಕಿರುವುದು ತುಂಬಾ ಉಪಯೋಗಕಾರಿಯಾದುದಾಗಿದೆ. ಏಕೆಂದರೆ ತಮಗೆ ಮಕ್ಕಳು ಇಷ್ಟವಿಲ್ಲವೆಂದಾಗ ಗರ್ಭಪಾತವನ್ನು ಮಾಡಿಸಿಕೊಳ್ಳಲು ತುಂಬಾ ಉಪಯುಕ್ತವಾಗಿದೆ. ಗರ್ಭಪಾತವನ್ನು ಮಾಡಿಸುವ ಕಾನೂನು ಜಾರಿಗೆ ಬಂದಿರುವುದರಿಂದ ಗರ್ಭಪಾತವನ್ನು ಮಾಡಿಸಿಕೊಳ್ಳುವಾಗ ಯಾವುದೇ ರೀತಿಯ ತೊಂದರೆಗಳು ಆಗುತ್ತಿರುವುದು ಕಂಡುಬರುತ್ತಿರಲಿಲ್ಲ.

ಒಟ್ಟಿನಲ್ಲಿ ಸಂತತಿ ನಿಯಮದ ಬಗ್ಗೆ ಅದರ ಸಾಧನೆಯ ಬಳಕೆಯಲ್ಲಿ ಸ್ತ್ರೀಗೆ ಅವಳ ಶರೀರದ ಪೂರ್ವ ಅಧಿಕಾರ ಅವಳದೇ ಇರಬೇಕೆನ್ನುವ ಆತ್ಮವಿಶ್ವಾಸವನ್ನು ಮಹಿಳೆಯರಲ್ಲಿ ಬೆಳೆಸಬೇಕು. ಮತ್ತು ಅವರಿಗೆ ಎಲ್ಲ ರೀತಿಯ ಹಕ್ಕುಗಳೂ ಇರಬೇಕೆಂಬುದು ಚಳುವಳಿಕಾರರ ಉದ್ದೇಶವಾಗಿದೆ.

## ದತ್ತು ತೆಗೆದುಕೊಳ್ಳುವ ಹಕ್ಕು

ಹಿಂದೂ - ದತ್ತಕ ಅಧಿನಿಯಮ ೧೯೫೬ರ ಪ್ರಕಾರ ಅವಿವಾಹಿತ ಹಿಂದೂ ಮಹಿಳೆ, ವಿಚ್ಛೇದಿತ ಸ್ತ್ರೀ ಅಥವಾ ವಿಧವೆಯರು ಮಗ ಅಥವಾ ಮಗಳನ್ನು ದತ್ತುಪಡೆಯಬಹುದಾಗಿದೆ. ಹಿಂದೆ ಹೆಣ್ಣು ಮಗುವನ್ನು ದತ್ತು ತೆಗೆದುಕೊಳ್ಳುವ ಹಕ್ಕು ಇರಲಿಲ್ಲ. ಏಕೆಂದರೆ ಗಂಡು ಮಕ್ಕಳು ಮಾತ್ರವೇ ತನ್ನ ಪೂರ್ವಜರನ್ನು ಕರ್ಮಗಳಿಂದ ಮುಕ್ತರನ್ನಾಗಿ ಮಾಡಿ ಅವರಿಗೆ ಮೋಕ್ಷವನ್ನು ದೊರಕಿಸಿಕೊಡುತ್ತಾರೆ ಎಂಬ ನಂಬಿಕೆಯು ಹಿಂದೂ ಧರ್ಮದವರಲ್ಲಿ ಮನೆಮಾಡಿಕೊಂಡಿತ್ತು. ಸ್ತ್ರೀಗೂ ದತ್ತು ಪಡೆಯುವ ಅಧಿಕಾರದ ಹಕ್ಕು ಇತ್ತು. ಅದು ಎಂತಹ ಸಂದರ್ಭಗಳಲ್ಲಿ ಎಂದರೆ ತನ್ನ ಗಂಡನು ಮೃತಪಟ್ಟಿದ್ದಾನೆ ಎಂದು ಸಾಬೀತು ಪಡಿಸಿದಾಗ ಮತ್ತು ಗಂಡ ಹೆಂಡತಿಯರಿಬ್ಬರಿಗೆ ಮಕ್ಕಳು ಹಾಗಿಲ್ಲ ಎನ್ನುವ ಕಾರಣದಿಂದ ತನ್ನ ಗಂಡನ ಒಪ್ಪಿಗೆಯನ್ನು ಪಡೆದು ದತ್ತನ್ನು ತೆಗೆದುಕೊಳ್ಳಬಹುದಾಗಿತ್ತು.[೨]

ಗಂಡನ ಅನುಮತಿಯನ್ನು ಪಡೆದು ದತ್ತನ್ನು ತೆಗೆದುಕೊಳ್ಳುವ ಹಕ್ಕನ್ನು ಮಹಿಳಾ ಚಳುವಳಿಗಳು ತೀವ್ರವಾಗಿ ಖಂಡಿಸಿದ್ದುಂಟು. ಪುರುಷರಿಗೆ ಸರಿಸಮಾನವಾಗಿ ದುಡಿಯುವ ಸ್ತ್ರೀಯರು ನಾವು ಯಾವುದರಲ್ಲಿ ಕಡಿಮೆ ಇಲ್ಲ ಎನ್ನುವ ವಿಚಾರವನ್ನು ಮಂಡಿಸುತ್ತ ನಾವು ಸ್ವಂತ ದತ್ತು ತೆಗೆದುಕೊಳ್ಳುತ್ತೇವೆ ಎನ್ನುವುದರ

ಪರವಾಗಿ ದಂಗೆ ಹೇಳುತ್ತಾರೆ. ದತ್ತು ತೆಗೆದುಕೊಳ್ಳುವ ಮತ್ತು ಕೊಡುವ ಅಧಿಕಾರವು ಮುಖ್ಯವಾಗಿ ತಾಯಿಯ ಸಮ್ಮತಿಯು ಅಗತ್ಯವಾಗಿರುತ್ತದೆ. ಮೊದಲನೆಯ ಹೆಂಡತಿಗೆ ಮಕ್ಕಳಿಲ್ಲ ಎಂಬ ಕಾರಣಕ್ಕೆ ಎರಡನೆಯ ಮದುವೆಯಾಗುವುದಕ್ಕೆ ಪತಿಗೆ ಕಾನೂನು ರೀತ್ಯಾ ಯಾವುದೇ ಹಕ್ಕು ಇರುವುದಿಲ್ಲ.

"ವೃದ್ಧ ತಂದೆ ತಾಯಿಯರನ್ನು, ಧರ್ಮಪತ್ನಿಯರನ್ನು ಹಾಗೂ ಎಳೆಯ ಮಕ್ಕಳನ್ನು ನೂರು ತಪ್ಪು ಮಾಡಿಯಾದರೂ ಸರಿ, ಕಾಪಾಡುವುದು ಹಿಂದೂ ಪುರುಷನ ಕರ್ತವ್ಯವಾಗಿರುತ್ತದೆ' ಎಂದು ಮನು ತನ್ನ ಧರ್ಮಶಾಸ್ತ್ರಗಳಲ್ಲಿ ಹೇಳಿದ್ದಾನೆ.[೧೩]

ಹಿಂದೂ ಮಹಿಳೆಯು ಸಹ ತನ್ನ ತಂದೆ ತಾಯಿಯರನ್ನು ಹಾಗೂ ಮಕ್ಕಳನ್ನು ಪೋಷಿಸಲು ಬದ್ಧಳಾಗುತ್ತಾಳೆ. ಈ ರೀತಿಯಾಗಿ ಹಿಂದೂ ಮಹಿಳೆಯರಿಗೂ ದತ್ತು ತೆಗೆದುಕೊಳ್ಳುವ ಸ್ವಂತ ನಿರ್ಧಾರವು ಮಹಿಳೆಯರಲ್ಲಿ ಮೂಡಿಬರಬೇಕು. ಅಂದಾಗ ಮಾತ್ರ ಮಹಿಳೆಯರು ಮುನ್ನುಗ್ಗಲು ಸಾಧ್ಯ ಎಂದು ಚಳುವಳಿಕಾರರ ನಿಲುವಾಗಿದೆ.

ಗರ್ಭಾಶಯದ ಮೇಲೆ ತಾಯ್ತನ ಕೇವಲ ಜವಬ್ದಾರಿಯನ್ನು ಹೊಂದದೆ ಅದು ಅವಳ ಹಕ್ಕಾಗಿ ಪರಿಣಮಿಸಿ, ವೈಯಕ್ತಿಕವಾಗಿ ಮಹಿಳೆಗೆ ಯಾವುದೇ ಮುಖ್ಯವಾದ ಕೆಲಸಗಳನ್ನು ಮಾಡುವಲ್ಲಿ, ಪುರುಷನಂತೆ ಮಹಿಳೆಯರು ನಿರ್ಣಾಯಕ ಹಂತಗಳಲ್ಲಿ ಬಾಗಿಯಾಗಿರಬೇಕು. ಜೊತೆಗೆ ಅಧಿಕಾರದ ಸ್ಥಾನಗಳನ್ನೂ ಬದಲಾಯಿಸಬೇಕು. ಶೈಕ್ಷಣೀಕವಾಗಿ, ಆರ್ಥಿಕವಾಗಿ ಎಲ್ಲ ಬಗೆಯಲ್ಲಿ ಶಕ್ತರಾಗುವಂತೆ ಮಹಿಳೆಯರು ಮುಂದುವರೆದು ಹೋರಾಡಬೇಕು.

ಮಹಿಳೆಯರಿಗೆ ಆರ್ಥಿಕವಾಗಿ ಸಮಪಾಲು ಸಮಾನತೆಯ ಹಕ್ಕು ಇರಬೇಕಾದರೆ ಮೊದಲು ಕೌಟುಂಬಿಕವಾಗಿ ಗೃಹಬಂಧನದಿಂದ ಹೊರಗೆ ಬಂದು ದುಡಿದಾಗ ಮಾತ್ರ ಸಾಧ್ಯ ಎಂದು ಹೇಳಬಹುದು. ಕುಟುಂಬದಲ್ಲಿ ಮಹಿಳೆಯು ಹೆಚ್ಚಾಗಿ ಮನೆಯ ಕೆಲಸಮಾಡುವುದು ಮತ್ತು ಮಕ್ಕಳ ಲಾಲನೆ, ಪಾಲನೆ ಪೋಷಣೆ ಮತ್ತು ಕುಟುಂಬದ ಯಜಮಾನರ ಸೇವೆಯನ್ನು ಮಾಡುತ್ತ ಕುಟುಂಬದ ನಾಲ್ಕು ಗೋಡೆಗಳ ಮಧ್ಯೆ ತಮ್ಮ ಜೀವನವನ್ನು ಸಾಗಿಸುತ್ತಿರುತ್ತಾರೆ. ಕುಟುಂಬದಲ್ಲಿ ಮಹಿಳೆಯು ಮಾಡಿದ ಕೆಲಸಕ್ಕೆ ಸರಿಯಾದ ಪ್ರತಿಫಲ ಸಿಗದೆ ಅವಳು ಮಾಡಿದಂತೆ ಕೆಲಸವನ್ನೂ ಸೇವೆಯೆಂದು ಪರಿಗಣಿಸುತ್ತಿದ್ದರು.

ಶ್ರಮಕ್ಕೆ ತಕ್ಕ ಪ್ರತಿಫಲ ಸಿಗದೆ ಇದ್ದಾಗ ಮಹಿಳೆಯು ಆರ್ಥಿಕ ಶೋಷಣೆಗೆ ಗುರಿಯಾಗಿ, ಅಸಮಾನತೆ, ಪರಾವಲಂಬನೆ ಮತ್ತು ಸ್ವಇಚ್ಛೆಗೆ ವಿರುದ್ಧವಾದ ಕೆಲಸ ನಡೆಯುವಾಗ ಶೋಷಣೆಗೆ ಗುರಿಯಾಗುತ್ತಾಳೆ. ಆರ್ಥಿಕ ಶೋಷಣೆಗೆ ಒಳಗಾಗಬೇಕಾಗಿದುದರ ಪ್ರಸಂಗವೂ ಶೈಕ್ಷಣಿಕವಾಗಿ ಹಿಂದುಳಿದಿರುವುದೇ ಮುಖ್ಯಕಾರಣವಾಗುತ್ತದೆ.

ಭಾರತದಲ್ಲಿ ಮಹಿಳೆ ಬಾಲ್ಯದಿಂದ ಹಿಡಿದು ಮುಪ್ಪಿನ ಕಾಲದವರೆಗೂ ಹಲವಾರು ಶೋಷಣೆಗಳಿಗೆ ಬಲಿಯಾಗಿದ್ದಾಳೆ ಎಂದು ಹೇಳಬಹುದು. ಹೆಣ್ಣು ಹುಟ್ಟಿದರೆ ಏನೋ ಒಂದು ಅಘಾತವಾಯಿತು ಎನ್ನುವ ಹಾಗೆ ಗಂಡುಶ್ರೇಷ್ಠ. ಹೆಣ್ಣು ಕನಿಷ್ಠ ಎಂಬ ಸಾಮಾಜಿಕ ನಂಬಿಕೆಯು ನೆಲೆಯೂರಿದೆ ಎಂದು ಹೇಳಲಾಗಿದೆ.

ಹಿಂದೂ-ಸಂಪ್ರದಾಯದಲ್ಲಿ ಮಹಿಳೆಯರ ಬಗ್ಗೆ ಪರಸ್ಪರ ವಿರೋಧವಾದ ವಿಚಾರಗಳು ವ್ಯಕ್ತವಾಗಿವೆ. ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಪತಿ ಹಾಗೂ ಮುಪ್ಪಿನಲ್ಲಿ ಮಕ್ಕಳ ರಕ್ಷಣೆಯಲ್ಲಿರಬೇಕು ಅವಳು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂಬ ಮಾತನ್ನು ಮನುವು ವ್ಯಕ್ತಪಡಿಸುತ್ತಾನೆ. ಹೆಣ್ಣು, ತಾಯಿ, ಸೊಸೆ, ಹೆಂಡತಿಯಾಗಿ ಗುರುತಿಸಲ್ಪಟ್ಟಿದ್ದಾಳೆಯೇ ಹೊರತು ಸ್ವತಂತ್ರ ಅಸ್ತಿತ್ವ ಹೊಂದಿದ ವ್ಯಕ್ತಿಯಾಗಿ ಗುರತಿಸಿಲ್ಲ.[೧೪]

ಪಿತೃಪ್ರಧಾನ ಕುಟುಂಬದಲ್ಲಿ ಹೆಣ್ಣಿಗೆ ಸ್ಥಾನಾಮಾನವಿಲ್ಲದಿರುವುದನ್ನು ಮಹಿಳಾ ಚಳುವಳಿಗಳು ವಿರೋಧವನ್ನು ವ್ಯಕ್ತಪಡಿಸುತ್ತವೆ. ಸಂಪ್ರದಾಯಿಕವಾಗಿ ಬ್ರಹ್ಮಚರ್ಯ ಆಶ್ರಮದಿಂದ ವಂಚಿತಳಾದ ಮಹಿಳೆ ಶಿಕ್ಷಣದಿಂದಲೂವಂಚಿತಳಾಗಿದ್ದಾಳೆ ಹಾಗೂ ಪಿತ್ರಾರ್ಜಿತ ಆಸ್ತಿಯ ಹಕ್ಕಿನಲ್ಲಿಯೂ ತಿರಸ್ಕೃತಗೊಂಡಿದ್ದಾಳೆ. ಸಾಮಾಜಿಕವಾಗಿ ಹಲವು ವಂಚನೆಗೆ ಒಳಗಾದ ಮಹಿಳೆಯರು ಆರ್ಥಿಕವಾಗಿಯೂ ಶೋಷಣೆಗೆ ಒಳಗಾಗಿದ್ದುದು ಕಂಡುಬಂದಿದೆ. ಈ ಹಕ್ಕುಗಳನ್ನು ತಡೆದುಕೊಳ್ಳಲು ಮಹಿಳಾಚಳುವಳಿಗಳು ಹೋರಾಡುತ್ತಲಿವೆ.

ಆಧುನಿಕ ಸ್ವತಂತ್ರ ಭಾರತದಲ್ಲಿ ಮಹಿಳೆ ಸಂವಿಧಾನಾತ್ಮಕವಾಗಿ ಸಮಾನಳು ಆದರೆ ಬದುಕಿನ ಎಲ್ಲ ಹೆಜ್ಜೆಗಳಲ್ಲಿ ಅವಳು ಅಸಮಾನತೆಯನ್ನು ಅನುಭವಿಸುತ್ತಿದ್ದಾಳೆ. ಇತಿಹಾಸ ಕಾಲದಿಂದಲೂ ಮಹಿಳೆ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದು ಸ್ವಾವಲಂಬಿಯ ಬದುಕನ್ನು ನಡೆಸುತ್ತಿರಲಿಲ್ಲ. ಇದರಿಂದ ಮಹಿಳೆ ತನ್ನಲ್ಲಿರುವ ಕ್ರಿಯಾಶೀಲತೆಯನ್ನು ಕಳೆದುಕೊಂಡು ವ್ಯವಸ್ಥೆಯೊಂದಿಗೆ ಹೊಂದಿಕೊಂಡು ಬಂದಿದ್ದಾಳೆ. ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಎಲ್ಲ ಸ್ವಾತಂತ್ರಗಳು ಶೂನ್ಯವೆಂಬುದು ಹಲವಾರು ಚಳುವಳಿಕಾರರ ಚಿಂತನೆಯಾಗಿದೆ. ಮಹಿಳೆಯರನ್ನು ಆರ್ಥಿಕತೆಯಿಂದ ಮುಕ್ತಗೊಳಿಸಿ ಸಾಮಾಜಿಕ ಸಮಾನತೆಯನ್ನು ತರುವಲ್ಲಿ ಹಲವಾರು ಶಾಸನಗಳು ಕಾಯ್ದೆ ಕಾನೂನುಗಳು ಮಹಿಳಾ ಸಂಘಟನೆಗಳೂ ದೀರ್ಘವಾದ, ನಿರಂತರವಾದ ಶ್ರಮವನ್ನು ವಹಿಸುತ್ತಲಿವೆ.

ಆಧುನೀಕರಣಗೊಂಡ ಮಹಿಳೆ ವಿಮೋಚನೆಗಾಗಿ ಆಲೋಚಿಸುತ್ತಿದ್ದು ಒಟ್ಟಾರೆ ಬದುಕಿಗೆ ಹೆಣ್ಣುಗಂಡಿನ ಅವಶ್ಯಕತೆ ಇದೆ. ಆದುದರಿಂದ ವಿಮೋಚನ ಚಳುವಳಿ ತೀವ್ರ ಸ್ವರೂಪ ಪಡೆದು ತಾಯ್ತನವನ್ನೆ ಪ್ರಮುಖ ಅಂಗವಾಗಿ ಪಡೆದು ಆರ್ಥಿಕತೆಯ ಸಮಾನತೆಗಾಗಿ ಮಹಿಳಾ ಚಳುವಳಿಗಳ ನಿರಂತರ ಹೋರಾಟದಿಂದ ಸುಧಾರಿಸುತ್ತ ಬಂದಿದೆ. ಹಾಗೆ ಆರ್ಥಿಕತೆಗಾಗಿ ಹೋರಾಡಿದಂತೆ ಶಿಕ್ಷಣದಲ್ಲಿಯ ಸಮಾನತೆಗಾಗಿ

ಹೋರಾಡಿದರು. ಭಾರತೀಯ ಸಮಾಜದಲ್ಲಿ ಶತಮಾನಗಳಿಂದಲೂ ಶಿಕ್ಷಣದ ಅವಕಾಶಗಳನ್ನು ಪುರುಷರಿಗೆ ಹೋಲಿಕೆ ಮಾಡಿ ನೋಡಿದಾಗ ಪುರುಷರಿಗಿಂತ ಸ್ತ್ರೀಯರಿಗೆ ಕಡಿಮೆಯಾಗಿರುವುದು ಕಂಡುಬರುತ್ತದೆ. ಹಿಂದೆಗಿಂತಲೂ ಸ್ತ್ರೀಯರಿಗೆ ಈಗ ಶಿಕ್ಷಣದ ವ್ಯವಸ್ಥೆಯಲ್ಲಿ ಬದಲಾವಣೆ ಆಗಿದೆ. ಆದರೂ ಸಹ ಹಂಚಿಕೆಯಲ್ಲಿ ಸಮಾನತೆಯು ಕಂಡುಬಂದಿಲ್ಲ. ಆಹಾರದಷ್ಟೆ ಮೂಲಭೂತ ಅವಶ್ಯಕತೆಯಿಂದ ಶಿಕ್ಷಣವನ್ನು ಪಡೆಯುವಲ್ಲಿ ಮಹಿಳೆಯರಿಗೆ ಲಿಂಗ ತಾರತಮ್ಯವು ಸೇರಿಕೊಂಡಿದೆ.

ಶತಮಾನಗಳಿಂದ ಹೆಣ್ಣಿನ ಬದುಕನ್ನು ವಿವಾಹ ಮತ್ತು ತಾಯ್ತನಗಳೆಂಬ ಎರಡು ಸಂಕೋಲೆಗಳಲ್ಲಿ ಬಂಧಿಸಿ, ಅವಳಿಗೆ ಶಿಕ್ಷಣವನ್ನು ಪಡೆಯುವ ಹಕ್ಕನ್ನು ನಿರಾಕರಿಸುತ್ತಾ ಬಂದಿರುವ ಸಾಮಾಜಿಕ ಮೌಲ್ಯಗಳು ಅವಳನ್ನು ಶಿಕ್ಷಣದಿಂದ ವಂಚಿತಳನ್ನಾಗಿ ಮಾಡಿ ಬಿಟ್ಟಿವೆ.

ಹೆಣ್ಣು ಶಿಶುವಿನ ಜನನವನ್ನೆ ಒಂದು ಶಾಪವೆಂದು ತಿಳಿದಿದ್ದ ಪೋಷಕರು ಅವಳಿಗೆ ಶಿಕ್ಷಣವನ್ನು ಒದಗಿಸುವಲ್ಲಿ ಯಾವುದೇ ಆಸಕ್ತಿಯನ್ನು ತೋರುತ್ತಿರಲಿಲ್ಲ. ಅವಳಿಗೆ ಚಿಕ್ಕವಯಸ್ಸಿನಲ್ಲಿಯೇ ಮದುವೆ ಎಂಬ ನೊಗಕ್ಕೆ ಕಟ್ಟಿ ಅವಳನ್ನು ಸಾಂಸಾರಿಕ ಬಂಧನದಲ್ಲಿ ಸಿಲುಕಿಸುತ್ತಿದ್ದರು. ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿದರೂ ಸಹ ಅವಳು ಕುಟುಂಬದಲ್ಲಿ ಮಾಡುವಂಥ ಕೆಲಸಗಳಿಗೆ ಅವಶ್ಯಕವಾದ ಶಿಕ್ಷಣವನ್ನು ನೀಡುತ್ತಿದ್ದರೆ ಹೊರತು, ಹೊರಗಿನ ಪ್ರಾಪಂಚಿಕ ಜ್ಞಾನವನ್ನು ನೀಡುತ್ತಿರಲಿಲ್ಲ. ಹೆಣ್ಣಿನ ಪ್ರಪಂಚ ಮನೆಗೇ ಸೀಮಿತ ಅವಳ ಜೀವನದ ಗುರಿಗಳೆಂದರೆ, ತಾಯಿಯಾಗಿ, ಹೆಂಡತಿಯಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸುವುದಾಗಿದೆ ಎಂಬುದು ಇಂದಿಗೂ ಕಂಡುಬರುವಂತ ಸಂಗತಿಯಾಗಿದೆ. ಕುಟುಂಬದಲ್ಲಿ ಅವಳು ಹೆಂಡತಿಯಾಗಿ, ತಾಯಿಯಾಗಿ ಕಾರ್ಯ ಮಾತ್ರ ನಿರ್ವಹಿಸದೆ ಅವಳಿಗೆ ಹೆಚ್ಚಿನ ಶಿಕ್ಷಣವನ್ನು ನೀಡುವುದರ ಮೂಲಕ ಪ್ರಾಪಂಚಿಕ ಜ್ಞಾನವನ್ನು ನೀಡುವಂತ ಶಿಕ್ಷಣವನ್ನು ಕೊಡಿಸಬೇಕು.[೧೫]

ಗಂಡು ಮಗು ಭವಿಷ್ಯದ ಎಲ್ಲ ಸಮಸ್ಯೆಗಳಿಗೆ ಪರಿಹಾರವನ್ನು ನೀಡಬಲ್ಲಂಥವನು ಎಂದು ತಮಗೆ ಇರುವ ಸಂಪನ್ಮೂಲಗಳನ್ನು ಹೆಚ್ಚಾಗಿ ಗಂಡುಮಕ್ಕಳ ಶಿಕ್ಷಣದ ಸಲುವಾಗಿ ವ್ಯಯಮಾಡುತ್ತಾರೆ. ಕುಟುಂಬದಲ್ಲಿ ಆರ್ಥಿಕ ಸಂಪನ್ಮೂಲಗಳು ಕಡಿಮೆಯಿದ್ದಾಗಲು ಸಹ ಹೆಚ್ಚಾಗಿ ಮಗನ ಭವಿಷ್ಯಕ್ಕಾಗಿ ವ್ಯಯ ಮಾಡುವ ಪೋಷಕರು ಅನೇಕ ಮಂದಿ ಇದ್ದರೆ, ತಮ್ಮ ಮಗಳು ವಿವಾಹವಾದ ನಂತರ ಪರರ ಮನೆಗೆ ಹೋಗುವವಳು, ಅವಳು ಕೆಲಸಕ್ಕೆ ಸೇರಿದರೂ ಅವಳ ಗಳಿಕೆಯ ಮೇಲಿನ ಅಧಿಕಾರ ತನ್ನ ಗಂಡನಿಗೆ ತನ್ನ ಕುಟುಂಬಕ್ಕೆ ಸೇರುವಂತಹದ್ದು ತಮಗೆ ಈ ಶಿಕ್ಷಣದಿಂದ ಯಾವುದೇ ಬಗೆಯ ಪ್ರಯೋಜನವಿಲ್ಲ ಎನ್ನುವವರು ಇದ್ದಾರೆ. ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಆವೃತವಾಗಿರುವ ನಮ್ಮ ಸಾಮಾಜಿಕ ವ್ಯವಸ್ಥೆಯು ಶಿಕ್ಷಣಕ್ಕಿಂತ ವಿವಾಹವೇ ಹೆಣ್ಣಿನ ಜೀವನದ ಪರಮಗುರಿ ಆಕೆಯ ಬದುಕನ್ನು

ಕುರಿತ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರ ಆಕೆಯ ಗಂಡನಿಗೆ ಹೊರತು ಇತರರಿಗೆ ಇರುವುದಿಲ್ಲ ಎಂದು ಕಟ್ಟಿಕೊಟ್ಟಿದೆ.

ಮಹಿಳೆಯು ತಾಯ್ತನವನ್ನು ವಿವಾಹವಾದ ನಂತರ ಪಡೆದುಕೊಂಡಾಗ ಮಾತ್ರ ಅವಳಿಗೆ ಗೌರವವಿರುತ್ತದೆ. ಇಲ್ಲವೆಂದರೆ ಪಿತೃಪ್ರಧಾನ ಸಮಾಜದಲ್ಲಿ ಅವಳನ್ನು ಕೀಳಾಗಿ ಕಾಣಲು ಪ್ರಾರಂಬಿಸುತ್ತಾರೆ. ಹೆಣ್ಣು ವಿವಾಹಿತಳಾಗಿ ತನ್ನ ಜೀವನವನ್ನು ಉತ್ತಮಗೊಳಿಸಿಕೊಳ್ಳಬೇಕಾದರೆ, ಅವಳಿಗೆ ಮುಖ್ಯವಾಗಿ ಬೇಕಾಗಿರುವುದು ತಾಯ್ತನ. ತಾಯ್ತನವು ಎಲ್ಲ ಜಾತಿ ವರ್ಗಗಳಲ್ಲಿಯೂ ಮತ್ತು ಇತರೆ ಪ್ರಾಣಿಗಳಲ್ಲಿಯೂ ಕಂಡುಬರುತ್ತದೆ.

ತಾಯ್ತನವನ್ನು ಪಡೆಯಲಾರದಂತ ಹೆಣ್ಣನ್ನು ಸಮಾಜವು ಬಂಜೆಯ ಪಟ್ಟವನ್ನು ಕಟ್ಟಿ ಅವಳನ್ನು ಕೀಳು ದೃಷ್ಟಿಗೆ ಗುರಿಯಾಗಿಸುತ್ತದೆ. ಬಂಜೆ ಕಣ್ಣು ಬೀಳಬಾರದು ಎನ್ನುವ ಮಾನಸಿಕ ಚಿತ್ರಹಿಂಸೆಗೆ ಗುರಿಯಾಗಿ ತಾಯಿಯಾಗದೆ ಹೆಣ್ಣು ಅಪರಿಪೂರ್ಣಳು ಎನ್ನುವುದು ಸಾಮಾಜಿಕ ನಂಬಿಕೆಯಾಗಿದೆ.

ತಾಯ್ತನದ ಹಕ್ಕನ್ನು ಕೊಡುವುದು ಪುರುಷನೊಬ್ಬನಿಂದಲೇ ಸಾಧ್ಯವಿಲ್ಲ ಹೆಣ್ಣು-ಗಂಡುಗಳ ಪರಸ್ಪರ ಸಮ್ಮತಿಯಿಂದ, ಒಪ್ಪಿಗೆಯಿಂದ ಮಾತ್ರ ತಾಯ್ತನವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಬಹುದು. ಹೆಣ್ಣಾಗಿ ಹುಟ್ಟಿದ ಮೇಲೆ ತಾಯ್ತನವನ್ನು ಪೂರ್ಣಗೊಳಿಸಿದಾಗಲೇ ಹೆಣ್ಣಿಗೆ ಮುಕ್ತಿಸಿಗುವುದು. ಹೆಣ್ತನ ಪೂರ್ಣವಾಗುವುದೇ ತಾಯ್ತನದಿಂದ ಎಂಬ ನಂಬಿಕೆಯು ಇತ್ತು. ಹೆಣ್ಣಿಗೆ ಹೆರಿರುವ ಈ ನಿರ್ಬಂಧನೆಗಳು ಪುರುಷನಿಗಿರುವುದಿಲ್ಲ. ಅವಳು ತಾಯ್ತನವನ್ನೂ ಪಡೆದಾಗ ಕುಟುಂಬದಲ್ಲಿ ವಿಶೇಷವಾದ ಗೌರವಗಳು ಸಿಗುತ್ತವೆ.

ಹುಟ್ಟಿದ ಮಕ್ಕಳ ಸೇವೆಯನ್ನೂ ಮಾಡುವಲ್ಲಿ ಸಂತೃಪ್ತಿಯನ್ನು ಪಡೆದುಕೊಳ್ಳುತ್ತಾಳೆ. ಆಗ ಅದರಿಂದ ಅವಳಿಗಾಗುವ ಆನಂದ ಸಂಭ್ರಮ ಹೆಚ್ಚಾಗಿ ಕಂಡುಬರುತ್ತದೆ. ಈ ರೀತಿಯ ಸೇವೆಗಳನ್ನು ಮಾಡಿಕೊಂಡು ಜೀವಿಸುವುದರಿಂದ ಹೆಣ್ಣಿಗೆ ತಾಯ್ತನವು ವರವಾಗಿ ಪರಿಣಮಿಸಿದೆ. ಆದರೆ ಪಿತೃಪ್ರಧಾನ ವ್ಯವಸ್ಥೆಯ ವಿರುದ್ಧ ಚಳುವಳಿಕಾರರು ತಾಯ್ತನವನ್ನು ವರವೆಂದು ಭಾವಿಸುವುದಿಲ್ಲ. ಏಕೆಂದರೆ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಗೆ ತಾಯ್ತನದ ಪಟ್ಟವನ್ನು ಕಟ್ಟಿ ಅವಳನ್ನು ಶೋಷಣೆಯೆಡೆಗೆ ತಳ್ಳುತ್ತಾರೆ ಎನ್ನುವುದು ಮಹಿಳಾ ಚಳುವಳಿಕಾರರ ವಾದವಾಗಿದೆ. ಮಹಿಳೆಯರಿಗೆ ತಾಯ್ತನದ ನೆಪದಲ್ಲಿ ಅವಳ ಶೀಲ ಮತ್ತು ಪಾತಿವ್ರತ್ಯದ ಮೇಲೆ ಅಧಿಕಾರವನ್ನು ಚಲಾಯಿಸಲು ಪ್ರಾರಂಭಿಸುತ್ತಾರೆ. ಸಾಮಾಜಿಕವಾಗಿ ಹೆಣ್ಣು ವಿವಾಹಿತಳಾಗಿ ತಾಯ್ತನವನ್ನು ಪಡೆದುಕೊಂಡಾಗ ಮಾತ್ರ ತಾಯ್ತನವು ಅವಳ ಪಾಲಿಗೆ ವರವಾಗಿ ಕಂಡುಬರುತ್ತದೆ.

ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಅವಿವಾಹಿತಳಾಗಿ, ವಿಧವೆಯಳಾಗಿ ತಾಯ್ತನವನ್ನು ಪಡೆದುಕೊಂಡಂತಹ ಸಂದರ್ಭದಲ್ಲಿ ಅವಳಿಗೆ ಶಾಪವಾಗಿ ಪರಿಣಮಿಸುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ

ಹೆಣ್ಣಿನ ತಾಯ್ತನವೇ ಶಾಸ್ತ್ರಕಾರರಿಗೆ ನಿಯಮಗಳನ್ನು ಹೇರಲು ಪ್ರೇರೇಪಿಸಿತು. ಹೆಣ್ಣು ಮನೆಯೊಳಗೆ ಬಂಧಿತಳಾಗಿದ್ದು ಅವಳ ಗರ್ಭಕೋಶದಿಂದಾಗಿ, ಆಕ್ರಮಣಕಾರರು ಬಂದಾಗ ಹೆಣ್ಣು ಮಕ್ಕಳನ್ನು ರಕ್ಷಿಸುವುದೇ ಪುರುಷರಿಗೆ ಒಂದು ದೊಡ್ಡ ಸಮಸ್ಯೆಯಾಗಿತ್ತು. ಇಂತಹ ಸಂದರ್ಭಗಳಿಗೆ ಸಿಲುಕಿಕೊಂಡು ತಾಯ್ತನವನ್ನು ಪಡೆದುಕೊಂಡ ಮಹಿಳೆಯರಿಗೆ ಶಾಪವಾಗಿ ಕಾಣುತ್ತಿತ್ತು.

ಹೆಣ್ಣು ವಿಧವೆಯಳಾಗಿ ಮಕ್ಕಳನ್ನು ಪಡೆಯುವಂತಿರಲಿಲ್ಲ. ಹಾಗೇನಾದರೂ ಪಡೆದುಕೊಂಡಲ್ಲಿ ತಾಯ್ತನವು ಶಾಪವಾಗಿದೆ ಎಂದು ತಿಳಿದುಕೊಳ್ಳುತ್ತಿದ್ದಳು. ಅವಿವಾಹಿತಳಾಗಿ ಮಕ್ಕಳನ್ನು ಪಡೆದುಕೊಂಡಾಗ ಮತ್ತು ಅತ್ಯಾಚಾರಕ್ಕೆ ಒಳಗಾಗಿ ತಾಯ್ತನವನ್ನು ಪಡೆದಂತಹ ಸಂದರ್ಭಗಳಲ್ಲಿ ಹೆಣ್ಣಿಗೆ ಶಾಪವಾಗಿ ಕಂಡುಬರುತ್ತಿತ್ತು. ಯಾಕೆಂದರೆ ಅತ್ಯಾಚಾರಕ್ಕೆ ಒಳಗಾದ ಮಹಿಳೆಯನ್ನು ಸಾಮಾಜಿಕವಾಗಿ ಅನೇಕ ನಿಂದನೆಗಳಿಗೆ ಗುರಿಪಡಿಸಿ ಅವಳನ್ನು ಬಲಿಪಶುವನ್ನಾಗಿ ಮಾಡಿ ಅವಳ ಗರ್ಭಾಶಯವನ್ನು ಶಂಕಿಸಿ ವಿವಾಹವಾಗದೆ ತಾಯ್ತನವನ್ನು ಪಡೆದುಕೊಂಡಿದ್ದಾಳೆ ಎಂದು ನೀಚ ಮಾತುಗಳಿಂದ ಬೈಯುತ್ತಿದ್ದುದನ್ನು ಸಹಿಸಿಕೊಳ್ಳದೆ ಇರುವಂತಹ ಸಂದರ್ಭಗಳಲ್ಲಿ ಹೆಣ್ಣು ತಾಯ್ತನವು ಶಾಪವಾಗಿ ಅವಳ ಜೀವನದ ಎಲ್ಲ ಆಸೆ, ಆಕಾಂಕ್ಷೆಗಳು ನಾಶವಾಗಿ ಬಿಡುತ್ತವೆ. ಇಂತಹ ಪ್ರಸಂಗಗಳಲ್ಲಿ ತಾಯ್ತನವು ನಮಗೆ ಶಾಪವಾಗಿದೆ ಎಂದು ಹೇಳುವವರು ಕಂಡುಬರುತ್ತಾರೆ.

ಈ ರೀತಿಯಾಗಿ ಹೆಣ್ಣಿನ ಮೇಲೆ ಆಗಿರುವಂತ ಅತ್ಯಾಚಾರವನ್ನು ಸಮಾಜವು ಕಂಡು ಅವಳು ಸಾಮಾಜಿಕವಾಗಿ ಯಾವುದೇ ತಪ್ಪನ್ನು ಮಾಡಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯಾದರೂ ಸಹ ಅವಳನ್ನು ನಿಂದಿಸುತ್ತಾರೆ.

ಒಟ್ಟಿನಲ್ಲಿ ಹೆಣ್ಣಿನ ಜೀವನದಲ್ಲಿ ಆಗುವಂತ ಅಚಾನಕ ಘಟನೆಗಳನ್ನು ಪುರುಷ ಪ್ರಧಾನರು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಆದುದರಿಂದ ಈ ರೀತಿಯ ಘಟನೆಗಳಿಗೆ ಮಹಿಳಾ ಚಳುವಳಿಕಾರರು ಸ್ಪಂದಿಸಿ ಹೆಂಗಸಿನ ಬದುಕಿನಲ್ಲಿ ನಡೆಯುವ ದುರಂತಗಳಿಗೆ ವಿರುದ್ಧವಾಗಿ ಹೋರಾಡಿ ಅವರಿಗೆ ನ್ಯಾಯವನ್ನು ಕಲ್ಪಿಸಿಕೊಡುವುದರ ಪರವಾಗಿ ಹೋರಾಟಗಳನ್ನು ಮಾಡುವಲ್ಲಿ ಮುಂದಾಗುತ್ತಾರೆ. ಹಲವಾರು ಸಮಸ್ಯೆಗಳಿಗೆ ಹೋರಾಟ ಮಾಡಿದರೂ, ಅದರಲ್ಲಿ ಕೆಲವೊಂದು ಸಮಸ್ಯೆಗಳಿಗೆ ಯಶಸ್ಸನ್ನು ಕಂಡಿರುವುದು ಕೆಲವೊಂದು ಮೂಲಗಳಿಂದ ಗೋಚರವಾಗುತ್ತದೆ.

ಹೀಗೆ ಮಹಿಳಾ ಚಳುವಳಿಕಾರರು ಆಸ್ತಿಯ ಹಕ್ಕು, ವಿವಾಹದ ಹಕ್ಕು, ಅತ್ಯಾಚಾರದ ಹಕ್ಕು, ಕುಟುಂಬ ನಿಯಂತ್ರಣದ ಹಕ್ಕು, ದತ್ತು ತೆಗೆದುಕೊಳ್ಳುವ ಹಕ್ಕು ಈ ಎಲ್ಲ ಹಕ್ಕುಗಳ ಪರವಾಗಿ ಹೋರಾಡಿ ಇವುಗಳಲ್ಲಿ ಕೆಲವೊಂದನ್ನು ಮಾತ್ರ ಹಕ್ಕುಗಳಾಗಿ ಪಡೆದುಕೊಂಡಿರುವುದು ತಿಳಿದು ಬರುತ್ತದೆ ಎಂದು ಹೇಳಲಾಗಿದೆ.

ಅಡಿಟಿಪ್ಪಣಿಗಳು

೧. ಡಾ.ಗಾಯತ್ರಿ ನಾವಾಡ, ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು, ಸಿರಿಪ್ರಕಾಶನ ಹೊಸಪೇಟೆ, ೧೯೯೯, ಪು.೯೮

೨. ಡಾ.ಛಾಯದಾತರ್, ಸ್ತ್ರೀ ಮತ್ತು ಪುರುಷ, ಸರಸ್ವತಿ ರಿಸಬೂಡ(ಅನು), ಇಳಾಪ್ರಕಾಶನ, ಚಾಮರಾಜಪೇಟೆ, ಬೆಂಗಳೂರು ೧೯೯೨, ಪು.೧೦೦

೩. ಅದೇ, ಪು.೧೧೦

೪. ಸಂ.ಡಾ.ಅರವಿಂದ ಮಾಲಗತ್ತಿ, ಡಾ.ಅಂಬೇಡ್ಕರ್ ವಿಚಾರಧಾರೆ, ಕರ್ನಾಟಕ ಸರ್ಕಾರ, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೧

೫. ಡಾ.ಛಾಯದಾತರ್, ಪೂರ್ವೋಕ್ತ ಪು.೧೧೭

೬. ಅದೇ, ಪು.೧೧೮

೭. ಡಾ.ಎಚ್.ತಿಪ್ಪೇರುದ್ರಸ್ವಾಮಿ, ಗಾಂಧೀ ವಿಚಾರಮಾರ್ಗ, ಗಾಂಧೀಭವನ, ಮಾನಸ ಗಂಗೋತ್ರಿ, ಮೈಸೂರು, ೧೯೭೦, ಪು.೮೦

೮. ಡಾ.ಪ್ರೀತಿ ಶುಭಚಂದ್ರ, ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨, ಪು.೨೮೯

೯. ಅದೇ,

೧೦. ಡಾ.ಪ್ರೀತಿ ಶುಭಚಂದ್ರ, ಪೂರ್ವೋಕ್ತ ಪು.೨೯೧

೧೧. ಗೀತಾ ಕೃಷ್ಣಮೂರ್ತಿ, ಮಹಿಳೆ ಕಾನೂನು ಮತ್ತು ರಾಜಕಾರಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು.೩೨

೧೨. ಅದೇ, ಪು.೩೩

೧೩. ಮಹೇಶ ತಿಪ್ಪಶೆಟ್ಟಿ, ಸಾಮಾಜಿಕ ಆಲೋಚನೆ, ದಾಳಂಬ ಪ್ರಕಾಶನ, ಹುನಗುಂದ-೫೮೭೧೧೮, ೧೯೯೫, ಪು.೯೬

೧೪. ಡಾ.ಆರ್.ಇಂದಿರಾ, ಮಹಿಳೆ : ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨, ಪು.೮೨

೧೫. ಡಾ.ಬಿ.ಎಂ.ರೋಹಿಣಿ, ಸ್ತ್ರೀ ಸಂವೇದನೆ, ಹೇಮಾಂಗು ಪ್ರಕಾಶನ, ದೇರೆಬೈಲು, ಮಂಗಳೂರು - ೫೭೫೦೦೬, ೧೯೯೫

೧೬. ಡಾ.ಎಚ್.ಎಸ್.ಶ್ರೀಮತಿ, ಗರ್ಭಾಶಯ, ಮಹಿಳೆಯ ಶಕ್ತಿಕೇಂದ್ರ ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ೨೦೦೨

# ಉಪಸಂಹಾರ

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಪುರುಷರು ಸ್ತ್ರೀಯರನ್ನು ಶೀಲದ ನೆಪದಲ್ಲಿ ಶೋಷಿಸುವುದು ಕಂಡುಬರುತ್ತದೆ. ಸ್ತ್ರೀಯಾದವಳು ಹೀಗೆ ಇರಬೇಕು. ಹೀಗೆ ಇರಬಾರದು ಎನ್ನುವ ನಿರ್ಬಂಧನೆಯನ್ನು ಹೇರಿ ಅವಳನ್ನು ಸಾಮಾಜಿಕ ಸಂಸ್ಥೆಯಲ್ಲಿ ಬಂಧಿಸಿಟ್ಟಿದ್ದಾರೆ. ಅವಳಿಗೆ ಸರಿಯಾದ ಶಿಕ್ಷಣವನ್ನು ಕೊಡದೆ ಕುಟುಂಬದಲ್ಲಿ ಲಿಂಗತಾರತಮ್ಯವನ್ನು ಮಾಡುತ್ತಾರೆ. ಸಾಮಾಜಿಕವಾಗಿಯೂ ಅವಳಿಗೆ ಯಾವುದೇ ಬಗೆಯ ಸಮಾನತೆಯ ಹಕ್ಕುಗಳು ಇಲ್ಲದಿರುವುದು ಕಂಡುಬರುತ್ತದೆ. ಅಧಿಕಾರವಲಯ ಹಾಗೂ ರಾಜಕೀಯ ವಲಯವನ್ನು ಗಮನಿಸಿದಾಗ ಮಹಿಳೆಯರು ಕೇವಲ ಬೆರಳೆಣಿಕೆಯಷ್ಟು ಮಾತ್ರ ಸ್ಥಾನಗಳನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ.

ನಿಸರ್ಗಸಹಜದಲ್ಲಿ ತಾಯ್ತನವು ಹೆಣ್ಣಿಗೆ ಕೆಲವು ಸಂದರ್ಭಗಳಲ್ಲಿ ಶಾಪವಾಗಿ ಕಂಡುಬಂದಿದೆ ಎನ್ನುವ ಸಾಮಾಜಿಕ ಗ್ರಹಿಕೆಯು ಗೋಚರಿಸುತ್ತದೆ. ನಿಸರ್ಗ ಸಹಜವಾಗಿ ಹೆಣ್ಣು ತಾಯ್ತನವನ್ನು ಪಡೆದುಕೊಂಡಲ್ಲಿ ಸಾಮಾಜಿಕವಾಗಿ ಮಾನಸಿಕವಾಗಿ ಒತ್ತಡವು ಇರುತ್ತದೆ. ಪಿತೃಪ್ರಧಾನ ಸಂಸ್ಕೃತಿಯಲ್ಲಿ ಹೆಣ್ಣಿಗೆ ನೈಸರ್ಗಿಕ ತಾಯ್ತನವು ತಿರಸ್ಕೃತಗೊಂಡ ತಾಯ್ತನವಾಗಿತ್ತು. ಸಮಾಜಬಾಹಿರ ತಾಯ್ತನವನ್ನು ಪಡೆದುಕೊಂಡಂತೆ ಕಂಡುಬರುತ್ತದೆ. ಆದುದರಿಂದ ಅವಳು ಸಮಾಜವು ನಿರ್ಮಿಸಿದ ನಿಯಮಗಳಡಿಯಲ್ಲಿಯೇ ಜೀವಿಸಬೇಕಾಗುತ್ತಿತ್ತು. ಈ ನಿಯಮಗಳನ್ನು ಉಲ್ಲಂಘನೆ ಮಾಡಿ ತಾಯ್ತನವನ್ನು ಪಡೆದುಕೊಳ್ಳುವಂತಿರಲಿಲ್ಲ.

ಸ್ತ್ರೀಯನ್ನು ಪುರುಷ ಪ್ರಧಾನರೊಂದೆ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಶೋಷಣೆ ಮಾಡುತ್ತಿರಲಿಲ್ಲ. ಅವಳನ್ನು ಕೆಲವೊಂದು ಶಾಸ್ತ್ರಗ್ರಂಥಗಳಲ್ಲಿಯೂ ಸಮಾನತೆಯ ಭಾವನೆಯಿಂದ ಕಾಣುವುದು ಕಂಡುಬರುವುದಿಲ್ಲ.

ಮನುವು ಒಂದು ಕಡೆ ಸ್ತ್ರೀಯರನ್ನು ಪೂಜ್ಯಭಾವನೆಯಿಂದ ಕಂಡು 'ಯತ್ರನಾರ್ಯಸ್ತು ಪೂಜ್ಯಂತೆ, ರಮಂತೆ, ತತ್ರದೇವತಃ' ಎಂದು ಎಲ್ಲಿ ನಾರಿಯರು ವಾಸಿಸಿರುತ್ತಾರೊ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ ಎಂದು ಸ್ತ್ರೀಯನ್ನು ಗೌರವಿಸಿ ಮತ್ತೊಂಡು ಕಡೆ ರೂಪೇಶುಲಕ್ಷ್ಮಿ, ಶಯನೇಶುರಂಭ, ಭೋಜ್ಯೇಶು ಮಾತ ಎಂದ ಈ ರೀತಿಯಾಗಿ ಸ್ತ್ರೀಯರನ್ನು ಹೀನವಾಗಿ ಕಂಡಿರುವುದು ತಿಳಿದುಬರುತ್ತದೆ.

ಸ್ತ್ರೀಯರಿಗೆ ಕುಟುಂಬದಲ್ಲಿ ಸರಿಯಾದ ಶಿಕ್ಷಣವನ್ನು ಕೊಡಿಸಬೇಕು ಮತ್ತು ಪುರುಷ ಸರಿಸಮಾನವಾಗಿ ಬೆಳೆಸಬೇಕು. ಕುಟುಂಬದಲ್ಲಿ ಲಿಂಗತಾರತಮ್ಯತೆಯ ಭಾವನೆಯನ್ನೂ ತೊರೆಯಬೇಕು. ಆಗ ಅವಳಿಗೆ ಕೆಲವೊಂದು ಅಧಿಕಾರ ಕ್ಷೇತ್ರಗಳಲ್ಲಿ ಭಾಗವಹಿಸಲು ಇಷ್ಟಪಡುತ್ತಾಳೆ. ಅವಳಿಗೆ ಕೊಡಿಸಿರುವ ಶಿಕ್ಷಣವು ಅವಳ ಬೆನ್ನೆಲುಬಾಗಿ ಧೈರ್ಯವನ್ನು ತಂದುಕೊಂಡುತ್ತದೆ.

ಪಿತೃಪ್ರಧಾನ ಸಮಾಜದಲ್ಲಿ ವಿವಾಹಿತ ಹೆಣ್ಣು ತಾಯ್ತನವನ್ನು ಪಡೆದುಕೊಳ್ಳುವುದು ತಡವಾಗಿ ಕಂಡುಬಂದರೆ ಅಥವಾ ಪಡೆಯದೆ ಇದ್ದರೆ, ಅವಳನ್ನು ಸಾಮಾಜಿಕ ನಿಂದನೆಗಳಿಗೆ ಗುರಿಪಡಿಸುತ್ತಾರೆ. ಬಂಜೆ ಎನ್ನುವ ಪಟ್ಟಕಟ್ಟಿ ಹೀಯಾಳಿಸುತ್ತಾರೆ. ಅದೇ ಹೆಣ್ಣು ವಿವಾಹವಾದ ವರ್ಷಾಂತ್ಯದಲ್ಲಿ ತಾಯ್ತನವನ್ನೂ ಪಡೆದುಕೊಳ್ಳುವ ಲಕ್ಷಣಗಳು ಕಾಣಿಸಿಕೊಂಡರೆ ಅಂದಿನಿಂದಲೇ ಅವಳಿಗೆ ಮಾರ್ಯದೆಗಳು ಹೆಚ್ಚಾಗುತ್ತವೆ. ಇದೇ ತಾಯ್ತನವನ್ನು ಅವಿವಾಹಿತ ಹೆಣ್ಣು ಪಡೆದುಕೊಂಡರಂತೂ ಸಮಾಜದಲ್ಲಿ, ಕುಟುಂಬದಲ್ಲಿ, ಸಾರ್ವಜನಿಕವಲಯದಲ್ಲಿ ಯಾವುದೇ ರೀತಿಯ ಗೌರವಗಳು ಮತ್ತು ಕಾನೂನಿನ ಸಹಾಯವಿಲ್ಲದಂತೆ ಕೀಳಾಗಿ ಕಾಣುವುದು ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಕಂಡುಬರುತ್ತದೆ.

ವಿವಾಹದ ನಂತರ ಎಷ್ಟು ಮಕ್ಕಳನ್ನು ಪಡೆಯಬೇಕು ಯಾವಾಗ ಪಡೆಯಬೇಕು ಎನ್ನುವುದನ್ನು ಪುರುಷರೇ ನಿರ್ಣಯಿಸುತ್ತಿದ್ದರು. ಮಕ್ಕಳನ್ನು ಪಡೆದ ನಂತರ ಕುಟುಂಬ ನಿಯಂತ್ರಣವನ್ನು ಮಾಡಿಸಿಕೊಳ್ಳುವ ಉಂಟಾಗಿ ಸಂತಾನಹರಣ ಚಿಕಿತ್ಸೆಯನ್ನು ಯಾರು ಮಾಡಿಸಿಕೊಳ್ಳಬೇಕು ಎನ್ನುವ ಪ್ರಶ್ನೆಗಳು ಉದ್ಭವವಾಗುತ್ತವೆ. ಸಂತಾನಹರಣ ಚಿಕಿತ್ಸೆಯು ಪುರುಷರಿಗೆ ಸುಲಭವಾದರೂ ಅದನ್ನು ಮಹಿಳೆಯರಿಗೆ ಮಾಡಿಸುವಲ್ಲಿ ಹಿಂಜರಿಯುವುದಿಲ್ಲ. ಪುರುಷರು ಈ ಚಿಕಿತ್ಸೆಯನ್ನು ಮಾಡಿಸಿಕೊಂಡರೆ, ದೈಹಿಕವಾಗಿ ಬಲಹೀನರಾಗಿರುತ್ತಾರೆ ಮತ್ತು ಭಾರವಾದ ಕೆಲಸಗಳಲ್ಲಿ ತೊಡಗಲು ಸಾಧ್ಯವಾಗುವುದಿಲ್ಲ ಎಂಬ ನಂಬಿಕೆಯಿಂದ ಪುರುಷರು ಸಂತಾನಹರಣ ಚಿಕಿತ್ಸೆಯನ್ನು ಮಾಡಿಸಿಕೊಳ್ಳುತ್ತಿರಲಿಲ್ಲ.

ಸ್ತ್ರೀಯರಿಗೆ ಗರ್ಭನಿರೋಧವನ್ನು ಮಾಡಬೇಕಾದರೆ ಗುಳಿಗೆಗಳನ್ನು, ಕ್ವಿನಾಕ್ರಾನ್‌ನಂತಹ ವಿಷಕಾರಿ ಚುಚ್ಚುಮದ್ದುಗಳನ್ನು ಬಲವಂತವಾಗಿ ಮಹಿಳೆಯರಿಗೆ ಉಪಯೋಗಿಸುವಂತೆ ಸರ್ಕಾರವು ಒತ್ತಡವನ್ನು ಹೇರುತ್ತಿದೆ. ಪ್ರಭುತ್ವವೆ ಮಹಿಳೆಯರ ಮೇಲೆ ಮತ್ತು ಅವಳ ತಾಯ್ತನದ ಗರ್ಭಾಶಯದ ಶಕ್ತಿಕೇಂದ್ರದ ಮೇಲೆ ತುಂಬಾ ಒತ್ತಡವನ್ನು ಹೇರುತ್ತಿದೆ. ಗರ್ಭಾಶಯಕ್ಕೆ ಸಂಬಂಧಪಟ್ಟಂತ ಯಾವುದೇ ಒಂದು ಚುಚ್ಚುಮದ್ದಾಗಲಿ, ಮಾತ್ರೆಯಾಗಲಿ ಮಾರುಕಟ್ಟೆಗೆ ತರಬೇಕಾದರೆ ಅದನ್ನು ಮೊದಲು ಮಹಿಳೆಯರ ಮೇಲೆ ಪ್ರಯೋಗ ಮಾಡುತ್ತಿದ್ದರು. ಪುರುಷರು ಸ್ತ್ರೀಯರಿಗೆ ಏನಾದರೂ ಆಗಲಿ ಪರವಾಗಿಲ್ಲ ನಮಗೆ ಏನು ಆಗಬಾರದು ಎನ್ನುವ ಮನೋ ಭಾವನೆಯನ್ನು ಹೊಂದಿದ್ದರು.

ಪುರುಷ ಪ್ರಧಾನರು ವಿವಾಹಿತ ಮಹಿಳೆಯರಿಗೆ ಆಸ್ತಿಯಲ್ಲಿ ಸಮಾನವಾದ ಹಕ್ಕನ್ನು ಕೊಡುತ್ತಿರಲಿಲ್ಲ. ಇದನ್ನು ಮನಗಂಡ ಸ್ತ್ರೀವಾದಿ ಚಿಂತಕರು ಸ್ತ್ರೀಯರಿಗೆ ಆಸ್ತಿಯಲ್ಲಿ ಹಕ್ಕು ಇರಬೇಕು ಎಂದು ತಮ್ಮ ಹೋರಾಟವನ್ನು ಮುಂದುವರೆಸಲು ಪ್ರಾರಂಭಿಸಿದರು.

ಹೆಣ್ಣು ಕೊಟ್ಟ ಮನೆಗೆ ತೆರಳುವವಳು, ಅವಳಿಗೇಕೆ ಆಸ್ತಿ ಎನ್ನುವ ರೀತಿಯಲ್ಲಿ ಪುರುಷರು ಮನಗಂಡಿದ್ದರು. ಇದಕ್ಕೆ ವಿರುದ್ಧವಾಗಿ ಸ್ತ್ರೀಯರು ನಮಗೂ ಆಸ್ತಿಯಲ್ಲಿ ಸಮಪಾಲು ಇರಬೇಕು.

ಜೊತೆಗೆ ವಂಶಾಭಿವೃದ್ಧಿಯ ಹಕ್ಕು ಕೂಡ ಇರಬೇಕು ಎಂದು ವಾದಿಸಿದರು. ವಂಶಾಭಿವೃದ್ಧಿಯು ಗಂಡು ಮಗುವಿನಿಂದ ಮಾತ್ರ ಸಾಧ್ಯ ಏಕೆಂದರೆ, ಯಜಮಾನಿಕೆಯನ್ನು, ಆಸ್ತಿಯನ್ನು ನೋಡಿಕೊಳ್ಳುವ ಶಕ್ತಿ ಪುರುಷನಲ್ಲಿ ಹೆಚ್ಚಾಗಿ ಕಂಡುಬರುತ್ತಿರುತ್ತದೆ. ಆದುದರಿಂದ ವಂಶಾಭಿವೃದ್ಧಿಯ ಹಕ್ಕು ಪುರುಷನಿಗೆ ಮೀಸಲು ಸ್ತ್ರೀಯರಿಗೆ ವಂಶಾಭಿವೃದ್ಧಿಯಲ್ಲಿ ಯಾವುದೇ ಹಕ್ಕು ಬಾಧ್ಯತೆಗಳಿಲ್ಲ ಎನ್ನುವ ರೀತಿಯಲ್ಲಿ ಪುರುಷರು ಕಾಣುತ್ತಿರುತ್ತಾರೆ. ವಂಶಾಭಿವೃದ್ಧಿಯ ಹಕ್ಕಿನ ಪರವಾಗಿ ಸ್ತ್ರೀವಾದಿಗಳು ಮಹಿಳಾ ಸಂಘಟನೆಕಾರರು, ಮಹಿಳಾ ಚಳುವಳಿಕಾರರು ಇದರ ಪರವಾಗಿ ಹೋರಾಟ ಮಾಡುತ್ತ ವಿವಾಹದ ಆಯ್ಕೆಯಲ್ಲಿಯೂ ಸ್ತ್ರೀಯರಿಗೆ ಹಕ್ಕು ಇರಬೇಕು. ವಿವಾಹದ ನಂತರ ಜೀವಿತಾಂತರವಾಗಿ ಅವನ ಹತ್ತಿರ ಕೂಡಿ ಜೀವಿಸುವವಳು ಹೆಣ್ಣು ಅದುದರಿಂದ ವಿವಾಹದ ಗಂಡನ್ನು ಆಯ್ಕೆ ಮಾಡುವ ಹಕ್ಕು ಹೆಣ್ಣಿಗೆ ಇರಬೇಕು ಎಂಬುದು ಮಹಿಳಾ ಚಿಂತಕಿಯರ ವಾದವಾಗಿದೆ.

ವಂಶಾಬಿವದ್ಧಿಯ ಹಕ್ಕಿನಂತೆ ದತ್ತು ತೆಗೆದುಕೊಳ್ಳುವ ಹಕ್ಕು ಇರಬೇಕು. ಹಿಂದೂ ಸಂಪ್ರದಾಯದಂತೆ ದತ್ತು ತೆಗೆದುಕೊಳ್ಳುವ ಹಕ್ಕು ಪರುಷನಿಗೆ ಮಾತ್ರ ಸಂಬಂಧಿಸಿದ್ದು ಸ್ತ್ರೀಯರಿಗೆ ಈ ಹಕ್ಕು ಕೊಡಬೇಕು ಎನ್ನುವುದು ಯಾವ ಧರ್ಮಗ್ರಂಥಗಳಲ್ಲೂ ಕಂಡುಬಂದಿಲ್ಲ. ಆದುದರಿಂದ ಮಹಿಳಾ ಚಳುವಳಿಕಾರರು, ಚಿಂತಕಿಯರು, ಸಂಘಟನೆಗಳ ಮೂಲಕ ಹಕ್ಕುಗಳ ಪರವಾಗಿ ಪುರುಷ ಚಿಂತನೆಗಳಿಗೆ ವಿರುದ್ಧವಾಗಿ ಹೋರಾಟವನ್ನು ಮಾಡುತ್ತಲಿವೆ.

ಮಹಿಳೆಯರ ಹೋರಾಟಗಳಿಂದ ಕೆಲವೊಂದು ಕಾನೂನುಗಳು ಹೊಸದಾಗಿ ಜಾರಿಗೆ ಬಂದು ಮತ್ತೆ ಕೆಲವೊಂದು ಮೊದಲಿರುವಂತ ಕಾನೂನುಗಳಲ್ಲಿ ತಿದ್ದುಪಡಿಯನ್ನು ಮಾಡಿಸುವಲ್ಲಿ ಯಶಸ್ವಿಯನ್ನೂ ಪಡೆದಿವೆ. ೧೯೨೯ರ ಬಾಲ್ಯವಿವಾಹದ ಕಾನೂನು, ೧೯೫೫ರ ವಿಶೇಷ ವಿವಾಹದ ಹಕ್ಕು(Special Marriage Act 1955) ಸಮಾನ ಕೆಲಸಕ್ಕಾಗಿ ಸಮಾನ ವೇತನದ ಕಾನೂನು ೧೯೭೪(Equal Remuneration Act 1974). ಈ ರೀತಿಯಾಗಿ ಕಾನೂನುಗಳು ಒಂದೊಂದು ಜಾರಿಗೆ ಬಂದಿರುವುದು ಮಹಿಳಾ ಚಳುವಳಿಕಾರರ ನಿರಂತರ ಹೋರಾಟದಿಂದ ಪರಿಶ್ರಮದಿಂದ ಎಂದು ಹೇಳಬಹುದು.

ಮಹಿಳೆಯು ಸಾಮಾಜಿಕ ಚೌಕಟ್ಟಿನೊಳಗೆ ವಿವಾಹವಾಗಿ ಸಮಾಜದ ಎಲ್ಲ ನಿಮಯಗಳಿಗೆ ಬದ್ಧಳಾಗಿ ಕಾರ್ಯನಿರ್ವಹಿಸಿ, ತಾಯ್ತನವು ಪಡೆದಿಲ್ಲ ಎನ್ನುವ ತೊಂದರೆಯನ್ನು ಅನುಭವಿಸುವುದಕ್ಕಿಂತ ಮೊದಲು ತಾಯ್ತನದ ಆಸೆಯು ಈಡೇರಿದಾಗ ಅವಳಿಗೆ ತಾಯ್ತನವು ವರವಾಗಿ ಕಂಡುಬರುತ್ತದೆ.

ವಿವಾಹಿತ ಹೆಣ್ಣೊಬ್ಬಳಿಗೆ ತಾಯ್ತನವನ್ನು ಪಡೆದುಕೊಳ್ಳುವುದು ತಡವಾದರೆ, ಸಮಾಜದಿಂದ ಬಂಜೆ ಎಂದು ಹೀಯಾಳಿಸಿದಾಗ ಮತ್ತು ಅತ್ಯಾಚಾರಕ್ಕೆ ಒಳಗಾಗಿ, ತನಗೆ ಇಷ್ಟವಿಲ್ಲದಂತೆ ತಾಯ್ತನವನ್ನು ಪಡೆದುಕೊಂಡಾಗ ಮತ್ತು ನೈಸರ್ಗಿಕ ತಾಯ್ತನವನ್ನು ಬಯಸಿ ತಾಯ್ತನವನ್ನು ಪಡೆದುಕೊಂಡಾಗ

ಅವಳನ್ನು ಸಮಾಜವು ಕೀಳಾಗಿಕಂಡು ಇವಳು ವಿವಾಹಬಾಹಿರ ಸಂಬಂಧದಲ್ಲಿ ತೊಡಗಿ ತಾಯ್ತನವನ್ನು ಪಡೆದುಕೊಂಡಿದ್ದಾಳೆಂದು ಹೀನವಾಗಿ ಕಂಡಾಗ, ಅವಳಿಗೆ ಯಾವುದೇ ರೀತಿಯ ಸ್ಥಾನಮಾನ ಸಿಗದೆ ಇದ್ದ ಪ್ರಸಂಗದಲ್ಲಿ ಮತ್ತು ಅವರು ಪಡೆದುಕೊಂಡಂತಹ ತಾಯ್ತನಕ್ಕೆ ಪ್ರಭುತ್ವವು ಸಹಾಯಕವಾಗಿರದೆ ಇದ್ದಾಗ ಈ ಎಲ್ಲ ಸಮಸ್ಯೆಗಳನ್ನು ಅನುಭವಿಸಿದಂತ ಅವಿವಾಹಿತ ಹೆಣ್ಣು ಸಮಾಜದಲ್ಲಿ ನೆಮ್ಮದಿಯ ಜೀವನ ಸಾಗಿಸಲು ಅಸಾಧ್ಯವಾದಂತಹ ಸಂದರ್ಭಗಳು ಒದಗಿಬಂದಾಗ ತನ್ನಲ್ಲಿ ತಾನುವ್ಯಥೆ ಪಟ್ಟುಕೊಂಡು ನೈಸರ್ಗಿಕವಾಗಿ ಪಡೆದಿರುವಂತ ತಾಯ್ತನವು ಒಂದು ಶಾಪವಾಗಿ ಕಂಡುಬರುತ್ತದೆ.

## ಕೃತಿ ಸೂಚಿ

೧. ಅಚ್ಚಪ್ಪ ಹೆಚ್.ಎಸ್. ಕನ್ನಡ ಗಾದೆಗಳು, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು, ೧೯೪೪

೨. ತಿಪ್ಪೇರುದ್ರಸ್ವಾಮಿ ಎಸ್., ಗಾಂಧಿವಿಚಾರ ಮಾರ್ಗ, ಗಾಂಧಿಭವನ, ಮಾನಸಗಂಗೋತ್ರಿ, ಮೈಸೂರು, ೧೯೭೦

೩. ಕೌಜಲಗಿ ಪಿ.ಎಸ್., ತಾಯಿ ಮಗು ಶಾರದಾ ಪ್ರಕಾಶನ, ಬೆಳಗಾಂವ, ೧೯೭೯

೪. ಶಂಕರ್ ಪಿ.ಎಸ್., ಮಕ್ಕಳ ಆರೋಗ್ಯ ಜನಾಂಗದ ಭಾಗ್ಯ, ನವಕರ್ನಾಟಕ ಪಬ್ಲಿಕೇಷನ್ಸ್ ಬೆಂಗಳೂರು, ೧೯೮೬

೫. ಮೋಹನ್ ರಾವ್ ಬಿ., ಸಾಮಾಜಿಕ ವ್ಯವಸ್ಥೆ ಮತ್ತು ಸಾಮಾಜಿಕ ಬದಲಾವಣೆ, ವಿಜಯ ಬುಕ್ ಡಿಪೋ, ಗದಗ, ೧೯೮೭

೬. ಭಟ್ಟ ಜಿ.ಎಸ್., ಜನಪದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ, ಅಕಾಡೆಮಿ, ನೃಪತುಂಗರಸ್ತೆ, ಬೆಂಗಳೂರು, ೧೯೯೧

೭. ಡಾ.ಅರವಿಂದ ಮಾಲಗತ್ತಿ, ಡಾ.ಅಂಬೇಡ್ಕರ್ ವಿಚಾರದಾರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೧

೮. ಅನುಪಮಾ ನಿರಂಜನ, ಕೇಳು, ಕಿಶೋರಿ, ಡಿ.ವಿ.ಕೆ ಮೂರ್ತಿ ಕೃಷ್ಣಮೂರ್ತಿಪುರಂ, ಮೈಸೂರು, ೧೯೯೨

೯. ಸರಸ್ವತಿ ರಿಸಬೂಡ(ಅನು), ಸ್ತ್ರೀ-ಪುರುಷ, ಡಾ.ಛಾಯದಾತರ್(ಮೂಲ), ಇಳಾಪ್ರಕಾಶನ, ಚಾಮರಾಜ ಪೇಟೆ, ಬೆಂಗಳೂರು, ೧೯೯೨

೧೦. ರೋಹಿಣಿ ಬಿ.ಎಂ., ಸ್ತ್ರೀ ಸಂವೇದನೆ, ಹೇಮಾಂಶು ಪ್ರಕಾಶನ ದೇರೆಬೈಲು, ಮಂಗಳೂರು, ೧೯೯೫

೧೧. ಮಹೇಶ ತಿಪ್ಪಶೆಟ್ಟಿ, ಸಾಮಾಜಿಕ ಆಲೋಚನೆ, ದಾಳಿಂಬ ಪ್ರಕಾಶನ, ಹುನಗುಂದ, ೧೯೯೫

೧೨. ರುದ್ರಮೂರ್ತಿಶಾಸ್ತ್ರಿ, ಸಾವಿರಾರು ಗಾದೆಗಳು, ಭಾಗ್ಯಲಕ್ಷ್ಮೀ ಪ್ರಕಾಶನ, ಬೆಂಗಳೂರು, ೧೯೯೬

೧೩. ಚಂದ್ರಮೌಳಿ ಎ.ಎಸ್., ಜನಸಂಖ್ಯೆ ಒಂದು ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೬

೧೪. ಭೈರಪ್ಪ ಕೆ., **ಭಾರತೀಯ ಸಮಾಜ,** ಕೇಂಬ್ರಿಡ್ಜ್ ಪಬ್ಲಿಷಿಂಗ್ ಕಂಪನಿ, ಬೆಂಗಳೂರು, ೧೯೯೭

೧೫. ಸಿದ್ಧಲಿಂಗಯ್ಯ, **ಗ್ರಾಮದೇವತೆಗಳು,** ಮೂಲಭಾರತಿ ಪ್ರಕಾಶನ, ಬೆಂಗಳೂರು, ೧೯೯೭

೧೬. ಅಂದನೂರು ಶೋಭ, **ಶ್ರೀಲಕ್ಷ್ಮೀ - ಮಹಿಳೆಯ ಮುನ್ನಡೆ,** ಮಾನಿನಿ ಪ್ರಕಾಶನ, ರಾಜಾಜಿನಗರ ಬೆಂಗಳೂರು, ೧೯೯೮

೧೭. ಗೀತಾಬಾಲಿನಾಯಕ್, **ಕನ್ನಡ ಕಥನ ಸಾಹಿತ್ಯ ನಿರ್ವಚನ** ಪಿ.ಎಚ್.ಡಿ ಅಪ್ರಕಟಿತ ಮಹಾಪ್ರಬಂಧ, ೧೯೯೯

೧೮. ಗಾಯತ್ರಿ ನಾವಡ, **ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು,** ಸಿರಿ ಪ್ರಕಾಶನ, ಹೊಸಪೇಟೆ, ೧೯೯೯

೧೯. ಗಿರೀಶ್ ಕಾರ್ನಾಡ್‌ರ, **ನಾಗಮಂಡಲ,** ಚಲನಚಿತ್ರ, ೧೯೯೯

೨೦. ರೋಹಿಣಿ ಬಿ.ಎಂ., **ಸ್ತ್ರೀ-ಶಿಕ್ಷಣ-ಸಂಸ್ಕೃತಿ,** ಹೇಮಾಂಶು ಪ್ರಕಾಶನ, ಮಂಗಳೂರು, ೨೦೦೦

೨೧. ವೆಂಕಟೇಶಮೂರ್ತಿ, ಎಚ್.ಎಸ್., **ಶತಮಾನದ ಕಾವ್ಯ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧

೨೨. ಡಾ.ಕೆ.ವಿ.ನಾರಾಯಣ (ಅನು) **ಪ್ರೀತಿಸುವುದೆಂದರೆ.......** ಮೂಲ: ಎರಿಕ್ ಫ್ರಾಂನ್, ಲವಿಂಗ್ ಆಫ್ ಆರ್ಟ್, ಅಭಿನವ ಪ್ರಕಾಶನ, ರಾಜಾಜಿನಗರ ಬೆಂಗಳೂರು, ೨೦೦೧

೨೪. ಗೀತಾ ಕೃಷ್ಣಮೂರ್ತಿ, **ಮಹಿಳೆ ಕಾನೂನು ಮತ್ತು ರಾಜಕಾರಣ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೧

೨೫. ಸರೋಜ ಕೆ., **ಮಹಿಳೆ ಮತ್ತು ಆರೋಗ್ಯ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೧

೨೬. ಇಂದಿರಾ ಆರ್. **ಮಹಿಳೆ : ಸಮಾಜ ಮತ್ತು ಸಂಸ್ಕೃತಿ,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೨

೨೭. ಪ್ರೀತಿಶುಭಚಂದ್ರ, **ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೨

**English Reforence Books**

1. RaJkumar, **Encyalopaedia of Women and Development Women and Science,** Vol.8,9,12,13,17,18, 20 Anmal Publications Pvt.Ltd New Delhi, 2000
2. Rajkumar, Rameshwari Devi, Romilapruthie, **Status & Position of Women in Ancient Medieval and Modern India,** 2001

3. Jain Kalpaz, **Encyalopaedia of Indian Women through the ages Vol-I,** Ancient India-semni Publication, Delhi, 2003

ನಿಯತಕಾಲಿಕೆಗಳು

೧. ಮಹಿಳಾ ಅಧ್ಯಯನ, ದಕ್ಷಿಣಾಯನ ಸಂಚಿಕೆ, ಸಂಪುಟ-೧, ಸಂಚಿಕೆ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೨. ಮಹಿಳಾ ಅಧ್ಯಯನ, ವಿಶೇಷ ಸಂಚಿಕೆ, ದಕ್ಷಿಣಾಯನ ಸಂಚಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೩. ಡಾ.ಎಚ್.ಎಸ್.ಶ್ರೀಮತಿ, ಗರ್ಭಾಶಯ ಮಹಿಳೆಯ ಶಕ್ತಿ ಕೇಂದ್ರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೨

೪. ಕಸ್ತೂರಿ, ತಿಂಗಳ ಮಾಸಿಕ ಪತ್ರಿಕೆ, ಏಪ್ರಿಲ್ ೨೦೦೩

ದಿನಪತ್ರಿಕೆಗಳು

೧. ಉದಯವಾಣಿ, ಮಹಿಳಾ ಸಂಪದ, ಮಾರ್ಚ್ ೧, ೨೦೦೩

೨. ವಿಜಯಕರ್ನಾಟಕ, ಮಹಿಳಾ ವಿಜಯ, ಮಾರ್ಚ್, ೨೦೦೩